ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಸಂಪುಟ-೪

ನಾಲ್ಕನೆಯ ಅಧ್ಯಾಯ (ಫಲಾಧ್ಯಾಯ)

ಪ್ರೊ।। ಎಸ್. ವೆಂಕಟೇಶಮೂರ್ತಿ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಸಂಪುಟ - 4

ನಾಲ್ಕನೆಯ ಅಧ್ಯಾಯ (ಫಲಾಧ್ಯಾಯ)

ಶ್ರೀಮಜ್ಜಯತೀರ್ಥರ ಶ್ರೀಮನ್ನ್ಯಾಯಸುಧಾನುಸಾರಿ

ಕನ್ನಡದಲ್ಲಿ ಅರ್ಥ ಮತ್ತು ವಿವರಣೆ ಸಹಿತ

ರಾಯದುರ್ಗದ ಸಾರ್ವಜನಿಕ ಗ್ರಂಥಾಲಯ
ಬಳ್ಳಾರಿ

ಲೇಖಕರು

ಪ್ರೊ|| ಎಸ್. ವೆಂಕಟೇಶ ಮೂರ್ತಿ, ಎಂ. ಎಸ್‌ಸಿ

ಪವನಜ ಪ್ರಕಾಶನ

ನಂ. 1625, 5 ನೇ ಬಿ ಕ್ರಾಸ್, 17ನೇ ಮುಖ್ಯ ರಸ್ತೆ,

ಎರಡನೆಯ ಬ್ಲಾಕ್, ಬನಶಂಕರಿ ಮೊದಲನೆಯ ಸ್ಟೇಜ್,

ಬೆಂಗಳೂರು 560050 :: ದೂರವಾಣಿ: 6600932

Sri Madhvacharya's

Śrīmadanuvyākhyānam

Part - 4

Rendered in Kannada by:
Prof. S. Venkatesha Murthy, M. Sc.
Published by:
Pavanaja Prakashana,
#1625, 5th 'B' Cross, Second Block, Banashankari
First Stage, Bangalore 560050; Phone: 6600932

First Edition: 2003
Pages: 96
Price: Rs. 30/-

ಶ್ರೀಮನ್ಮಧ್ವಾಚಾರ್ಯ ವಿರಚಿತ

ಶ್ರೀಮದನುವ್ಯಾಖ್ಯಾನಮ್: ಸಂಪುಟ - 4

ಮೊದಲನೆಯ ಮುದ್ರಣ : 2003

ಪುಟಗಳು : 96

ಬೆಲೆ : ರೂ. 30/-

ಮುದ್ರಕರು :
ಪರಿಮಳ ಮುದ್ರಣಾಲಯ,
ಹನುಮಂತನಗರ, ಬೆಂಗಳೂರು 560019

ಮುನ್ನುಡಿ

ಶ್ರೀಮನ್ಮಧ್ವಾಚಾರ್ಯರ ಸರ್ವಮೂಲಗ್ರಂಥಗಳಲ್ಲಿ ಮೇರುಕೃತಿಯಾದ ಹಾಗೂ ಶ್ರೀಮನ್ನ್ಯಾಯಸುಧಾದಂತಹ ಪ್ರಬುದ್ಧವಾದ ಟೀಕಾ ಗ್ರಂಥಕ್ಕೆ ಮೂಲಕಾರಣವಾದ ಶ್ರೀಮದನುವ್ಯಾಖ್ಯಾನ ಗ್ರಂಥಕ್ಕೆ ಕನ್ನಡದಲ್ಲಿ ಅರ್ಥ ವಿವರಣೆಗಳನ್ನು ನೀಡುವಂತಹ ಬಹು ಕಷ್ಟಸಾಧ್ಯವಾದ ಕಾರ್ಯವನ್ನು ಕೈಗೊಳ್ಳುವಂತೆ ಪ್ರೇರಣೆ ನೀಡಿ, ತಾವೇ ನನ್ನೊಳಗೆ ನಿಂತು, ಅಲ್ಪನಾದ ನನ್ನಿಂದ ಈ ಮಹತ್ಕಾರ್ಯವು ಅಲ್ಪ ಕಾಲದಲ್ಲಿಯೇ ಸಮರ್ಥವಾಗಿ ಕೈಗೂಡುವಂತೆ ಅನುಗ್ರಹಿಸಿದ ಶ್ರೀಹರಿವಾಯುಗಳಿಗೆ ಹಾಗೂ ತತ್ವಾಭಿಮಾನಿ ದೇವತೆಗಳಿಗೆ ಭಕ್ತಿಪೂರ್ವಕ ಅನೇಕ ಪ್ರಣಾಮಗಳು. ಕಳೆದ ವರ್ಷ ಶ್ರೀಮಜ್ಜಯತೀರ್ಥರ ಆರಾಧನೆಯ ಸಂದರ್ಭದಲ್ಲಿ ಈ ಗ್ರಂಥದ ಮೊದಲನೆಯ ಅಧ್ಯಾಯವನ್ನೊಳಗೊಂಡ ಪ್ರಥಮ ಸಂಪುಟವು ಬಿಡುಗಡೆಗೆ ಸಿದ್ಧವಾಗಿ ಅನತಿ ಕಾಲ ದಲ್ಲಿಯೇ ಪ್ರಕಟಗೊಂಡು ಜಿಜ್ಞಾಸುಗಳ ಮೆಚ್ಚುಗೆ ಗಳಿಸಿತು. ಈಗ ಶ್ರೀರಾಘವೇಂದ್ರ ಸ್ವಾಮಿಗಳ ಆರಾಧನೆಯ ವೇಳೆಗೆ ಈ ಗ್ರಂಥದ ಅಂತಿಮ ಭಾಗವಾದ ನಾಲ್ಕನೆಯ ಸಂಪುಟವು ಬಿಡುಗಡೆ ಸಿದ್ಧವಾಗಿದ್ದು, ಅದನ್ನು ಜಿಜ್ಞಾಸುಗಳ ಮುಂದಿಡಲು ಬಹಳ ಸಂತೋಷವಾಗುತ್ತಿದೆ. ಒಟ್ಟು ಸುಮಾರು ೯೦೦ ಪುಟಗಳಷ್ಟು ವ್ಯಾಪ್ತಿಯುಳ್ಳ ನಾಲ್ಕು ಸಂಪುಟಗಳ ಈ ಗ್ರಂಥವು ಕೇವಲ ಒಂದು ವರ್ಷದಷ್ಟು ಅಲ್ಪಸಮಯದಲ್ಲಿ ಪೂರ್ಣವಾಗುವುದಕ್ಕೆ ಶ್ರೀಮಧ್ವ–ಮಧ್ವೇಶರ ಅನುಗ್ರಹವೇ ಮುಖ್ಯಕಾರಣವು.

ಈ ನಾಲ್ಕನೆಯ ಸಂಪುಟವು ಶ್ರೀಮದನುವ್ಯಾಖ್ಯಾನದ ನಾಲ್ಕನೆಯ ಅಧ್ಯಾಯದ ಸಮಗ್ರ ಅನುವಾದ. ಫಲಾಧ್ಯಾಯವೆಂದು ಪ್ರಸಿದ್ಧವಾಗಿರುವ ಇದರಲ್ಲಿ ನಾಲ್ಕು ಪಾದಗಳಿವೆ. ಈ ನಾಲ್ಕು ಪಾದಗಳಲ್ಲಿ ಕ್ರಮವಾಗಿ ಕರ್ಮಕ್ಷಯ, ಮಾರ್ಗ, ಉತ್ಕ್ರಾಂತಿ ಹಾಗೂ ಭೋಗಕ್ಕೆ ಸಂಬಂಧಿಸಿದ ವಿಷಯಗಳು ನಿರೂಪಿತವಾಗಿವೆ. ಪ್ರಥಮಪಾದದಲ್ಲಿ ೧೯ ಸೂತ್ರಗಳು ಹಾಗೂ ೮ ಅಧಿಕರಣಗಳಿದ್ದರೆ, ಎರಡನೆಯ ಪಾದದಲ್ಲಿ ೨೨ ಸೂತ್ರಗಳಿಂದ ಕೂಡಿದ ೧೦ ಅಧಿಕರಣಗಳಿವೆ. ಮೂರನೆಯ ಪಾದವು ೧೬ ಸೂತ್ರಗಳು ಹಾಗೂ ೬ ಅಧಿಕರಣಗಳಿಂದ ಕೂಡಿದ್ದರೆ, ನಾಲ್ಕನೆಯ ಪಾದದಲ್ಲಿ ೨೩ ಸೂತ್ರಗಳಿಂದ ಕೂಡಿದ ಒಟ್ಟು ೧೧ ಅಧಿಕರಣಗಳಿವೆ. ಶ್ರೀಮದ ನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರು ಎಲ್ಲ ಅಧಿಕರಣಗಳಿಗೂ ವ್ಯಾಖ್ಯಾನ ರಚಿಸಿಲ್ಲ. ಯಾವ ಯಾವ ಅಧಿಕರಣಗಳಿಗೆ ಹೆಚ್ಚಿನ ಸ್ಪಷ್ಟತೆ ಹಾಗೂ ವಿವರಣೆಗಳು ಅವಶ್ಯಕತೆಯಿದೆಯೋ ಅವುಗಳಿಗೆ ಮಾತ್ರ ವ್ಯಾಖ್ಯಾನ ಮಾಡಿದ್ದಾರೆ. ಮೋಕ್ಷದ ಸ್ವರೂಪಕ್ಕೆ ಸಂಬಂಧಿಸಿದಂತೆ ವಿವಿಧ ಮತಗಳಲ್ಲಿ ಪ್ರಸ್ತಾಪಿತವಾಗಿರುವ ವಿವರಣೆಗಳು

ಎಷ್ಟು ಅಸಂಮಜಸ ಎಂಬುದನ್ನು ಬಹಳ ವಿವರವಾಗಿ ಸ್ಮೃತಿ, ಶ್ರುತಿ ಹಾಗೂ ಯುಕ್ತಿಗಳ ಮೂಲಕ ಅತ್ಯಂತ ಸಮರ್ಥವಾಗಿ ನಿರೂಪಿಸುತ್ತ ಆಯಾ ಮತಗಳನ್ನು ನಿರಾಕರಣೆ ಮಾಡುವ ಶ್ರೀಮದಾಚಾರ್ಯರು, ನಿಜವಾದ ಮೋಕ್ಷಸ್ವರೂಪವೇನು ಎಂಬುದನ್ನು ಬಹಳ ಸುಂದರವಾಗಿ ಇಲ್ಲಿ ಚಿತ್ರಿಸಿದ್ದಾರೆ. ಪರಮಾತ್ಮನ ಪರಮಾ–ನುಗ್ರಹದಿಂದ ಜೀವರ ಸ್ವರೂಪಾನಂದವು ಅವರ ಯೋಗ್ಯತಾನುಸಾರ ಪೂರ್ಣವಾಗಿ ಅಭಿವ್ಯಕ್ತಗೊಳ್ಳುವುದೇ ಮೋಕ್ಷ. ಜೀವರ ಸಾಧನೆಯಲ್ಲಿ ತಾರತಮ್ಯವಿದೆ. ಸಾಧನಾ ತಾರತಮ್ಯಕ್ಕೆ ಅನುಗುಣವಾಗಿ ಮೋಕ್ಷದಲ್ಲಿಯೂ ತಾರತಮ್ಯವಿದೆ. ಅಲ್ಲಿಯೂ ಜೀವೇಶ್ವರರಿಗೆ ಭೇದ, ಎಲ್ಲರಿಗೂ ಶ್ರೀಹರಿಯಿಂದ ನಿಯಮನ, ಉತ್ತಮರಿಗೆ ಅಧಮರ ಮೇಲೆ ಆಧಿಪತ್ಯ, ಮುಕ್ತರಲ್ಲಿ ಪರಸ್ಪರ ದ್ವೇಷಾಸೂಯೆಗಳ ಅಭಾವ, ಇತ್ಯಾದಿ ಪ್ರಮೇಯಗಳು ಇಲ್ಲಿ ಬಹಳ ಸುಂದರವಾಗಿ ನಿರೂಪಿತವಾಗಿವೆ. ಈ ಫಲಾಧ್ಯಾಯದಲ್ಲಿ ಪ್ರತಿಪಾದಿತವಾಗಿರುವ ವಿಷಯಗಳ ಸಂಗ್ರಹವನ್ನು ಈ ಗ್ರಂಥದ ಪ್ರಾರಂಭದಲ್ಲಿ ನೀಡಲಾಗಿರುವ ಅನುಕ್ರಮಣಿಕೆಯಿಂದ ತಿಳಿಯಬಹುದು.

ಈ ಗ್ರಂಥದ ಪ್ರಕಟಣೆಯ ಸಂದರ್ಭದಲ್ಲಿ ನಮ್ಮ ವಿದ್ಯಾಗುರುಗಳಾದ ಪೂಜ್ಯ ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರರಿಗೆ ಗೌರವಾದರಪೂರ್ವಕ ನಮನತತಿಗಳು. ನಮ್ಮ ಎಲ್ಲ ಆಧ್ಯಾತ್ಮಿಕ ಕಾರ್ಯಗಳಿಗೂ ತುಂಬು ಹೃದಯದಿಂದ ಪ್ರೋತ್ಸಾಹ ನೀಡುತ್ತ ಪರಮಾನುಗ್ರಹ ಮಾಡುತ್ತಿರುವ ಉತ್ತರಾದಿಮಠಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರಿಗೂ ಹಾಗೂ ಈಗ ಉಡುಪಿಯ ಪರ್ಯಾಯ ಪೀಠದಲ್ಲಿ ವಿರಾಜಮಾನರಾಗಿರುವ ಪಲಿಮಾರು ಮಠದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರಿಗೂ ನನ್ನ ಭಕ್ತಿಪೂರ್ವಕ ನಮಸ್ಕಾರಗಳು.

ಈ ಗ್ರಂಥದ ಪ್ರಕಟಣೆಯಲ್ಲಿ ಎಲ್ಲ ರೀತಿಯಿಂದಲೂ ಸಹಕರಿಸಿದ ನನ್ನ ಎಲ್ಲ ಹಿತೈಷಿ ಬಂಧುಗಳಿಗೂ ಹಾಗೂ ಮುಖ್ಯವಾಗಿ ಮನೆಯವರಿಗೂ ಕೃತಜ್ಞತೆಗಳು. ಅಂದವಾಗಿ ಮುದ್ರಿಸಿಕೊಟ್ಟಿರುವ ಪರಿಮಳ ಮುದ್ರಣಾಲಯದ ಶ್ರೀಯುತ ಪ್ರಭಾಕರ್ ಅವರಿಗೆ ಕೃತಜ್ಞತೆಗಳು. ಜಿಜ್ಞಾಸುಗಳ ಅಭಿಪ್ರಾಯಗಳಿಗೆ ಹೃತ್ಪೂರ್ವಕ ಸ್ವಾಗತ.

ಬೆಂಗಳೂರು — ಇಂತಿ ಸಜ್ಜನವಿಧೇಯ

ತಾ. ೧೪–೮–೨೦೦೩ — ಎಸ್. ವೆಂಕಟೇಶಮೂರ್ತಿ

ಸುಭಾನು ಸಂವತ್ಸರದ ಶ್ರೀರಾಘವೇಂದ್ರ ಸ್ವಾಮಿಗಳ ಆರಾಧನೆಯಂದು ಸಮರ್ಪಿತವಾದುದು

॥ ಶ್ರೀಕೃಷ್ಣಾರ್ಪಣಮಸ್ತು ॥

ವಿಷಯಾನುಕ್ರಮಣಿಕಾ

ಮೊದಲನೆಯ ಪಾದ ೧ – ೨೦

ಫಲನಿರೂಪಣೆಯಲ್ಲಿ ಸಂಗತಿಯು ೧

ಆವೃತ್ತ್ಯಧಿಕರಣ ೨

ಶ್ರವಣಾದಿಗಳಿಗೆ ಆವೃತ್ತಿಯ ಅವಶ್ಯಕತೆ ೨

ಆತ್ಮಾಧಿಕರಣ ೪

ಆತ್ಮಾ ಎನ್ನುವುದು ಮುಖ್ಯವೃತ್ತಿಯಿಂದ ವಿಷ್ಣುವಿನ ನಾಮ ೪

ವಿಷ್ಣುವನ್ನು ಆತ್ಮಾ, ಸ್ವಾಮಿ ಎಂದು ಉಪಾಸನೆ ಮಾಡಬೇಕು ೪

ನ ಪ್ರತೀಕಾಧಿಕರಣ ೬

ಪ್ರತೀಕದಲ್ಲಿರುವ ವಿಷ್ಣುವೇ ಧ್ಯೇಯನು, ಪ್ರತೀಕವೇ ವಿಷ್ಣುವಲ್ಲ ೬

ಮಿಥ್ಯೋಪಾಸನೆಯು ಅನರ್ಥಕ್ಕೆ ಕಾರಣವು ೭

ಬ್ರಹ್ಮದೃಷ್ಟ್ಯಧಿಕರಣ ೯

ವಿಷ್ಣುವನ್ನು ಬ್ರಹ್ಮತ್ವೇನ ಉಪಾಸನೆ ಮಾಡಬೇಕು ೯

ಆತ್ಮೇತಿ ಸೂತ್ರವು ಈಶನಿಗೆ ಜೀವತ್ವವನ್ನು ಪ್ರತಿಪಾದಿಸುವುದಿಲ್ಲ ೧೦

ಜೀವೇಶ್ವರ ಭೇದವು ಭ್ರಾಂತಿಕಲ್ಪಿತವಲ್ಲ ೧೨

ನ ಪ್ರತೀಕೇ ಇತ್ಯಾದಿ ಸೂತ್ರಕ್ಕೆ ಅಪವ್ಯಾಖ್ಯಾನ ನಿರಾಸೆ ೧೩

ಬ್ರಹ್ಮದೃಷ್ಟಿ ಇತ್ಯಾದಿ ಸೂತ್ರಕ್ಕೆ ಅಪವ್ಯಾಖ್ಯಾನ ನಿರಾಸೆ ೧೪

ತದಧಿಗಮಾಧಿಕರಣ ೧೫

ಕರ್ಮನಾಶಾಖ್ಯ ಜ್ಞಾನಫಲ ನಿರೂಪಣೆ ೧೫

ಇತರಸ್ಯಾಪ್ಯೇವಂ ಇತ್ಯಾದಿ ಸೂತ್ರಾರ್ಥವು ೧೫

ಯದೇವ ವಿದ್ಯಯಾ ಇತ್ಯಾದಿ ಸೂತ್ರಕ್ಕೆ ಪುನರುಕ್ತಿ ಪರಿಹಾರ ೧೯

ಪ್ರಾರಬ್ಧಕರ್ಮಭೋಗಾನಂತರವೇ ಬ್ರಹ್ಮಜ್ಞಾನಿಗಳಿಗೆ ಮೋಕ್ಷ
ಹಾಗೂ ಬ್ರಹ್ಮದ್ವೇಷಿಗಳಿಗೆ ತಮಸ್ಸು ೨೦

ಪ್ರಾರಬ್ಧಕರ್ಮವು ಅನಂತವಾದ್ದರಿಂದ ಭೋಗದಿಂದ
ಅದರ ನಾಶವು ಅಶಕ್ಯವೆಂಬ ಶಂಕಾ ಪರಿಹಾರ ೨೦

ಎರಡನೆಯ ಪಾದ ೨೧–೨೫

ಪಾದಚತುಷ್ಟಯ ವಿಷಯ ನಿರೂಪಣೆ ೨೧
ದೇವತೆಗಳ ಮಾರ್ಗಉತ್ಕ್ರಾಂತಿಗಳ ಸ್ವರೂಪ ನಿರೂಪಣೆ ೨೧
ಉಕ್ತಾರ್ಥದಲ್ಲಿ ಶ್ರುತಿ ಪುರಾಣೋಕ್ತಿಗಳು ೨೩
ಚತುರ್ಥಪಾದೋಕ್ತ ಭೋಗವು ದೇವತೆಗಳಿಗೆ ಸಾಧಾರಣವು ೨೪
ದ್ವಿತೀಯಪಾದೋಕ್ತವಾದ ದೇವತೆಗಳ ಲಯಕ್ರಮದ ಸಮರ್ಥನೆ ೨೪
ವಾದಿಗಳಿಗೆ ಮತಿಭೇದಕ್ಕೆ ಗುಣಭೇದವು ಕಾರಣ ೨೫
ಮುಕ್ತರ ಜ್ಞಾನದ ಸ್ವರೂಪ ೨೫
ಲಕ್ಷ್ಮೀಜ್ಞಾನದ ಸ್ವರೂಪ ೨೬
ಈಶಜ್ಞಾನದ ಸ್ವರೂಪ ೨೬
ಲಕ್ಷ್ಮೀಜ್ಞಾನದಲ್ಲಿ ವಿಶೇಷ ೨೭
ಬ್ರಹ್ಮಜ್ಞಾನದಲ್ಲಿ ವಿಶೇಷ ೨೭
ರಮಾಬ್ರಹ್ಮೇತರ ಮುಕ್ತರ ಜ್ಞಾನಕ್ಕೆ ವೃದ್ಧಿಹ್ರಾಸವುಂಟು ೨೭
ಮತಿಭೇದ ನಿರೂಪಣೆಯ ಉಪಸಂಹಾರ ೨೭
ಜಿನೋದಿತ ಮೋಕ್ಷಸ್ವರೂಪದ ನಿರೂಪಣೆ ೨೮
ಜಿನೋದಿತ ಮೋಕ್ಷಸ್ವರೂಪದ ನಿರಾಸೆ ೨೮
ಬೌದ್ಧೋಕ್ತ ಮೋಕ್ಷಸ್ವರೂಪದ ನಿರಾಸೆ ೩೧
ಬೌದ್ಧಮತದಲ್ಲಿ ನಾಲ್ಕು ಪ್ರಕಾರವು ೩೧
ಶೂನ್ಯವಾದಿಗಳ ಮತದ ಅನುವಾದ ೩೨
ಶೂನ್ಯರ ಏಕಾತ್ಮವಾದ ನಿರೂಪಣೆ ೩೨
ಶೂನ್ಯರ ಅನೇಕಾತ್ಮವಾದ ನಿರೂಪಣೆ ೩೪
ಶೂನ್ಯವಾದಿ ಮಾಯಾವಾದಿಗಳಿಗೆ ಸಾಮ್ಯದ ನಿರೂಪಣೆ ೩೫
ಅದ್ವೈತವು ಸೂತ್ರಕಾರರಿಗೆ ಅಭಿಮತವಲ್ಲ ೩೮
ಆತ್ಮವಿನಾಶಕ್ಕೆ ಮೋಕ್ಷತ್ವವಿಲ್ಲ, ಅಪುರುಷಾರ್ಥವಾದ್ದರಿಂದ ೩೮
ಶೂನ್ಯಭಾವ ಬ್ರಹ್ಮಭಾವಗಳಿಗೆ ಮೋಕ್ಷಸಾಧಕತ್ವವಿಲ್ಲ ೩೯
ವಿಜ್ಞಾನವಾದಿಗಳ ಮೋಕ್ಷಸ್ವರೂಪ ನಿರಾಕರಣೆ ೪೧
ವೈಶೇಷಿಕ ಸೌತ್ರಾಂತಿಕರ ಮೋಕ್ಷಸ್ವರೂಪ ನಿರಾಕರಣೆ ೪೪
ಸಾಂಖ್ಯ ನೈಯಾಯಿಕಾದಿಗಳ ಮೋಕ್ಷಸ್ವರೂಪ ನಿರಾಕರಣೆ ೪೫

ಪ್ರಿಯಾಪ್ರಿಯೇ ಇತ್ಯಾದಿ ಶ್ರುತ್ಯರ್ಥ ನಿರೂಪಣೆ ೪೫
ನ ಪ್ರೇತ್ಯ ಸಂಜ್ಞಾಸ್ತಿ ಇತ್ಯಾದಿ ಶ್ರುತ್ಯರ್ಥ ನಿರೂಪಣೆ ೪೭
ಸೋಽಶ್ನುತೇ ಇತ್ಯಾದಿ ಶ್ರುತ್ಯರ್ಥ ೪೯
ಯತ್ರ ಹಿ ದ್ವೈತಮಿವ ಭವತಿ ಶ್ರುತ್ಯರ್ಥ ೪೯
ಮುಕ್ತಿಯಲ್ಲಿ ಸುಖಾಭಾವವಿಲ್ಲ ೫೩
ಮುಕ್ತಿಯಲ್ಲಿ ಸುಖವುಂಟು ಎನ್ನುವುದಕ್ಕೆ ಪ್ರಮಾಣಗಳು ೫೬
ಮುಕ್ತರಿಗೆ ಸ್ವರೂಪಭೂತ ದೇಹವತ್ವ ಪ್ರತಿಪಾದನೆ ೫೭
ಮುಕ್ತಿಯಲ್ಲಿಯೂ ಜೀವನಿಗೆ ಬ್ರಹ್ಮಸ್ವರೂಪತ್ವವು ಬರುವುದಿಲ್ಲ ೬೦
ಯಾದವಪ್ರಕಾಶಾದಿಗಳ ಮತ ನಿರಾಸೆ ೬೩
ಮೋಕ್ಷವಾದಾರ್ಥ ಉಪಸಂಹಾರ ೬೩
ತೃತೀಯಾಧ್ಯಾಯ ಚತುರ್ಥಪಾದದಲ್ಲಿನ ಪೂರ್ವಪಕ್ಷ
ಹಾಗೂ ಸಿದ್ಧಾಂತ ಯುಕ್ತಿಗಳು ೬೪
ಚತುರ್ಥಾಧ್ಯಾಯ ಪ್ರಥಮಪಾದದಲ್ಲಿನ ಪೂರ್ವಪಕ್ಷ
ಹಾಗೂ ಸಿದ್ಧಾಂತ ಯುಕ್ತಿಗಳು ೬೫
ಚತುರ್ಥಾಧ್ಯಾಯ ದ್ವಿತೀಯಪಾದದಲ್ಲಿನ ಪೂರ್ವಪಕ್ಷ
ಹಾಗೂ ಸಿದ್ಧಾಂತ ಯುಕ್ತಿಗಳು ೬೫
ನೈಕಸ್ಮಿನ್ನಧಿಕರಣ ೬೬
ವಾಯಾವಿಂದ್ರಃ ಇತ್ಯಾದಿ ಶ್ರುತ್ಯರ್ಥ ೬೬
ಪರಾಧಿಕರಣ ೬೮
ದೇವತೆಗಳಿಗೆ ಪ್ರದಾನವಾಯುವಿನಲ್ಲಿ ಲಯ
ವಾಯುವಿಗೆ ವಿಷ್ಣುವಿನಲ್ಲಿ ಲಯ ೬೮
ಲಯಕ್ರಮದ ಸಂಕ್ಷಿಪ್ತ ನಿರೂಪಣೆ ೬೮
ಶೇಷಮಾರ್ಗದ ನಿರೂಪಣೆ ೬೯
ಗರುಡಮಾರ್ಗದ ನಿರೂಪಣೆ ೭೦
ಸಾಯುಜ್ಯರ ಲಯದ ಕ್ರಮ ೭೨
ಲಯದಲ್ಲಿ ಸೃಷ್ಟಿಕ್ರಮಕ್ಕಿಂತ ವಿಪರೀತ ಕ್ರಮವು ೭೩
ಪ್ರಾಣಸ್ತೇಜಸಿ ಇತ್ಯಾದಿ ಶ್ರುತ್ಯರ್ಥ ೭೪

ಪಾದಾರ್ಥ ಉಪಸಂಹಾರ	೭೫
ಮೂರನೆಯ ಪಾದ	**೭೬–೭೭**
ಪಾದಪ್ರತಿಪಾದ್ಯಾರ್ಥ ನಿರೂಪಣೆ	೭೬
ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳು	೭೬
ಕಾರ್ಯಾಧಿಕರಣ	೭೭
ಅಪ್ರತೀಕಾಲಂಬನರ ಲಯದ ಪ್ರಕಾರ	೭೭
ನಾಲ್ಕನೆಯ ಪಾದ	**೭೮–೮೭**
ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳು	೭೮
ಅನನ್ಯಾಧಿಪತ್ಯಧಿಕರಣ	೭೯
ಮುಕ್ತರಿಗೂ ಭಗವಂತನು ಅಧಿಪತಿಯು	೭೯
ಬ್ರಹ್ಮನಿಗೆ ಸರ್ವಾತ್ಮನಾ ಲೋಕಾಧಿಪತ್ಯ ಇತರರಿಗೆ ಯಥಾಯೋಗ್ಯವಾಗಿ ಆಧಿಪತ್ಯ	೮೧
ಮುಕ್ತರಿಗೆ ತಮಗಿಂತ ಅಧಮರನ್ನು ಕುರಿತು ನಿಯಂತೃತ್ವವು	೮೨
ಲೋಕಾಭಿಮಾನಿಗಳಾದ ಮುಕ್ತರೇ ಲೋಕಶಬ್ದಾರ್ಥರು	೮೩
ನಿಯಂತೃತ್ವ ಹೇಳುವ ಶ್ರುತಿಗೆ ಪರಕೀಯರ ಅಪವ್ಯಾಖ್ಯಾನ ನಿರಾಸೆ	೮೩
ಪಾದಾರ್ಥ ಉಪಸಂಹಾರ	೮೫
ಗ್ರಂಥದ ಪರಿಸಮಾಪ್ತಿ	೮೫
ಪುರುಷೋತ್ತಮನಿಗೆ ಮತ್ತೆ ಮತ್ತೆ ನಮಸ್ಕಾರ	೮೫
ಶ್ರೀಮದಾಚಾರ್ಯರ ಸ್ವರೂಪಾವಿಷ್ಕಾರ	೮೬
ಮತ್ತೆ ಭಗವಂತನ ಸ್ತುತಿಯೊಂದಿಗೆ ಗ್ರಂಥದ ಮುಕ್ತಾಯ	೮೭
ಶ್ರೀಮನ್ನ್ಯಾಯಸುಧಾ ಹಾಗೂ ಪರಿಮಳದ ಮಂಗಲಶ್ಲೋಕಗಳು	೮೭– ೮೮

* * *

ಶ್ರೀಮದ್ಧನುಮಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ನಾಲ್ಕನೆಯ ಅಧ್ಯಾಯ (ಫಲಾಧ್ಯಾಯ)

ಮೊದಲನೆಯ ಪಾದ

ಶ್ರೀಮನ್ನ್ಯಾಯಸುಧಾ ಮಂಗಲಶ್ಲೋಕ

ಯದೀಯ ಚರಣಾಂಭೋಜಚ್ಛಾಯಾಮಾಶ್ರಿತ್ಯ ನಿರ್ವೃತಾಃ ।

ನಂದಂತಿ ಸತತಂ ಮುಕ್ತಾಃ ಸಂಶ್ರಯೇ ತಂ ಶ್ರಿಯಃಪತಿಂ ।।

ಯಾವ ಪರಮಾತ್ಮನ ಚರಣಕಮಲಗಳ ನೆರಳನ್ನು ಆಶ್ರಯಿಸಿ ಜೀವರು ಕ್ಲೇಶಗಳನ್ನು ಕಳೆದುಕೊಂಡು ಚತುರ್ವಿಧ ಮುಕ್ತಿಯನ್ನು ಹೊಂದಿದವರಾಗಿ ಸುಖವನ್ನು ಅನುಭವಿಸುವರೋ ಅಂಥಹ ಲಕ್ಷ್ಮೀಪತಿಯನ್ನು ಅಭೀಷ್ಟಪ್ರಾಪ್ತಿಗಾಗಿ ಆಶ್ರಯಿಸುವೆನು.

ನಿರ್ವೃತಾಃ ಎಂದರೆ 'ಕ್ಷೀಣಕರ್ಮಾಣಃ' ಕರ್ಮಕ್ಷಯವನ್ನು ಹೊಂದಿದವರು ಎಂದು ಅರ್ಥ. ಇದರಿಂದ ಮೊದಲನೆಯ ಪಾದದ ಪ್ರಮೇಯವು ಸೂಚಿತವಾಗಿದೆ. ಮುಕ್ತಾಃ ಎಂದರೆ ದೇಹಬಂಧದಿಂದ ಬಿಡುಗಡೆ ಹೊಂದಿದವರು ಎಂದು ಅರ್ಥ. ಇದರಿಂದ ಉತ್ಕ್ರಾಂತಿ ಎಂಬ ಎರಡನೆಯ ಪಾದದ ಪ್ರಮೇಯವು ಸೂಚಿತವಾಗಿದೆ. ಯದೀಯಚರಣಾಂಭೋಜಚ್ಛಾಯಾಮಾಶ್ರಿತ್ಯ ಎಂದರೆ ಪರಮಾತ್ಮನ ಪಾದಕಮಲಗಳ ನೆರಳನ್ನು ಆಶ್ರಯಿಸಿ ಎಂದರ್ಥ. ಇದರಿಂದ ಗಮ್ಯಸ್ಥಾನವನ್ನು ತಿಳಿಸಿದ ಪ್ರಯುಕ್ತ ಮೂರನೆಯ ಪಾದದ ಪ್ರಮೇಯವು ಸೂಚಿತವಾಗಿದೆ. ನಂದಂತಿ ಎಂದರೆ ಸುಖವನ್ನು ಅನುಭವಿಸುತ್ತಾರೆ ಎಂದರ್ಥ. ಇದರಿಂದ ಭೋಗವೆಂಬ ನಾಲ್ಕನೆಯ ಪಾದದ ಪ್ರಮೇಯವು ಸೂಚಿತವಾಗಿದೆ.

ಅನುವ್ಯಾಖ್ಯಾನ

ಈ ಅಧ್ಯಾಯದಲ್ಲಿ ಫಲವು ನಿರೂಪಿಸಲ್ಪಡುವುದು ಎಂದು ಭಾಷ್ಯದಲ್ಲಿ ಹೇಳಲಾಗಿದೆ. ಪ್ರಸ್ತುತ ಫಲನಿರೂಪಣೆಯಲ್ಲಿನ ಸಂಗತಿಯನ್ನು ಹೇಳುತ್ತಾರೆ –

ಸಮನ್ವಯಾವಿರೋಧಾಭ್ಯಾಂ ಸಿದ್ಧೇ ವಸ್ತುನಿ ಸಾಧನೇ ।

ವಿಚಾರಿತೇಷ್ವಶೇಷೇಷು ಸಾಧನೇಷು ವಿಶೇಷತಃ ।। ೧ ।।

ನಿತ್ಯಶಃ ಕಾರ್ಯಮತ್ಯಂತಮವಶ್ಯಂಭಾವಿ ಸಾಧನಮ್

ಚಿಂತ್ಯತೇ ಪ್ರಥಮಂ ತತ್ರ ..... ॥

ಮೊದಲನೆಯ ಮತ್ತು ಎರಡನೆಯ ಅಧ್ಯಾಯಗಳಲ್ಲಿ ಪ್ರತಿಪಾದಿತವಾದ ಸಮನ್ವಯ ಅವಿರೋಧಗಳಿಂದ ಪರಬ್ರಹ್ಮಾಖ್ಯ ವಸ್ತುವು ಸಿದ್ಧವಾಗುವುದು. ಸಾಧನ ವಿಷಯಕವಾದ ಮೂರನೆಯ ಅಧ್ಯಾಯದಲ್ಲಿ ಎಲ್ಲ ಮೋಕ್ಷಸಾಧನಗಳು ವಿಚಾರ ಮಾಡಲ್ಪಟ್ಟಿವೆ. ಜಿಜ್ಞಾಸಿತ ವಿಷಯದಲ್ಲಿ ಬೇರೆ ಎಲ್ಲ ವಿಚಾರವೂ ಮಾಡಲ್ಪಟ್ಟಿರಲು ಈಗ ಫಲಪ್ರತಿಪಾದನೆಗೆ ಸಂದರ್ಭವು ಪ್ರಾಪ್ತವಾಗಿದೆ. ಆದಕಾರಣ ಮೋಕ್ಷರೂಪವಾದ ಫಲವು ಈ ಅಧ್ಯಾಯದಲ್ಲಿ ನಿರೂಪಿಸಲ್ಪಡುತ್ತದೆ. ನಾಲ್ಕನೆಯ ಅಧ್ಯಾಯದ ಮೊದಲನೆಯ ಪಾದದಲ್ಲಿ ಮೊದಲಿಗೆ ಕೆಲವು ಸೂತ್ರಗಳಿಂದ ಸಾಧನ ವಿಚಾರವೇ ಮಾಡಲ್ಪಡುತ್ತದೆ. ಏಕೆಂದರೆ ಪರಮಾದರದಿಂದ ನಿರಂತರದಲ್ಲಿಯೂ ಸಾಧನೆಯನ್ನು ಮಾಡುವುದು ಮೋಕ್ಷಸಿದ್ಧಿಯಲ್ಲಿ ಅತ್ಯಂತ ಅವಶ್ಯಕವು.

ಆವೃತ್ತ್ಯಧಿಕರಣಮ್

॥ ಓಂ ಆವೃತ್ತಿರಸಕೃದುಪದೇಶಾತ್ ಓಂ ॥

ಈ ಅಧಿಕರಣದ ಅವಶ್ಯಕತೆಯನ್ನು ತೋರಿಸುತ್ತಾರೆ –

..... ಶ್ರವಣಾದಿಸಕೃತ್ಕ್ರಿಯಾ ॥ ೨ ॥

ಆವೃತ್ತಿರ್ನೇತಿ ಸಂದೇಹೇ ಕರ್ತವ್ಯಾವೃತ್ತಿರೇವ ಹಿ ।

ಉಪದೇಶೋಽತತ್ತ್ವಮಸೀತ್ಯಾದಿ ಹ್ಯಸಕೃದೇವ ಯತ್ ॥ ೩ ॥

ಮೊದಲನೆಯ ಅಧಿಕರಣದಲ್ಲಿ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ ಎಂದು ದರ್ಶನಕ್ಕಾಗಿ ಶ್ರವಣಾದಿಗಳು ವಿಧಿಸಲ್ಪಡುತ್ತವೆ. ಶ್ರವಣಾದಿ ಅನುಷ್ಠಾನವು ಜ್ಯೋತಿಷ್ಟೋಮಾದಿಗಳಂತೆ ಒಂದೇ ಸಲವೋ ಅಥವಾ ಧಾನ್ಯಾದಿಗಳ ಕುಟ್ಟುವಿಕೆಯಂತೆ ಅನೇಕ ಸಲವೋ ಎಂದು ಸಂದೇಹ ಬಂದರೆ, ಒಂದೇ ಸಲವೆಂದು ಪೂರ್ವಪಕ್ಷ. ಜ್ಞಾನಕ್ಕಾಗಿ ಶ್ರವಣಾದಿಗಳ ಆವೃತ್ತಿಯನ್ನು ಮಾಡಬೇಕು ಎಂದು ಸಿದ್ಧಾಂತ. 'ಸ ಆತ್ಮಾಽತತ್ತ್ವಮಸಿ ಶ್ವೇತಕೇತೋ' 'ನೀನು ಪರಬ್ರಹ್ಮನಿಂದ ಭಿನ್ನನು ಆಗಿರುವೆ' ಎಂಬುದಾಗಿ ಉದ್ದಾಲಕರು ಶ್ವೇತಕೇತುವಿಗೆ ಅನೇಕಾವರ್ತಿ ಉಪದೇಶ ಮಾಡಿರುವುದು ಪ್ರಸಿದ್ಧವೇ ಆಗಿದೆ. ಇದರಿಂದ ಶ್ರವಣಾದಿಗಳ ಆವೃತ್ತಿಯು ಕರ್ತವ್ಯ ಎಂದು ತಿಳಿಯಲ್ಪಡುತ್ತದೆ.

ಶ್ರವಣ ಮನನ ನಿದಿಧ್ಯಾಸನ ಈ ಮೂರಕ್ಕೂ ಆವೃತ್ತಿಯ ಅವಶ್ಯಕತೆಯನ್ನು ಸಾಧಿಸತಕ್ಕ ಲಿಂಗಾಚ್ಚ ಎನ್ನುವ ಸೂತ್ರವನ್ನು ಪಠನ ಮಾಡಿ, ಅಲ್ಲಿ ಸೂಚಿತವಾದ ಲಿಂಗಗಳನ್ನು ಆಗಮವಾಕ್ಯದಿಂದಲೇ ತೋರಿಸುತ್ತಾರೆ –

॥ ಓಂ ಲಿಂಗಾಚ್ಚ ಓಂ ॥

ಲಿಂಗಾಲ್ಲಾತವ್ಯತಃ ಪೂರ್ವಮೃಜೋರ್ಬ್ರಹ್ಮತ್ವತಃ ಶತಾತ್ ।

ಶುಶ್ರಾವೋಗ್ರತಪಾ ನಾಮ ಯೋಗ್ಯೋ ರುದ್ರಪದಸ್ಯ ಯಃ ॥ ೪ ॥

ಸಾರ್ಧಂ ಪರಾರ್ಧಂ ವಿಷ್ಣೋಸ್ತು ಗುಣಾನ್ ಭಕ್ತ್ಯಾ ಸದೋದ್ಯತಃ ।

ತತ್ತ್ರಿಭಾಗಮುಪಾಸಾಂ ಚ ಚಕ್ರೇ ಸಂಭೃತಮಾನಸಃ ॥ ೫ ॥

'ಸ ತಪೋಽತಪ್ಯತ। ಪುನರೇವ ವರುಣಂ ಪಿತರಮುಪಸಸಾರ' ಇತ್ಯಾದಿಗಳಿಂದ ಶ್ರುತವಾದ ಶ್ರವಣಾದಿಗಳ ಆವರ್ತನ ರೂಪವಾದ ಲಿಂಗದಿಂದಲೂ ಶ್ರವಣಾದಿಗಳ ಆವೃತ್ತಿಯು ಅವಶ್ಯ ಕರ್ತವ್ಯವೆಂದು ತಿಳಿದುಬರುತ್ತದೆ. ಬ್ರಹ್ಮತ್ವದಿಂದ ನೂರು ಋಜುಗಳಷ್ಟು ಪೂರ್ವದಲ್ಲಿರತಕ್ಕ ಬ್ರಹ್ಮಪದವಿಗೆ ಯೋಗ್ಯನಾದ ಲಾತವ್ಯನಾಮಕ ಋಜುವಿನಿಂದ ರುದ್ರಪದವಿಗೆ ಯೋಗ್ಯನಾದ ಉಗ್ರತಪನಾಮಕನು ಎಪ್ಪತ್ತೈದು ಬ್ರಹ್ಮಸಂವತ್ಸರಗಳಲ್ಲಿ ಶ್ರೀಹರಿಯ ಗುಣಗಳನ್ನು ಯಾವಾಗಲೂ ಸನ್ನದ್ಧನಾಗಿಯೇ ಭಕ್ತಿಯಿಂದ ಕೇಳಿದನು. ಉಪಾಸನೆ ಮಾಡುವುದರಲ್ಲಿಯೇ ದೃಢ ಚಿತ್ತನಾಗಿದ್ದು ಇಪ್ಪತ್ತೈದು ಬ್ರಹ್ಮಸಂವತ್ಸರಗಳಲ್ಲಿ (ಶ್ರವಣಕಾಲದ ಮೂರನೇ ಒಂದು ಭಾಗದಷ್ಟು ಕಾಲದಲ್ಲಿ) ಮನನ ನಿದಿಧ್ಯಾಸನ ರೂಪವಾದ ಉಪಾಸನೆಯನ್ನು ಮಾಡಿದನು.

ದಶಮನ್ವಂತರಂ ಶಕ್ರಪದಯೋಗ್ಯೋ ಗರುತ್ಮತಃ ।

ಪದಯೋಗ್ಯಾತ್ಸುಮನಸಃ ಸುನಂದೋ ನಾಮ ಚಾಶೃಣೋತ್ ॥ ೬ ॥

ಉಪಾಸಾಂ ಚಕ್ರ ಉದ್ಯುಕ್ತೋ ಮನ್ವಂತರಚತುಷ್ಟಯಮ್ ।

ಸೂರ್ಯಾಚಂದ್ರಮಸೋಶ್ಚೈವ ಪದಯೋಗ್ಯೌ ಸುತೇಜಸೌ ॥ ೭ ॥

ಸುರೂಪಃ ಶಾಂತರೂಪಶ್ಚ ಮನ್ವಂತರಚತುಷ್ಟಯಮ್ ।

ಅಶೃಣ್ವತಾಂ ಸುಮನಸೋ ಮನ್ವಂತರಮುಪಾಸತಾಮ್ ॥ ೮ ॥

ಇಂದ್ರಪದವಿಗೆ ಯೋಗ್ಯನಾದ ಸುನಂದನೆಂಬ ಹೆಸರುಳ್ಳವನು ಗರುಡ ಪದವಿಗೆ ಯೋಗ್ಯನಾದ ಸುಮನಸ ಎನ್ನುವ ದೇವತೆಯಿಂದ ಹತ್ತು ಮನ್ವಂತರಗಳಷ್ಟು ಕಾಲ ಶ್ರವಣ ಮಾಡಿದನು. ಅನಂತರ ನಾಲ್ಕು ಮನ್ವಂತರಗಳ ಕಾಲ ಶ್ರದ್ಧೆಯಿಂದ ಉಪಾಸನೆ ಮಾಡಿದನು. ಸೂರ್ಯಚಂದ್ರರ ಪದವಿಗೆ ಯೋಗ್ಯರಾದ ಉತ್ತಮ ಪ್ರಜ್ಞೆಯುಳ್ಳ ಸುರೂಪನೂ ಹಾಗೂ ಶಾಂತರೂಪನೂ ನಾಲ್ಕು ಮನ್ವಂತರಗಳ ಕಾಲ ಸುಮನಸ ಎನ್ನುವ ದೇವತೆಯಿಂದ ಶ್ರವಣ ಮಾಡಿದರು. ಅನಂತರ ಒಂದು ಮನ್ವಂತರದಷ್ಟು ಕಾಲ ಉಪಾಸನೆ ಮಾಡಿದರು.

ತತಃ ಪ್ರೋಕ್ತಾಸ್ತು ತೇ ಸರ್ವೇ ಭಕ್ತ್ಯೋಗ್ರತಪ ಆದಯಃ ।
ಅಪಶ್ಯನ್ ಪರಮಂ ವಿಷ್ಣುಂ ತತ್ಪ್ರಸಾದೈಧಿತಾಃ ಸದಾ ॥ ೯ ॥

ಇತ್ಯುಕ್ತಂ ವಿಷ್ಣುನಾ ಸಾಕ್ಷಾತ್ ಗ್ರಂಥೇ ಸತ್ತತ್ವಸಂಜ್ಞಿತೇ ।

ಅನಂತರ ಹಿಂದೆ ಹೇಳಲ್ಪಟ್ಟಿರುವ ಉಗ್ರತಪಸನೇ ಮೊದಲಾಗಿ ಎಲ್ಲರೂ ಭಕ್ತಿಯಿಂದ ಯಾವಾಗಲೂ ಶ್ರೀಹರಿಯ ಪ್ರಸಾದದಿಂದ ಪ್ರಗತಿ ಹೊಂದಿದವರಾಗಿ ಸರ್ವೋತ್ತಮನಾದ ಶ್ರೀಹರಿಯನ್ನು ನೋಡಿದರು. ಹೀಗೆ ಸತ್ತತ್ವವೆಂಬ ಗ್ರಂಥದಲ್ಲಿ ಮುಖ್ಯವಾಗಿ ವಿಷ್ಣುವಿನಿಂದ ಉಕ್ತವಾಗಿದೆ. ಈ ಪ್ರಕಾರವಾಗಿ ಬ್ರಹ್ಮ ಇಂದ್ರಾದಿ ಪದವಿಗಳಿಗೆ ಯೋಗ್ಯರಾದ ಎಲ್ಲರೂ ಅವರವರ ಯೋಗ್ಯತಾನುಸಾರ ಶ್ರವಣಾದಿ ಗಳನ್ನು ಅನೇಕ ಸಂವತ್ಸರಗಳ ಕಾಲ ಆವೃತ್ತಿ ಮಾಡಿದುದರಿಂದಲೇ ಶ್ರೀಹರಿಯ ಪ್ರಸಾದವನ್ನು ಹೊಂದಿ ಸಾಕ್ಷಾತ್ಕಾರ ಪಡೆದರು ಎನ್ನುವುದು ಸಿದ್ಧವಾಗುವುದು.

ಆತ್ಮಾಧಿಕರಣಮ್

।। ಓಂ ಆತ್ಮೇತಿ ತೂಪಗಚ್ಛಂತಿ ಗ್ರಾಹಯಂತಿ ಚ ಓಂ ।।

ಈ ಸೂತ್ರವನ್ನು ವ್ಯಾಖ್ಯಾನ ಮಾಡುವುದಕ್ಕಾಗಿ ಮೊದಲು ಆತ್ಮಶಬ್ದಾರ್ಥವನ್ನು ಹೇಳುತ್ತಾರೆ –

ಆತ್ಮೇತಿ ನಾಮಕಥಿತಂ ಸಾಕ್ಷಾನ್ನಾರಾಯಣಸ್ಯ ಹಿ ।। ೧೦ ।।

ಆತ್ಮಾ ಬ್ರಹ್ಮ ಮಹಾಂಸ್ತಾರಃ ಪರಮೇಶಃ ಶುಚಿಶ್ರವಾಃ ।

ವಿಷ್ಣುರ್ನಾರಾಯಣೋಽನಂತ ಇತಿ ಶ್ರೀಪತಿರೀರ್ಯತೇ ।। ೧೧ ।।

ಇತಿ ಪೈಂಗಿಶ್ರುತಿಶ್ಚೈವ ತಥೈವ ಪರಮಶ್ರುತಿಃ ।

ಆತ್ಮ ಎನ್ನುವ ನಾಮವು ಮುಖ್ಯವೃತ್ತಿಯಿಂದ ನಾರಾಯಣನಿಗೆ ಹೇಳಲ್ಪಟ್ಟಿದೆ. ಮುಖ್ಯವೃತ್ತಿಯು ಕೂಡುತ್ತಿರಲು ಅಮುಖ್ಯವೃತ್ತಿಯು ಗ್ರಾಹ್ಯವಲ್ಲ. ಆತ್ಮ (ಸ್ವಾಮಿ), ಬ್ರಹ್ಮ (ಪೂರ್ಣ), ಮಹಾನ್ (ಶ್ರೇಷ್ಠ), ತಾರ (ಓಂಕಾರ ವಾಚ್ಯನು), ಪರಮೇಶ (ಉತ್ತಮರಾದ ಬ್ರಹ್ಮಾದಿಗಳಿಗೂ ನಿಯಾಮಕನು), ಶುಚಿಶ್ರವ (ಶೋಭನವಾದ ಕೀರ್ತಿಯುಳ್ಳವನು), ವಿಷ್ಣು, ನಾರಾಯಣ, ಅನಂತ ಈ ವಿಧವಾದ ಹೆಸರುಗಳಿಂದ ಲಕ್ಷ್ಮೀಪತಿಯಾದ ಶ್ರೀಹರಿಯು ಕರೆಯಲ್ಪಡುತ್ತಾನೆ ಎಂದು ಪೈಂಗಿಶ್ರುತಿಯು ಹೇಳುತ್ತದೆ. ಹಾಗೆಯೇ ಪರಮಶ್ರುತಿಯೂ (ಓಂ, ಆತ್ಮ, ಇತ್ಯಾದಿ) ಹೇಳುತ್ತದೆ.

ಓಮಾತ್ಮಾ ಭಗವಾನ್ವಿಷ್ಣುರಾತ್ಮಾನಂದೋಽಕ್ಷರಃ ಸ್ವರಾಟ್ ।। ೧೨ ।।

ವಿಶ್ವತ್ರಾತಾ ನೃಸಿಂಹೋಽಜೋ ನಾರಾಯಣ ಉರುಕ್ರಮಃ ।

ಅನಸೂಯಾ ತಥೈವಾತ್ರೇರ್ಜಜ್ಞೇ ಪುತ್ರಾನಕಲ್ಮಷಾನ್ ।। ೧೩ ।।

ದತ್ತಂ ದೂರ್ವಾಸಸಂ ಸೋಮಮಾತ್ಮೇಶಬ್ರಹ್ಮಸಂಭವಾನ್ ।

ಇತಿ ಭಾಗವತೇ ಚೈವ ತಸ್ಮಾದಾತ್ಮಾ ಜನಾರ್ದನಃ ।। ೧೪ ।।

ಓಂ, ಆತ್ಮ ಎಂದು ಕರೆಸಿಕೊಳ್ಳುವ ಷಡ್ಗುಣೈಶ್ವರ್ಯ ಸಂಪನ್ನನಾದ ವಿಷ್ಣುವು ಜೀವರಿಗೆ ಆನಂದದಾಯಕನು, ನಾಶರಹಿತನು ಹಾಗೂ ಸರ್ವತಂತ್ರ ಸ್ವತಂತ್ರನು. ಸಮಸ್ತ ಜಗತ್ತನ್ನು ರಕ್ಷಿಸುವವನು, ನೃಸಿಂಹನು, ಅಜನು ಎಂಬುದಾಗಿ ಕರೆಸಿಕೊಳ್ಳುವ ನಾರಾಯಣನು ಉತ್ಕೃಷ್ಟವಾದ ಪರಾಕ್ರಮವುಳ್ಳವನು. ಹೀಗೆ ಪರಮಶ್ರುತಿಯು ಆತ್ಮ ಶಬ್ದವನ್ನು ಭಗವಂತನ ನಾಮವನ್ನಾಗಿ ಹೇಳುತ್ತದೆ. ಹಾಗೆಯೇ ಭಾಗವತದಲ್ಲಿಯೂ ದತ್ತಾತ್ರೇಯನ ಅವತಾರವನ್ನು ಹೇಳುವಾಗ ಮೂಲರೂಪಿಯಾದ ಶ್ರೀಹರಿಗೆ ಆತ್ಮ ಶಬ್ದವನ್ನು ಹೇಳಲಾಗಿದೆ. ಅನಸೂಯಾದೇವಿಯು ಅತ್ರಿ ಋಷಿಗಳ ದೆಶೆಯಿಂದ ಪಾಪರಹಿತರಾದ ಆತ್ಮ (ಶ್ರೀಹರಿ), ರುದ್ರ ಹಾಗೂ ಚತುರ್ಮುಖ ಇವರುಗಳಿಂದ ಕ್ರಮವಾಗಿ ಜೊತೆಯಲ್ಲಿಯೇ ಅವತರಿಸಿದ ದತ್ತಾತ್ರೇಯ, ದೂರ್ವಾಸ ಋಷಿ ಹಾಗೂ ಚಂದ್ರ ಹೀಗೆ ಮೂರು ಮಕ್ಕಳನ್ನು ಹಡೆದಳು. ದತ್ತಾತ್ರೇಯನು ಆತ್ಮ ಶಬ್ದವಾಚ್ಯನಾದ ಸಾಕ್ಷಾತ್ ಶ್ರೀಹರಿಯ ಅವತಾರ. ದೂರ್ವಾಸ ಋಷಿಯು ಸಾಕ್ಷಾತ್ ಶಿವನ ಅವತಾರ. ಚತುರ್ಮುಖನಿಗೆ ಭೂಲೋಕದಲ್ಲಿ ಅವತಾರವಿಲ್ಲದ ಕಾರಣ ಚಂದ್ರನಲ್ಲಿ ಚತುರ್ಮುಖನ ವಿಶೇಷ ಆವೇಶವಷ್ಟೆ. ಹೀಗೆ ಭಾಗವತದಲ್ಲಿ ಹೇಳಿದೆ. ಆದ್ದರಿಂದ ಈ ಸೂತ್ರದಲ್ಲಿ ಆತ್ಮ ಶಬ್ದದಿಂದ ಹೇಳಲ್ಪಟ್ಟವನು ಶ್ರೀಹರಿ ಎಂದು ತಿಳಿಯಬೇಕು.

ಆತ್ಮ ಶಬ್ದವು ವಿಷ್ಣುವೆಂದಾಗಲಿ. ಹಾಗಾದರೆ ಸೂತ್ರಾರ್ಥವೇನು ಎಂದರೆ –

ತಸ್ಮಾದುಪಾಸ್ಯೋ ವಿಷ್ಣುರಿತಿ ಜ್ಞಾತವ್ಯಃ ಸಜ್ಜನೈಃ ಸದಾ ।

ತಥೈವೋಪಾಸತೇ ಸಂತಸ್ತಥೈವೋಪದಿಶಂತಿ ಚ ॥ ೧೫ ॥

ಆತ್ಮಶಬ್ದವು ವಿಷ್ಣುವನ್ನೇ ಹೇಳುವುದರಿಂದ, ವಿಷ್ಣುವು ಆತ್ಮ ಎಂಬುದಾಗಿ ಸಜ್ಜನರಿಂದ ಯಾವಾಗಲೂ ತಿಳಿಯಲ್ಪಡತಕ್ಕವನೂ, ಧ್ಯೇಯನೂ ಆಗಿರುತ್ತಾನೆ. ಹಾಗೆಯೇ ಸಜ್ಜನರು ಉಪಾಸನೆ ಮಾಡುತ್ತಾರೆ. ಮತ್ತು ಹಾಗೆಯೇ ಉಪದೇಶ ಮಾಡುತ್ತಾರೆ.

ಹಾಗಾದರೆ ವಿಷ್ಣುವನ್ನು ವಿಷ್ಣುವೆಂದು ಉಪಾಸನೆ ಮಾಡಬೇಕು ಎಂದು ಹೇಳಿದಂತಾಯಿತು. ಇಲ್ಲಿ ಅದಕ್ಕೆ ಪ್ರಸಕ್ತಿಯೇ ಇಲ್ಲವೆಂದು ಆಶಂಕಿಸಿದರೆ, ಆತ್ಮ ಶಬ್ದಾರ್ಥವನ್ನು ಹೇಳುತ್ತ ಸೂತ್ರಾರ್ಥವನ್ನು ಹೇಳುತ್ತಾರೆ –

ಆದಾನಾರ್ಥತ್ವತಶ್ಚಾಯಮಾತ್ಮಶಬ್ದಃ ಪತಿಂ ವದೇತ್ ।

ಸ್ವಾಮೀ ಮೇ ವಿಷ್ಣುರಿತ್ಯೇವ ನಿತ್ಯದೋಪಾಸ್ಯಮಂಜಸಾ ॥ ೧೬ ॥

ಆದಾನ–ಕರ್ತೃತ್ವ ರೂಪ ಅರ್ಥವಿರುವುದರಿಂದ ಈ ಸೂತ್ರದಲ್ಲಿರತಕ್ಕ ಆತ್ಮ ಶಬ್ದವು ಸ್ವಾಮಿಯನ್ನು ಹೇಳುವುದು. ಹೇಗೆಂದರೆ ಸ್ವಾಮಿಯಾದವನು ಭೃತ್ಯರನ್ನು ತನ್ನವರನ್ನಾಗಿ ತೆಗೆದುಕೊಳ್ಳುತ್ತಾನೆ. ಈ ವಿಷಯದಲ್ಲಿ 'ಯಚ್ಚಾಪ್ನೋತಿ ಯದಾದತ್ತೇ

ಯಚ್ಚಾತ್ತಿ ವಿಷಯಾನಿಹ। ಯಚ್ಚಾಸ್ಯ ಸಂತತೋ ಭಾವಸ್ತಸ್ಮಾದಾತ್ಮೇತಿ ಭಣ್ಯತೇ' ಎಂಬ ವಾಕ್ಯವು ಪ್ರಸಿದ್ಧವು. ಆದ್ದರಿಂದ ವಿಷ್ಣುವು ನನಗೆ ಸ್ವಾಮಿಯು ಎಂಬುದಾಗಿ ಯಾವಾಗಲೂ ಪರಮಾದರದಿಂದ ಉಪಾಸನೆ ಮಾಡತಕ್ಕದ್ದು. (ಈ ಸೂತ್ರದಲ್ಲಿ ಎರಡು ಆತ್ಮ ಶಬ್ದಗಳಿವೆ. ಮೊದಲನೇದು ಅನುವಾದಾರ್ಥಕವಾಗಿದ್ದರೆ ಎರಡನೇದು ವಿಧ್ಯರ್ಥಕವು. ಆತ್ಮಾ ಅಂದರೆ ವಿಷ್ಣುವೆಂದೂ ಆತ್ಮಾ ಅಂದರೆ ಸ್ವಾಮಿಯೆಂದೂ ಉಪಾಸನೆ ಮಾಡತಕ್ಕದ್ದು ಎಂದರ್ಥ.)

ಶ್ರೀಹರಿಯನ್ನು ಸರ್ವಥಾ ಉಪಾಸನೆ ಮಾಡಬೇಕು ಎನ್ನುವ ವಿಷಯದಲ್ಲಿ ಪ್ರಮಾಣವೇನು ಎಂದರೆ –

ಸ್ವಾಮೀ ವಿಷ್ಣುರಿತಿ ಧ್ಯಾನಂ ವಿಶೇಷಣವಿಶೇಷ್ಯತಃ ।

ಕರ್ತವ್ಯಂ ಸರ್ವಥೈವೈತನ್ನ ಕಥಂಚನ ವಿಸ್ಮರೇತ್ ॥ ೧೭ ॥।

ಇತಿ ಸತ್ತತ್ವವಚನಂ ಷಾಡ್ಗುಣ್ಯವಚನಂ ಪರಮ್ ।

ಮಮ ಸ್ವಾಮೀ ಹರಿರ್ನಿತ್ಯಂ ಸರ್ವಸ್ಯ ಪತಿರೇವ ಚ ॥ ೧೮ ॥

ಇತಿ ಧ್ಯೇಯಃ ಸರ್ವದೈವ ಭಗವಾನ್ವಿಷ್ಣುರವ್ಯಯಃ ।

ವಿಷ್ಣುವು ಸ್ವಾಮಿಯೆಂದು ವಿಶೇಷಣ–ವಿಶೇಷ್ಯಭಾವದಿಂದಲೇ ಸರ್ವಥಾ ಧ್ಯಾನ ಮಾಡತಕ್ಕದ್ದು. ಇಲ್ಲಿ ಸ್ವಾಮಿತ್ವವು ವಿಶೇಷಣ, ವಿಷ್ಣುವು ವಿಶೇಷ್ಯ. ಇದನ್ನು ಏನೇ ಆದರೂ ಮರೆಯಬಾರದು. ಹೀಗೆ ಸತ್ತತ್ವವಚನವು. ಮುಂದಿನ ವಾಕ್ಯವು ಷಾಡ್ಗುಣ್ಯ ವಚನವು. ಶ್ರೀಹರಿಯು ನನಗೆ ಸರ್ವದಾ ಸ್ವಾಮಿಯು, ಎಲ್ಲರಿಗೂ ಸ್ವಾಮಿಯೇ ಎಂಬುದಾಗಿ ನಾಶರಹಿತನಾದ ಭಗವಾನ್ ವಿಷ್ಣುವು ಯಾವಾಗಲೂ ಧ್ಯೇಯನು.

ನ ಪ್ರತೀಕಾಧಿಕರಣಮ್

॥ ಓಂ ನ ಪ್ರತೀಕೇ ನ ಹಿ ಸಃ ಓಂ ॥

ಮನೋ ಬ್ರಹ್ಮೇತ್ಯುಪಾಸೀತ ಇತ್ಯಾದಿ ಶ್ರುತಿಪ್ರಾಪ್ತವಾದ ಮನಸ್ಸು ಇತ್ಯಾದಿ ಪ್ರತೀಕಗಳನ್ನು ಬ್ರಹ್ಮತ್ವೇನ ಉಪಾಸನೆ ಮಾಡಕೂಡದು. ಏಕೆಂದರೆ ಪ್ರಸ್ತುತನಾದ ವಿಷ್ಣುವು ಪ್ರತೀಕರೂಪನಲ್ಲ. ಅದರಲ್ಲಿ ಪ್ರತೀಕೇ ಎನ್ನುವುದು ಅಧಿಕರಣ ಸಪ್ತಮೀ ಎಂದು ತಿಳಿಯತಕ್ಕದ್ದು. ಪ್ರತೀಕ ರೂಪ ಅಧಿಕರಣದಲ್ಲಿ ಉಪಾಸನೆಯು ಬ್ರಹ್ಮನಿಗೆ ಯುಕ್ತವೇ ಆಗಿದೆ. ನ ಪ್ರತೀಕೇ ಎಂದು ನಿಷೇಧ ಮಾಡಿದ್ದು ಹೇಗೆಂದರೆ, ಬೇರೆ ರೀತಿಯಿಂದ ಪ್ರತಿಜ್ಞೆಯನ್ನು ವ್ಯಾಖ್ಯಾನ ಮಾಡುತ್ತಾರೆ –

ಪ್ರತೀಕವಿಷಯತ್ವೇನ ನ ಕಾರ್ಯಾ ವಿಷ್ಣುಭಾವನಾ ॥ ೧೯ ॥

ಪ್ರತಿಮಾವಿಷಯತ್ವದಿಂದ ಅಂದರೆ ಮನಸ್ಸು ದೇಹ ಇತ್ಯಾದಿಗಳು ವಿಷ್ಣುವೆಂದು ಉಪಾಸನೆ ಮಾಡತಕ್ಕದ್ದಲ್ಲ.

ನ ಹಿ ಸಃ ಎನ್ನುವುದನ್ನು ವ್ಯಾಖ್ಯಾನ ಮಾಡುತ್ತಾರೆ –

ಪ್ರತೀಕಂ ನೈವ ವಿಷ್ಣುರ್ಯನ್ಮಿಥ್ಯೋಪಾಸಾ ಹ್ಯನರ್ಥದಾ ।

ಪ್ರತೀಕವು, ಅಂದರೆ ಬ್ರಹ್ಮನ ಪ್ರತಿಮಾರೂಪವಾದ ಮನಸ್ಸು ಮೊದಲಾದವು, ವಿಷ್ಣುವಿನಿಂದ ಅಭಿನ್ನವಲ್ಲವೇ ಅಲ್ಲ. ಆದಕಾರಣ ಪ್ರತೀಕವನ್ನು ವಿಷ್ಣುವೆಂದು ಉಪಾಸನೆ ಮಾಡಕೂಡದು. ವಿಷ್ಣುಪ್ರತೀಕಗಳಿಗೆ ವಿಷ್ಣುವಿನೊಂದಿಗೆ ಅಭೇದವು ಎನ್ನುವ ಭಾವನೆಯು ಮಿಥ್ಯೋಪಾಸನೆಯು. ಈ ರೀತಿಯ ಮಿಥ್ಯೋಪಾಸನೆಯು ಅನರ್ಥಕರ.

ಮಿಥ್ಯೋಪಾಸನೆಯು ಅನರ್ಥಕ್ಕೆ ಕಾರಣವೆನ್ನುವುದು ಹೇಗೆ ಎಂದರೆ ಅದನ್ನು ಉಪಪಾದಿಸುತ್ತ ಇದೇ ಸೂತ್ರಾಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತಾರೆ –

ಯೋಽನ್ಯಥಾ ಸಂತಮಾತ್ಮೇಶಮನ್ಯಥಾ ಪ್ರತಿಪಾದ್ಯತೇ ॥ ೨೦ ॥

ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ।

ಯೋಽನ್ಯಥಾ ಸಂತಮಾತ್ಮಾನಮನ್ಯಥಾ ಪ್ರತಿಪಾದ್ಯತೇ ॥ ೨೧ ॥

ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ।

ಯೋಽನ್ಯಥೈವ ಸ್ಥಿತಂ ವಿಷ್ಣುಮನ್ಯಥಾ ಪ್ರತಿಪಾದ್ಯತೇ ॥ ೨೨ ॥

ಕಿಂ ತೇನ ಕೃತಂ ಪಾಪಂ ಚೋರೇಣ ಬ್ರಹ್ಮಹಾರಿಣಾ ।

ಪ್ರತೀಕದಿಂದ ಭಿನ್ನತ್ವಾದಿ ಪ್ರಕಾರದಿಂದ ಇರತಕ್ಕ, ಜೀವರಿಗೆ ಸ್ವಾಮಿಯಾದ ಶ್ರೀಹರಿಯನ್ನು, ಯಾವನು ಅಭಿನ್ನತ್ವಾದಿ ಪ್ರಕಾರದಿಂದ ತಿಳಿಯುತ್ತಾನೋ ಹಾಗೂ ಧ್ಯಾನಿಸುತ್ತಾನೋ ಅವನು ಶ್ರೀಹರಿಯನ್ನೇ ಕದ್ದವನು. ಅಂಥಹ ದೊಡ್ಡ ಕಳ್ಳನಿಂದ ಯಾವ ಪಾಪವು ತಾನೇ ಮಾಡಲ್ಪಡುವುದಿಲ್ಲ? (ಮೂರು ಶ್ಲೋಕಗಳ ತಾತ್ಪರ್ಯವೂ ಒಂದೇ ಆಗಿರುವುದು.) ಈ ಮೂರು ಶ್ಲೋಕಗಳೂ ಶ್ರೀಹರಿಯು ಪ್ರತೀಕರೂಪನು ಎನ್ನುವ ಧ್ಯಾನದಲ್ಲಿ ಬಾಧಕಗಳು.

ಪ್ರತೀಕದಲ್ಲಿ ವಿಷ್ಣುತ್ವವನ್ನು ಧ್ಯಾನ ಮಾಡುವುದರಿಂದ ಬಾಧಕವಿಲ್ಲ ಎಂದರೆ –

ಸ್ವಾತ್ಮಾನಂ ಪ್ರತಿಮಾಂ ವಾಪಿ ದೇವಾಂತರಮೇವ ವಾ ॥ ೨೩ ॥

ಚೇತನಾಚೇತನಂ ವಾನ್ಯತ್ ಧ್ಯಾಯೇದ್ಯಃ ಕೇಶವಸ್ತ್ವಿತಿ ।

ಕಿಂ ತೇನ ಕೃತಂ ಪಾಪಂ ಚೋರೇಣೇಶಾಪಹಾರಿಣಾ ॥ ೨೪ ॥

ಯಾವನು ತನ್ನನ್ನಾಗಲೀ, ಪ್ರತಿಮೆಯನ್ನಾಗಲೀ, ಬೇರೆ ದೇವತೆಯನ್ನಾಗಲೀ, ಅಥವಾ ಇತರವಾದ ಚೇತನ ಅಚೇತನವನ್ನಾಗಲೀ ವಿಷ್ಣುವೆಂದು ಧ್ಯಾನಿಸುತ್ತಾನೋ, ಅಂಥಹ ಕಳ್ಳನಿಂದ ಯಾವ ಪಾಪವು ತಾನೆ ಮಾಡಲ್ಪಡುವುದಿಲ್ಲ?

ಯೋಽನ್ಯದ್ವಿಷ್ಣುರಿತಿ ಧ್ಯಾಯೇಜ್ಜಾನೀಯಾದ್ವಾ ಹರಿಂ ತಥಾ ।
ಅಂಧೇತಮಸಿ ಮಜ್ಜೇತ್ಸ ಯತ್ರ ನೈವೋತ್ಥಿತಿಃ ಕ್ವಚಿತ್ ॥ ೨೫ ॥
ಯೋಽನ್ಯದ್ವಿಷ್ಣುರಿತಿ ಧ್ಯಾಯೇದ್ವಿಷ್ಣುರನ್ಯದಿತಿ ಸ್ಮ ವಾ ।
ಅನ್ಯಥಾಧ್ಯಾನದೋಷೇಣ ಸೋಂಽಧೇ ತಮಸಿ ಮಜ್ಜತಿ ॥ ೨೬ ॥
ಯೋಽನ್ಯದ್ವಿಷ್ಣುರಿತಿ ಧ್ಯಾಯೇದ್ವಿಷ್ಣುರನ್ಯದಿತಿ ಸ್ಮ ವಾ ।
ಮಹಾತಮಸಿ ಮಗ್ನಸ್ಯ ತಸ್ಯ ನೈವೋತ್ಥಿತಿಃ ಕ್ವಚಿತ್ ॥ ೨೭ ॥

ಯಾವನು ವಿಷ್ಣುವಿನಿಂದ ಇತರವಾದುದನ್ನು ವಿಷ್ಣುವೆಂದು ಧ್ಯಾನಿಸುತ್ತಾನೋ ಅಥವಾ ಹಾಗೆ ತಿಳಿಯುತ್ತಾನೋ ಅವನು – ಮತ್ತೆ ಎಂದಿಗೂ ಮೇಲೇಳಲಾಗದಂಥ ಅಂಧಂತಮಸ್ಸಿನಲ್ಲಿ ಬೀಳುವನು, ಅನ್ಯಥಾ ಧ್ಯಾನ ದೋಷದಿಂದ ಅಂಧಂತಮಸ್ಸಿನಲ್ಲಿ ಬೀಳುವನು, ಮಹಾತಮಸ್ಸಿನಲ್ಲಿ ಬೀಳುವ ಅವನಿಗೆ ಮತ್ತೆ ಎಂದಿಗೂ ಉತ್ಥಾನವಿಲ್ಲ.

ಯತ್ಕಿಂಚಿದನ್ಯಥಾಸಂಸ್ಥಮನ್ಯಥಾಧ್ಯಾತಮಂಜಸಾ ।
ಧ್ಯಾತುರ್ಮಹಾದೋಷಕರಂ ಕಿಮು ಸರ್ವೇಶ್ವರೋ ಹರಿಃ ॥ ೨೮ ॥
ಯತ್ಕಿಂಚಿದನ್ಯಥಾಸಂಸ್ಥಮನ್ಯಥಾಧ್ಯಾತಮಂಜಸಾ ।
ಮಹಾದೋಷಕರಂ ವಿಷ್ಣುಃ ಕಿಮು ಸರ್ವೇಶ್ವರೇಶ್ವರಃ ॥ ೨೯ ॥
ಯತ್ಕಿಂಚಿದನ್ಯಥಾಸಂಸ್ಥಮನ್ಯಥಾಧ್ಯಾತಮಂಜಸಾ ।
ಅನರ್ಥಕಾರಣಂ ಲೋಕೇ ಕಿಮು ಸರ್ವೇಶ್ವರೇಶ್ವರಃ ॥ ೩೦ ॥

ಗಂಗಾದಿ ಪವಿತ್ರೋದಕವನ್ನು ಅಪವಿತ್ರವೆಂದು ಧ್ಯಾನಮಾಡಿದರೆ, ಹಾಗೆ ಧ್ಯಾನ ಮಾಡಿದವನಿಗೆ ಅದು ಬೆನ್ನಾಗಿ ಮಹಾದೋಷವನ್ನು ಉಂಟುಮಾಡುವುದು. ಅಂದಮೇಲೆ ಸರ್ವೇಶ್ವರನಾದ ಶ್ರೀಹರಿಯನ್ನು ಅನ್ಯಥಾ ಉಪಾಸನೆ ಮಾಡುವುದು ಮಹಾದೋಷಕ್ಕೆ ಕಾರಣವಾಗುವುದು ಎಂದು ಹೇಳಬೇಕೇನು? ಮೇಲಿನ ಮೂರು ಶ್ಲೋಕಗಳ ತಾತ್ಪರ್ಯವೂ ಒಂದೇ ಆಗಿದೆ.

ನ ಕಿಂಚಿದನ್ಯಥಾ ಜ್ಞೇಯಂ ಧ್ಯೇಯಂ ವಾ ತೇನ ಕುತ್ರಚಿತ್ ।
ಕಿಮು ಸರ್ವೋತ್ತಮೋ ವಿಷ್ಣುರ್ಜ್ಞೇಯೋ ನೀಚತಯಾ ಕ್ವಚಿತ್ ॥ ೩೧ ॥

ಆದ್ದರಿಂದ ಯಾವುದನ್ನೂ ಬೇರೆ ಪ್ರಕಾರವಾಗಿ ತಿಳಿಯಕೂಡದು. ಎಲ್ಲಿಯೂ ಹಾಗೆ ಧ್ಯಾನವನ್ನೂ ಮಾಡಕೂಡದು. ಸರ್ವೋತ್ತಮನಾದ ವಿಷ್ಣುವನ್ನು ಎಲ್ಲಿಯೂ ಯಾವಕಾಲಕ್ಕೂ ನೀಚನೆಂದು ತಿಳಿಯಕೂಡದು.

ಇತಿ ಶ್ರುತಿಪುರಾಣೋಕ್ತಿಬಲತೋ ನ ಪ್ರತೀಕತಾ ।

ಧ್ಯೇಯಾ ವಿಷ್ಣೋಃ ಕ್ವಚಿದ್ಯಸ್ಮಾನ್ಮಿಥ್ಯಾಜ್ಞಾನಮನರ್ಥದಮ್ ॥ ೩೩ ॥

ಇತ್ಯಭಿಪ್ರೇತ್ಯ ನ ಹಿ ಸ ಇತ್ಯಾಹ ಭಗವಾನ್ಪ್ರಭುಃ ।

ಪ್ರತೀಕಸಂಸ್ಥಿತತ್ವೇನ ಧ್ಯೇಯೋ ವಿಷ್ಣುರ್ನ ಚಾನ್ಯಥಾ ॥ ೩೪ ॥

ಮಿಥ್ಯಾಜ್ಞಾನವು ಅನರ್ಥಕರವಾದ್ದರಿಂದ, ವಿಷ್ಣುವನ್ನು ಪ್ರತೀಕತ್ವರೂಪದಿಂದ ಉಪಾಸನೆ ಮಾಡಕೂಡದು ಎಂಬುದಾಗಿ ಮೇಲೆ ಹೇಳಲ್ಪಟ್ಟ ಶ್ರುತಿ ಪುರಾಣಗಳ ವಾಕ್ಯಗಳ ಸಾಮರ್ಥ್ಯದಿಂದ ಸಿದ್ಧವಾಗುವುದು. ಈ ಅಭಿಪ್ರಾಯದಿಂದ ಭಗವಾನ್ ವೇದವ್ಯಾಸರು ನ ಹಿ ಸಃ ಎಂದು ಹೇಳಿದರು. ಆದ್ದರಿಂದ ವಿಷ್ಣುವು ದೇಹಾದಿ ಪ್ರತಿಮೆಯಲ್ಲಿ ಇರತಕ್ಕವನೆಂದೇ ಧ್ಯಾನಾರ್ಹನು. ಪ್ರತೀಕಾದಿಗಳೊಂದಿಗೆ ಅಭಿನ್ನತ್ವ ರೂಪದಿಂದ ವಿಷ್ಣುವನ್ನು ಧ್ಯಾನ ಮಾಡಕೂಡದು.

ಬ್ರಹ್ಮದೃಷ್ಟ್ಯಧಿಕರಣಮ್

॥ ಓಂ ಬ್ರಹ್ಮದೃಷ್ಟಿರುತ್ಕರ್ಷಾತ್ ಓಂ ॥

ಆತ್ಮಶಬ್ದ ವಾಚ್ಯನಾದ ವಿಷ್ಣುವಿನಲ್ಲಿ ಬ್ರಹ್ಮದೃಷ್ಟಿಯು ಕರ್ತವ್ಯ ಎಂದು ಇಲ್ಲಿ ಹೇಳಲ್ಪಡುತ್ತದೆ. ವಿಷ್ಣುವನ್ನು ಸ್ವಾಮಿಯೆಂದಷ್ಟೇ ಅಲ್ಲ, ಪೂರ್ಣನೆಂದೂ ಧ್ಯಾನ ಮಾಡಬೇಕು ಎಂದು ಹೇಳುತ್ತಾರೆ–

ಬ್ರಹ್ಮೇತಿ ಚ ಸದಾ ಧ್ಯೇಯೋ ಭಗವಾನ್ವಿಷ್ಣುರಂಜಸಾ ।

ಉತ್ಕೃಷ್ಟೋ ಬ್ರಹ್ಮಶಬ್ದಾರ್ಥಃ ಪೂರ್ಣತ್ವಂ ಬ್ರಹ್ಮತಾ ಯತಃ ॥ ೩೫ ॥

ಭಗವಾನ್ ವಿಷ್ಣುವನ್ನು ಯಾವಾಗಲೂ ಬ್ರಹ್ಮನೆಂದು ಚೆನ್ನಾಗಿ ಧ್ಯಾನ ಮಾಡಬೇಕು. ಅದರಲ್ಲಿ ಉತ್ಕರ್ಷಾತ್ ಎನ್ನುವುದು ಹೇತುವು. ಉತ್ಕರ್ಷವು ಯಾರಿಗೆ ಎಂದು ತಿಳಿಯುವುದಿಲ್ಲ. ಅದನ್ನು ಉತ್ಕೃಷ್ಟೋ ಇತ್ಯಾದಿ ವಚನದಿಂದ ತಿಳಿಸುತ್ತಾರೆ. ಬ್ರಹ್ಮತ್ವ ಎಂದರೆ ಪೂರ್ಣತ್ವ ಎಂದರ್ಥ. ಪೂರ್ಣತ್ವವೇ ಉತ್ಕರ್ಷವು. ಆದ್ದರಿಂದ ಉತ್ಕರ್ಷವು ಬ್ರಹ್ಮಶಬ್ದಾರ್ಥವು.

ಬ್ರಹ್ಮತ್ವವೇ ಸರ್ವಥಾ ಧ್ಯೇಯವು ಎನ್ನುವಲ್ಲಿ ಪ್ರಮಾಣವೇನು ಎಂದರೆ –

ಆಧಿವ್ಯಾಧಿನಿಮಿತ್ತೇನ ವಿಕ್ಷಿಪ್ತಮನಸೋಽಪಿ ತು ।

ಧ್ಯೇಯೈವ ಬ್ರಹ್ಮತಾ ನಿತ್ಯಂ ವಿಷ್ಣೋರ್ಭಕ್ತ್ಯಾ ನಿರಂತರಮ್ ॥ ೩೬ ॥

ಇತಿ ಪ್ರಕಾಶಿಕಾಯಾಂ ಚ ವಚನಂ ವಿಷ್ಣುನೇರಿತಮ್ ।

ಆಧಿವ್ಯಾಧಿಗಳ ನಿಮಿತ್ತದಿಂದ (ಆಧಿ–ಮನೋವ್ಯಥೆ, ವ್ಯಾಧಿ–ರೋಗಾದಿಗಳು) ಚಂಚಲವಾದ ಮನಸ್ಸುಳ್ಳವನಾಗಿದ್ದರೂ ಕೂಡ ನಿರಂತರವಾದ ಭಕ್ತ್ಯಾದಿಗಳಿಂದ ವಿಷ್ಣುವಿನಲ್ಲಿ ನಿತ್ಯವೂ ಬ್ರಹ್ಮತ್ವವನ್ನು ಧ್ಯಾನ ಮಾಡಬೇಕು. ಹೀಗೆ ಪ್ರಕಾಶಿಕಾ ಎಂಬ

ಗ್ರಂಥದಲ್ಲಿ ವಿಷ್ಣುವಿನಿಂದ ಹೇಳಲ್ಪಟ್ಟ ವಚನವಿದೆ.

'ಆತ್ಮೇತಿ ತೂಪಗಚ್ಛಂತಿ ಗ್ರಾಹಯಂತಿ ಚ' 'ನ ಪ್ರತೀಕೇ ನ ಹಿ ಸಃ' 'ಬ್ರಹ್ಮ ದೃಷ್ಟಿರುತ್ಕರ್ಷಾತ್' ಎನ್ನುವ ಮೂರು ಸೂತ್ರಗಳನ್ನು ಅದ್ವೈತಿಗಳು ಅನ್ಯಥಾ ವ್ಯಾಖ್ಯಾನ ಮಾಡುತ್ತಾರೆ. ಹೇಗೆಂದರೆ –

ಮೊದಲನೆ ಸೂತ್ರದ ಪ್ರಕಾರ ಪರಮೇಶ್ವರನನ್ನು ಆತ್ಮಾ ಎಂದೇ ತಿಳಿಯಬೇಕು. ಏಕೆಂದರೆ, ಪರಮೇಶ್ವರ ಪ್ರಕ್ರಿಯೆಯಲ್ಲಿ ಜಾಬಾಲರು ಆತ್ಮಾ ಎಂದೇ ಈಶ್ವರನನ್ನು ಹೊಂದುತ್ತಾರೆ. 'ಅಹಂಬ್ರಹ್ಮಾಸ್ಮಿ' ಇತ್ಯಾದಿಗಳಲ್ಲಿ ಆತ್ಮತ್ವವನ್ನು ಅಂಗೀಕರಿಸಿರುವುದು ಕಂಡಿದೆ. 'ಏಷ ತ ಆತ್ಮಾ ಸರ್ವಾಂತರಃ' 'ತತ್ತ್ವಮಸಿ' ಇತ್ಯಾದಿ ವೇದವಾಕ್ಯಗಳು ಈಶ್ವರನನ್ನು ಆತ್ಮತ್ವರೂಪದಿಂದಲೇ ತಿಳಿಸಿಕೊಡುತ್ತವೆ. 'ಅಥಯೋಽನ್ಯಾಂ ದೇವತಾ ಮುಪಾಸ್ತೇ' ಇತ್ಯಾದಿಗಳಿಂದ ಶ್ರುತಿಯು ಭೇದದೃಷ್ಟಿಯನ್ನು ನಿರಾಕರಿಸುತ್ತದೆ. ಆದ ಕಾರಣ ಆತ್ಮಾ ಎಂದೇ(ಅಂದರೆ ಜೀವತ್ವೇನ) ಈಶ್ವರನಲ್ಲಿ ಮನಸ್ಸನ್ನು ಧರಿಸತಕ್ಕದ್ದು ಎಂದು ಮೊದಲನೆ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ. ಈ ಅಪವ್ಯಾಖ್ಯಾನವನ್ನು 'ನಾತ್ಮೇತಿ' ಇತ್ಯಾದಿ ವಚನದಿಂದ ದೂಷಿಸುತ್ತಾರೆ –

ನಾತ್ಮೇತಿ ಸೂತ್ರಮೀಶಸ್ಯ ಜೀವತ್ವಪ್ರತಿಪಾದಕಮ್ ।। ೩೭ ।।

ಆತ್ಮಶಬ್ದಂ ಯತೋ ಹೇತುಂ ಕೃತ್ವಾ ಜೀವಂ ನ್ಯವಾರಯತ್ ।

ಸ್ವಶಬ್ದಾತ್ಪ್ರಾಣಭೃಚ್ಚೈವ ನೋಕ್ತ ಇತ್ಯೇವ ವೇದರಾಟ್ ।। ೩೮ ।।

ಆತ್ಮೇತಿ ತೂಪಗಚ್ಛಂತಿ ಎನ್ನುವ ಸೂತ್ರವು ಪರಮೇಶ್ವರನಿಗೆ ಜೀವತ್ವವನ್ನು ಪ್ರತಿಪಾದಿಸುವುದಿಲ್ಲ. ಏಕೆಂದರೆ ಸ್ವಶಬ್ದದಿಂದಲೇ ಜೀವನೂ ಕೂಡ ಹೇಳಲ್ಪಟ್ಟಿಲ್ಲ ಎಂದು ವೇದವ್ಯಾಸರೇ ಆತ್ಮಶಬ್ದವನ್ನು ಹೇತುವನ್ನಾಗಿ ಮಾಡಿಕೊಂಡು ಜೀವನನ್ನು ನಿರಾಕರಿಸಿದ್ದಾರೆ. ಆದ್ದರಿಂದ ಆತ್ಮಶಬ್ದದಿಂದ ಹೇಳಲ್ಪಟ್ಟವನು ವಿಷ್ಣುವೇ ಹೊರತು ಮತ್ತೊಬ್ಬ ಜೀವನಲ್ಲ. ಆತ್ಮಶಬ್ದವು ಜೀವವಾಚಕವಲ್ಲವೆಂದು ತಾತ್ಪರ್ಯ.

ಇದನ್ನೇ ವಿವರಿಸುತ್ತಾರೆ –

ಯದ್ಯಾತ್ಮಶಬ್ದೋ ಜೀವೇಽಪಿ ಕಥಂ ಸ ವಿನಿವಾರಯೇತ್ ।

ಆತ್ಮಶಬ್ದೋದಿತಸ್ತಸ್ಮಾದ್ವಿಷ್ಣುರೇವ ನ ಚಾಪರಃ ।। ೩೯ ।।

ಆತ್ಮಶಬ್ದವು ಜೀವನಲ್ಲಿಯೂ ಇರುವುದಾದರೆ ಆಗ ಆ ಆತ್ಮ ಶಬ್ದವು ಜೀವನನ್ನು ಹೇಗೆ ನಿವಾರಿಸುವುದು? ಅಥವಾ ಆತ್ಮಶಬ್ದವು ಜೀವನಲ್ಲಿಯೂ ಇದೆ ಎಂದು ಸೂತ್ರಕಾರರ ಅಭಿಪ್ರಾಯವಾಗಿದ್ದರೆ ಅವರು ಜೀವನನ್ನು ಆತ್ಮಶಬ್ದದಿಂದ ಹೇಗೆ ನಿವಾರಣೆ ಮಾಡಿಯಾರು? ಆದ್ದರಿಂದ ಆತ್ಮಶಬ್ದದಿಂದ ಹೇಳಲ್ಪಟ್ಟವನು ವಿಷ್ಣುವೇ ಹೊರತು ಮತ್ತೊಬ್ಬನಲ್ಲ.

ಈ ವಿಷಯದಲ್ಲಿ ಆಗಮವಾಕ್ಯವನ್ನು ಪಠಿಸುತ್ತಾರೆ –

ಆತ್ಮಬ್ರಹ್ಮಾದಯಃ ಶಬ್ದಾಸ್ತಮೃತೇ ವಿಷ್ಣುಮವ್ಯಯಮ್ ।

ನ ವದಂತಿ ಯತೋ ನಾಪ್ತಾ ಕ್ವಾಪಿ ತೈರ್ಗುಣಪೂರ್ಣತಾ ।। ೪೦ ।।

ನಾರಾಯಣಾಧ್ಯಾತ್ಮಗತಮಿತಿ ಯದ್ವೈಷ್ಣವಂ ವಚಃ ।

ಗುಣಪೂರ್ಣತ್ವ ವಾಚಕಗಳಾದ ಆತ್ಮ ಬ್ರಹ್ಮ ಇತ್ಯಾದಿ ಶಬ್ದಗಳು ನಾಶರಹಿತ ನಾದ ಆ ವಿಷ್ಣುವನ್ನು ಬಿಟ್ಟು ಇತರರನ್ನು ಹೇಳುವುದಿಲ್ಲ. ಏಕೆಂದರೆ ವಿಷ್ಣುವಿನಿಂದ ಇತರರಾದ ಬ್ರಹ್ಮಾದಿಗಳು ಎಂದಿಗೂ ಯಾವವಿಧದಿಂದಲೂ ಗುಣಪರಿಪೂರ್ಣತ್ವ ವನ್ನು ಹೊಂದುವುದಿಲ್ಲ. ಹೀಗೆ ನಾರಾಯಣಾಧ್ಯಾತ್ಮದಲ್ಲಿ ವಿಷ್ಣು ಸಂಬಂಧಿಯಾದ ವಚನವಿದೆ.

ಈಗ ವಾಕ್ಯಾರ್ಥವನ್ನು ದೂಷಿಸುತ್ತಾರೆ –

ಯದಿ ಜೀವೇಶಯೋರ್ಭೇದಪತಿರ್ಕೈಕ್ಯಂ ಚ ಮನ್ಯತೇ ।। ೪೧ ।।

ಆತ್ಮಶಬ್ದಂ ಕಥಂ ತಸ್ಮಾನ್ನಿವಾರಯತಿ ಯುಕ್ತಿತಃ ।

ವೇದವ್ಯಾಸರಿಗೆ ಜೀವಬ್ರಹ್ಮರಿಗೆ ಐಕ್ಯವನ್ನು ಹೇಳುವ ಅಭಿಪ್ರಾಯವೂ ಇದ್ದಲ್ಲಿ ಆಗ ಆ ಸೂತ್ರದಲ್ಲಿ ಜೀವನ ದೆಶೆಯಿಂದ ಆತ್ಮಶಬ್ದವನ್ನು ಜೀವನಿರಾಕರಣ ಯುಕ್ತಿ ಯಿಂದ ನಿವಾರಣೆ ಮಾಡುತ್ತಿರಲಿಲ್ಲ.

ಸೂತ್ರಾಂತರ ವಿರೋಧವನ್ನೂ ಹೇಳುತ್ತಾರೆ –

ಭೇದಸ್ಯ ವ್ಯಪದೇಶಂ ಚ ಸ್ಥಿತಿಂ ಚಾದನಮೇವ ಚ ।। ೪೨ ।।

ಭೇದದಾರ್ಢ್ಯೇ ಹೇತುಮಾಹ ತಾತ್ಪರ್ಯಂ ಸ ಜಗತ್ಪತಿಃ ।

ಜಗತ್ಪತಿಯಾದ ಸೂತ್ರಕಾರರು ಭೇದವ್ಯಪದೇಶಾತ್ ಎನ್ನುವುದರಿಂದ ಭೇದದ ವ್ಯಪದೇಶವನ್ನೂ, ಸ್ಥಿತ್ಯದನಾಭ್ಯಾಂ ಚ ಎನ್ನುವುದರಿಂದ ಕರ್ಮಫಲಭೋಗರಹಿತ ಸ್ಥಿತಿಯನ್ನೂ, ಕರ್ಮಫಲಭೋಗವನ್ನೂ ಕೂಡ ತಾತ್ಪರ್ಯಸಹಿತ ಜೀವೇಶ ಭೇದದ ದಾರ್ಢ್ಯಕ್ಕಾಗಿ ಹೇತುವನ್ನಾಗಿ ಹೇಳಿರುವರು. ತಾತ್ಪರ್ಯಸಹಿತ ಎಂದರೆ ಅನೇಕ ಪ್ರಮಾಣಗಳ ಉಪನ್ಯಾಸದ ಮೂಲಕ ಎಂದರ್ಥ.

ಈ ವಿಷಯದಲ್ಲಿ ಯಾವುದೇ ವಿರೋಧವಿಲ್ಲ. ಜೀವೇಶರಿಗೆ ಪರಮಾರ್ಥದಿಂದ ಏಕತ್ವವು ಇದ್ದರೂ ವ್ಯಾವಹಾರಿಕ ಭೇದವಿದೆ. ಅದನ್ನು ಅಪೇಕ್ಷಿಸಿಕೊಂಡು ಭೇದ ಪ್ರತಿಪಾದಕ ಸೂತ್ರಗಳು ಹೊರಟಿವೆ. ಈ ಸೂತ್ರವಾದರೂ ಪಾರಮಾರ್ಥಿಕ ಅಪೇಕ್ಷೆಯಿಂದ ಎನ್ನುವ ವ್ಯವಸ್ಥೆ ಕೂಡುವುದೆಂಬ ಆಶಯದಿಂದ ಶಂಕಿಸುತ್ತಾರೆ –

ವ್ಯಾವಹಾರಿಕಭೇದಶ್ಚೇತ್ ಕ್ವಾಸಾವಾವ್ಯಾವಹಾರಿಕಃ ।। ೪೩ ।।

ಜೀವೇಶ್ವರ ಭೇದವು ಭ್ರಾಂತಿಕಲ್ಪಿತವು ಎನ್ನುವ ಪಕ್ಷದಲ್ಲಿ ಎಲ್ಲಿಯಾದರೂ

ಸತ್ಯವಾದ ಭೇದವನ್ನು ಅಂಗೀಕರಿಸಬೇಕು. ಈ ಭೇದವು ಎಲ್ಲಿ? ಎಲ್ಲಿಯೂ ಇಲ್ಲ.

ಎಲ್ಲಿಯೂ ಭೇದಕ್ಕೆ ಸತ್ಯತ್ವವನ್ನು ಅಂಗೀಕರಿಸದದೇ ಹೋದರೆ ಜೀವೇಶ್ವರರಿಗೆ ಭೇದವನ್ನು ಆರೋಪಿಸುವುದೂ ಕೂಡುವುದಿಲ್ಲ. ಆದ್ದರಿಂದ ಭೇದವೆಲ್ಲವೂ ಭ್ರಾಂತಿಸಿದ್ಧವೆಂದು ಹೇಳುವ ಹಾಗಿಲ್ಲ. ಸತ್ಯವಾದ ಭೇದವೆಂಬುದು ಇಲ್ಲವೇ ಇಲ್ಲ. ಹಾಗಿದ್ದರೂ ಜೀವೇಶರ ಭೇದ ಭ್ರಮೆಯು ಉಪಪನ್ನವಾಗುವುದು. ಪೂರ್ವ ಸಂಸ್ಕಾರವನ್ನು ಅಪೇಕ್ಷಿಸಿ ಭ್ರಮೆಯು ಹುಟ್ಟುತ್ತದೆ. ಈ ಸಂಸ್ಕಾರವು ಜ್ಞಾನ ಮಾತ್ರವು ಹಾಗೂ ಅನಾದಿಯು. ಹಿಂದಿನ ಹಿಂದಿನ ಭ್ರಮೆಯ ಸಂಸ್ಕಾರದಿಂದ ಮೇಲುಮೇಲಿನ ಭ್ರಮೆಯು ಹುಟ್ಟುವುದು ಎಂದು ಹೇಳಕೂಡದು. ಎಲ್ಲ ಭೇದವು ಭ್ರಾಂತಿಕಲ್ಪಿತವು ಎನ್ನುವ ಪ್ರತಿಜ್ಞೆಯೇ ವ್ಯಾಹತವು ಎಂದು ಹೇಳುತ್ತಾರೆ –

ವ್ಯಾವಹಾರಿಕಮಿತ್ಯೇವ ವಚನಂ ವ್ಯಾವಹಾರಿಕಮ್ ।

ಉತ ನೇತಿ ವಿಕಲ್ಪೇ ತು ಯದಿ ಸ್ಯಾದ್ವ್ಯಾವಹಾರಿಕಮ್ ॥ ೪೪ ॥

ತಸ್ಯಾಪಿ ಬಾಧ್ಯತಾ ಚೇತ್ಸ್ಯಾತ್ ಭೇದಃ ಸ್ಯಾತ್ ಪಾರಮಾರ್ಥಿಕಃ ।

ಅವ್ಯಾವಹಾರಿಕತ್ವಂ ಚೇದ್ಭೇದೋಽಯಂ ಸತ್ಯತಾಂ ಗತಃ ॥ ೪೫ ॥

ಭೇದಮಾತ್ರವು ವ್ಯಾವಹಾರಿಕವು ಎನ್ನುವ ವಚನವೂ ಭ್ರಾಂತಿಸಿದ್ಧವೋ ಅಥವಾ ಭ್ರಾಂತಿಸಿದ್ಧವಲ್ಲವೋ ಹೀಗೆ ಎರಡು ಪಕ್ಷವು ಕೂಡುವಾಗ, ಯಾವ ಪಕ್ಷವನ್ನು ಆಶ್ರಯಿಸಬೇಕು? ವ್ಯಾವಹಾರಿಕವೆಂದು ಹೇಳುವುದಾದರೆ ಮತ್ತು ಆ ವಚನಕ್ಕೆ ಬಾಧ್ಯತ್ವವೂ ಇರುವುದಾದರೆ, ಆಗ ಭೇದವು ಪಾರಮಾರ್ಥಿಕವೆಂದೇ ಆಗುವುದು. ಆ ವಚನವು ಭ್ರಾಂತಿಕಲ್ಪಿತವಲ್ಲವೆಂದು ಹೇಳಿದರೆ ಆಗ ಈ ಭೇದವು ಸತ್ಯತ್ವವನ್ನು ಹೊಂದುವುದು.

ಎಲ್ಲ ಭೇದವೂ ಭ್ರಾಂತವು ಎನ್ನುವ ವಾಕ್ಯಾರ್ಥಕ್ಕೆ ಭ್ರಾಂತತ್ವವೂ ಬಾಧ್ಯತ್ವವೂ ಇರುವುದರಿಂದ, ಎಲ್ಲ ಭೇದಕ್ಕೂ ಸತ್ಯತ್ವವು ಬರಬೇಕಾದೀತು ಎಂದು ಹೇಳುವುದು ಹೇಗೆ ಎಂದರೆ ಅದನ್ನು ಉಪಪಾದಿಸುವುದಕ್ಕಾಗಿ ವ್ಯಾಪ್ತಿಯನ್ನು ಹೇಳುತ್ತಾರೆ –

ಏಕಸ್ಯಾಸತ್ಯತಾಯಾಂ ಹಿ ದ್ವಯೋರೇವ ವಿರುದ್ಧಯೋಃ ।

ಅನ್ಯಸ್ಯ ಸತ್ಯತೈವ ಸ್ಯಾದಿತಿ ಕೇನ ನಿವಾರ್ಯತೇ ॥ ೪೬ ॥

ಎರಡು ವಿರುದ್ಧವಾದ ಧರ್ಮಗಳ ಮಧ್ಯದಲ್ಲಿ ಒಂದಕ್ಕೆ ಅಸತ್ಯತ್ವವಿದ್ದರೆ ಮತ್ತೊಂದಕ್ಕೆ ಸತ್ಯತ್ವವು ಬಂದೇ ಬರುವುದು ಎಂದು ವ್ಯಾಪ್ತಿಯು. ಇದನ್ನು ಯಾವುದರಿಂದಲೂ ನಿವಾರಿಸಲಾಗದು. ಇದಕ್ಕೆ ನಿದರ್ಶನವನ್ನು ಹೇಳುತ್ತಾರೆ –

ಅಸತ್ಯಂ ನೋಕ್ತಮಿತ್ಯುಕ್ತೇ ಸತ್ಯಮುಕ್ತಮಿತಿ ಪ್ರಜಾಃ ।

ಜಾನಂತ್ಯುಕ್ತಂ ತು ನೋ ಸತ್ಯಮಿತ್ಯುಕ್ತೇಽಸತ್ಯತಾಮಪಿ ॥ ೪೭ ॥

ಆಪ್ತನಿಂದ ಹೇಳಲ್ಪಟ್ಟದ್ದು ಅಸತ್ಯವಲ್ಲವೆಂದು ಹೇಳಿದರೆ, ಅವನು ಹೇಳಿದ್ದು ಸತ್ಯವೆಂದು ಪ್ರಜೆಗಳು ತಿಳಿಯುತ್ತಾರೆ. ಹಾಗೆಯೇ ವಂಚಕನು ಹೇಳಿದ್ದು ಸತ್ಯವಲ್ಲ ಎಂದು ಹೇಳಿದರೆ, ಅದು ಅಸತ್ಯವೆಂದೇ ತಿಳಿಯುತ್ತಾರೆ. ಅಂದರೆ ಸತ್ಯತ್ವ–ಅಸತ್ಯತ್ವ ಇವೆರಡಕ್ಕೇ ವಿರುದ್ಧತ್ವವು. ಇದರಲ್ಲಿ ಆಪ್ತೋಕ್ತವಾದುದು ಸತ್ಯವೂ ವಂಚಕನಿಂದ ಉಕ್ತವಾದುದು ಅಸತ್ಯವೂ ಎನ್ನುವುದು ಪ್ರಸಿದ್ಧವು.

ಹಾಗಾದರೆ ಸ್ವಪ್ನದಲ್ಲಿ ಘಟವನ್ನು ನೋಡಿ, ಇಲ್ಲಿ ಘಟವಿಲ್ಲವೆಂದೂ ನೋಡುತ್ತಾನೆ. ಅಲ್ಲಿ ಘಟವೂ, ಘಟಾಭಾವವೂ ಎರಡೂ ಕೂಡ ಮಿಥ್ಯೆಯೇ. ಆದ್ದರಿಂದ ವ್ಯಾಪ್ತಿಭಂಗವು ಎಂದರೆ –

ನ ಸ್ವಪ್ನೇಽಪಿ ದ್ವಯಂ ಮಿಥ್ಯಾ ತತ್ಕೈಕಂ ಸತ್ಯಮೇವ ಹಿ ।

ಭಾವಾಭಾವವುಭೌ ತತ್ರ ಕಥಂ ಮಿಥ್ಯಾ ಭವಿಷ್ಯತಃ ।। ೪೮ ।।

ಭಾವಸ್ಯ ಹಿ ನಿಷೇಧೇ ತು ನಾಭಾವಸ್ಯ ನಿಷೇಧನಮ್ ।

ಸ್ವವಾಚೋಽಸತ್ಯತಾ ಚೇತ್ಸ್ಯಾತ್ ತಸ್ಮಾದ್ಭೇದಸ್ಯ ಸತ್ಯತಾ ।। ೪೯ ।।

ತಸ್ಮಾಜ್ಜೀವೇಶಯೋರ್ಭೇದ ಉಕ್ತನ್ಯಾಯೇನ ಗಮ್ಯತೇ ।

ಸ್ವಪ್ನದಲ್ಲಿ ಎರಡೂ ಕೂಡ ಮಿಥ್ಯೆಯಲ್ಲ. ಘಟದ ಭಾವ ಮತ್ತು ಅಭಾವಗಳ ಮಧ್ಯದಲ್ಲಿ ಒಂದು ಸತ್ಯವೇ. ಯಾವಾಗ ಅಭಾವವು ಅಸತ್ಯವೋ ಆಗ ಘಟವು ಸತ್ಯವೇ. ಯಾವಾಗ ಘಟವು ಅಸತ್ಯವೋ ಆಗ ಅಭಾವಕ್ಕೆ ಸತ್ಯತ್ವವು. ಆದ್ದರಿಂದ ವ್ಯಾಪ್ತಿಗೆ ಭಂಗವಿಲ್ಲ. ಭಾವಾಭಾವಗಳೆರಡೂ ಅಲ್ಲಿ ಮಿಥ್ಯೆಯಾಗುವುದು ಸಾಧ್ಯವಿಲ್ಲ. ಅಲ್ಲಿ ಭಾವಕ್ಕೆ ನಿಷೇಧ ಮಾಡಲಾಗಿದೆ. ಅದು ವಿಹಿತವೇ ಆಗಿದೆ. ಆದರೆ ಅಭಾವಕ್ಕೆ ನಿಷೇಧವು ಯುಕ್ತವಲ್ಲ. ಏಕೆಂದರೆ ಅಭಾವಕ್ಕೆ ನಿಷೇಧ ಮಾಡಿದರೆ ಭಾವಕ್ಕೆ ವಿಹಿತತ್ವ ಬರುವುದು. ಇದರಿಂದ ವ್ಯಾಹತವು. ಪ್ರತಿವಾದಿಯ ವಾಕ್ಯಾರ್ಥವಾದ ಸಕಲ ಭೇದ ಮಿಥ್ಯಾತ್ವಕ್ಕೆ ಅಸತ್ಯತ್ವವು ಬರುವುದಾದರೆ, ಅದರಿಂದ ಭೇದಕ್ಕೆ ಸತ್ಯತ್ವವು ಬರುವುದು. ಹೀಗೆ ಭೇದಕ್ಕೆ ಮಿಥ್ಯಾತ್ವವು ಕೂಡದಿರುವುದರಿಂದ, ಹಿಂದೆ ಹೇಳಿದ ನ್ಯಾಯದಿಂದ ದ್ಯುಭ್ವಾದಿ ಸೂತ್ರಗಳಿಂದ ಜೀವ ಬ್ರಹ್ಮರಿಗೆ ಪಾರಮಾರ್ಥಿಕ ಭೇದವೇ ತಿಳಿಯಲ್ಪಡುತ್ತದೆ.

ಹೀಗೆ ಮೊದಲನೆ ಸೂತ್ರದ ಅಪವ್ಯಾಖ್ಯಾನವನ್ನು ನಿರಾಕರಿಸಿ ಈಗ 'ನ ಪ್ರತೀಕೇ ನ ಹಿ ಸಃ' ಎನ್ನುವ ಎರಡನೆ ಸೂತ್ರದ ಅಪವ್ಯಾಖ್ಯಾನವನ್ನು ನಿರಾಕರಿಸುತ್ತಾರೆ –

ಎರಡನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ – ಮನೋ ಬ್ರಹ್ಮ ಇತ್ಯುಪಾಸೀತ ಇತ್ಯಾದಿಗಳಲ್ಲಿ ಉಕ್ತವಾಗಿರುವ ಪ್ರಕಾರ ಪ್ರತೀಕಗಳನ್ನು ಆತ್ಮತ್ವೇನ ಉಪಾಸನೆ ಮಾಡಬೇಕೋ ಇಲ್ಲವೋ ಎಂದು ಸಂಶಯ. ಬ್ರಹ್ಮನಿಗೆ ಆತ್ಮತ್ವವೂ, ಪ್ರತೀಕಕ್ಕೆ ಬ್ರಹ್ಮವಿಕಾರಿತ್ವದ ನಿಮಿತ್ತದಿಂದ ಬ್ರಹ್ಮತ್ವವೂ ಕೂಡುವುದರಿಂದ

ಆತ್ಮತ್ವೇನ ಉಪಾಸನೆ ಕೂಡುವುದು ಎಂದು ಹೇಳಿದರೆ, ಅದು ಯುಕ್ತವಲ್ಲ. ಏಕೆಂದರೆ ಪ್ರತೀಕ ಮತ್ತು ಆತ್ಮನಿಗೆ ಬ್ರಹ್ಮಸ್ವರೂಪದಿಂದ ಐಕ್ಯವಿದ್ದರೆ, ಆಗ ಪ್ರತೀಕವೇ ಇಲ್ಲದಂತಾಗುವುದು. ಆದ್ದರಿಂದ ಪ್ರತೀಕಗಳಲ್ಲಿ ಆತ್ಮದೃಷ್ಟಿಯನ್ನು ಮಾಡಬಾರದು. ಹೀಗೆ ಅದ್ವೈತಿಗಳು ಮಾಡುವ ಅಪವ್ಯಾಖ್ಯಾನವನ್ನು ಏತಸ್ಮಾದ್ ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ಏತಸ್ಮಾದಾತ್ಮಶಬ್ದೋಽಯಂ ಪರಮಾತ್ಮಾಭಿಧಾ ಭವೇತ್ ॥ ೫೦ ॥

ಪ್ರತೀಕವಿಷಯತ್ವೇನ ವಿಷ್ಣುದೃಷ್ಟಿರ್ನ ತದ್ಭವೇತ್ ।

ಪ್ರತೀಕೇ ವಿಷ್ಣುರಿತ್ಯೇವ ತಸ್ಮಾತ್ಕಾರ್ಯಾ ಹ್ಯುಪಾಸನಾ ॥ ೫೧ ॥

ನ ಚ ವಿಷ್ಣುಃ ಪ್ರತೀಕಂ ಯತ್ತಸ್ಮಾತ್..... ।

ಹಿಂದೆ ಹೇಳಿದ ನ್ಯಾಯದಿಂದ ಆತ್ಮೇತಿ ಎನ್ನುವ ಸೂತ್ರದಲ್ಲಿನ ಈ ಆತ್ಮ ಶಬ್ದವು ಪರಮೇಶ್ವರನನ್ನೇ ಹೇಳುತ್ತದೆ. ಆದ್ದರಿಂದ ನ ಪ್ರತೀಕೇ ಎನ್ನುವ ಪ್ರತಿಜ್ಞಾವಾಕ್ಯಕ್ಕೆ ಪ್ರತೀಕವಿಷಯತ್ವದಿಂದ ವಿಷ್ಣುದೃಷ್ಟಿಯನ್ನು ಮಾಡತಕ್ಕದ್ದು ಎಂದು ಆಗುವುದಿಲ್ಲ. ಆದ್ದರಿಂದ ಪ್ರತಿಕದಲ್ಲಿ ವಿಷ್ಣುವು ಎಂಬುದಾಗಿಯೇ ಉಪಾಸನೆಯನ್ನು ಮಾಡತಕ್ಕದ್ದು. ಯಾವಕಾರಣದಿಂದ ವಿಷ್ಣುವು ಪ್ರತಿಮೆಯಾಗಲೀ ಜೀವನಾಗಲೀ ಆಗುವುದಿಲ್ಲವೋ ಆದಕಾರಣ ಪ್ರತೀಕಗಳಲ್ಲಿ ಜೀವನು ಎನ್ನುವ ಉಪಾಸನೆಯೂ ಕೂಡುವುದಿಲ್ಲ.

ಈಗ ಬ್ರಹ್ಮದೃಷ್ಟಿರುತ್ಕರ್ಷಾತ್ ಎನ್ನುವ ಮೂರನೆಯ ಸೂತ್ರಕ್ಕೆ ಅಪವ್ಯಾಖ್ಯಾನ ವನ್ನು ನಿರಾಕರಿಸುತ್ತಾರೆ –

ಪ್ರತಿಮಾದಿಗಳಲ್ಲಿರುವಂತೆ ಆದಿತ್ಯಾದಿಗಳಲ್ಲಿ ಬ್ರಹ್ಮದೃಷ್ಟಿಯನ್ನು ಮಾಡತಕ್ಕದ್ದು. ಉತ್ಕರ್ಷತ್ವ ಎನ್ನುವುದೇ ಇದಕ್ಕೆ ಸಮರ್ಥನೀಯ ಯುಕ್ತಿಯು. ಈ ಕಾರಣದಿಂದ ಆದಿತ್ಯಾದಿಗಳಲ್ಲಿ ಬ್ರಹ್ಮತ್ವೇನ ಉಪಾಸನೆಯನ್ನು ಮಾಡತಕ್ಕದ್ದು ಎಂದು ಈ ಸೂತ್ರಕ್ಕೆ ಅದ್ವೈತಿಗಳು ಮಾಡುವ ಅಪವ್ಯಾಖ್ಯಾನವನ್ನು ನಾತ್ಮೇತಿ ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

..... ನಾತ್ಮೇತ್ಯುಪಾಸನಾ ।

ಇತಿ ಪಕ್ಷೇ ಯದಾ ಬ್ರಹ್ಮದೃಷ್ಟಿಶ್ಚಾತ್ರ ವಿರುದ್ಧ್ಯತೇ ॥ ೫೨ ॥

ನಾತ್ಮೇತ್ಯುಪಾಸನಾ ಎನ್ನುವುದರಿಂದ ಪ್ರತೀಕೇ ನ ಹಿ ಸಃ ಎನ್ನುವ ಸಮಗ್ರ ಸೂತ್ರಾರ್ಥವನ್ನು ಅನುವಾದ ಮಾಡುತ್ತಾರೆ. ಪ್ರತೀಕಗಳಲ್ಲಿ ಜೀವ ಎಂದು ಉಪಾಸನೆ ಮಾಡಕೂಡದು. ಏಕೆಂದರೆ ಆ ಉಪಾಸಕನು ಪ್ರತೀಕಗಳಲ್ಲವೆಂದು ಪ್ರಸಿದ್ಧವು. ಆದ್ದರಿಂದ ಪ್ರತೀಕಗಳಲ್ಲಿ ಜೀವನೆಂದು ವ್ಯಾಖ್ಯಾನಮಾಡಿದ ಪಕ್ಷದಲ್ಲಿ ಈ ಪ್ರತೀಕಗಳಲ್ಲಿ ಬ್ರಹ್ಮ ಎನ್ನುವ ದೃಷ್ಟಿಯು ವಿರುದ್ಧವಾಗುತ್ತದೆ.

ಇದನ್ನೇ ವಿವರಿಸುತ್ತಾರೆ –

ಸ ನೇತಿ ಯುಕ್ತಿಸ್ತತ್ರಾಪಿ ಸಮೇತ್ಯುಕ್ತವಿರುದ್ಧತಾ ।

ಪ್ರತೀಕಗಳಲ್ಲಿ ಆತ್ಮತ್ವೇನ ಉಪಾಸನೆ ಮಾಡಕೂಡದು ಎನ್ನುವ ವಿಷಯದಲ್ಲಿ ಸಃ ನ ಎಂಬ ಸೂತ್ರಾಂಶದಿಂದ ನಿನ್ನಿಂದ ತಾದಾತ್ಮ್ಯ ಅಭಾವರೂಪವಾದ ಯಾವ ಯುಕ್ತಿಯು ಹೇಳಲ್ಪಟ್ಟಿತೋ ಅದು ಬ್ರಹ್ಮ ಮತ್ತು ಪ್ರತೀಕಗಳಲ್ಲಿಯೂ ಸಮವೇ ಆಗಿದೆ. ಈ ಕಾರಣದಿಂದ ಪ್ರತೀಕಗಳಲ್ಲಿ ಬ್ರಹ್ಮದೃಷ್ಟಿಯನ್ನು ಮಾಡಬೇಕು ಎಂದು ಹೇಳುವುದು ಹಿಂದೆ ಹೇಳಿದ ಯುಕ್ತಿಗೆ ವಿರುದ್ಧವು.

ಇಲ್ಲಿನ ಅಭಿಪ್ರಾಯ ಹೀಗಿದೆ – ಈ ಸೂತ್ರಕ್ಕೆ ಪ್ರತೀಕಗಳಲ್ಲಿ ಬ್ರಹ್ಮದೃಷ್ಟಿಯನ್ನು ಮಾಡಬೇಕು ಎಂಬ ವ್ಯಾಖ್ಯಾನವು ಸರಿಯಲ್ಲ. ಪ್ರತೀಕದಲ್ಲಿ ಬ್ರಹ್ಮತ್ವವಿಲ್ಲದಿರುವ ಪ್ರಯುಕ್ತ ಬ್ರಹ್ಮತ್ವೇನ ಉಪಾಸನೆಯು ಅಯುಕ್ತವು. ಪ್ರತೀಕಗಳಲ್ಲಿ ಆತ್ಮತ್ವೇನ ಉಪಾಸನೆಯು ಮಾಡತಕ್ಕದ್ದಲ್ಲ ಎಂದು ಹಿಂದಿನ ಸೂತ್ರದ ವ್ಯಾಖ್ಯಾನದಲ್ಲಿ ಪ್ರತಿವಾದಿಯೇ ಹೇಳಿದ್ದಾನೆ. ಬ್ರಹ್ಮವು ಸತ್ಯವೂ ಪ್ರತೀಕವು ಕಲ್ಪಿತವೂ ಆದುದರಿಂದ ಅವುಗಳಿಗೆ ಅಭೇದವು ಕೂಡುವುದಿಲ್ಲ.

ಹಾಗಾದರೆ ನ ಹಿ ಸಃ ಎನ್ನುವ ನಿರ್ವಿಶೇಷಣವಾದ ಹೇತುವು ಸೂತ್ರಕಾರರಿಗೆ ಅಭಿಮತವಲ್ಲ. ಆದ್ದರಿಂದ ಪ್ರತೀಕಗಳಲ್ಲಿ ಬ್ರಹ್ಮದೃಷ್ಟಿಯು ಹಿಂದೆ ಹೇಳಿದ ಯುಕ್ತಿಗೆ ವಿರುದ್ಧವಲ್ಲ. ಪ್ರತೀಕವನ್ನು ಬ್ರಹ್ಮತ್ವೇನ ಉಪಾಸನೆಮಾಡುವುದರಿಂದ ಉಪಾಸಕನಿಗೆ ಉತ್ಕರ್ಷಪ್ರಾಪ್ತಿಯಿದೆ. ಆದ್ದರಿಂದ ಬ್ರಹ್ಮತ್ವವಿಲ್ಲದಿದ್ದರೂ ಉಪಾಸನೆಯು ಯುಕ್ತವೇ ಆಗುವುದು ಎಂದರೆ –

ಯದ್ಯಪ್ಯುತ್ಕರ್ಷಮಾತ್ರೇಣ ಹ್ಯತದ್ಭಾವೇಽಪ್ಯುಪಾಸನಾ ॥ ೫೩ ॥

ಉತ್ಕರ್ಷ ಆತ್ಮನೋಽಪಿ ಸ್ಯಾಚ್ಚೇತನತ್ವಾದಚೇತನಾತ್ ।

ತಸ್ಮಾದತತ್ತ್ವಂ ನೋಪಾಸ್ಯಮಿತಿ ವೇದವಿದಾಂ ಮತಮ್ ॥ ೫೪ ॥

ಪ್ರತೀಕಗಳಿಗೆ ಬ್ರಹ್ಮತ್ವವಿಲ್ಲದಿದ್ದರೂ ಉತ್ಕರ್ಷಪ್ರಾಪ್ತಿ ಮಾತ್ರದಿಂದ ಬ್ರಹ್ಮತ್ವೇನ ಉಪಾಸನೆಯು ಅಂಗೀಕರಿಸಲ್ಪಟ್ಟರೆ ಆಗ ಆತ್ಮತ್ವದಿಂದಲೂ ಉಪಾಸನೆಯು ಅಂಗೀಕರಿಸಲ್ಪಡಬೇಕು. ಏಕೆಂದರೆ ಬ್ರಹ್ಮನಂತೆ ಆತ್ಮನಿಗೆ ಚೇತನತ್ವವಿರುವ ಪ್ರಯುಕ್ತ ಆತ್ಮನಿಗೂ ಕೂಡ ಅಚೇತನವಾದ ಪ್ರತೀಕದ ದೆಶೆಯಿಂದ ಉತ್ಕರ್ಷವು ಬರುವುದು. ಆದ್ದರಿಂದ ಅತತ್ವವನ್ನು ಉಪಾಸನೆ ಮಾಡಕೂಡದು. (ಯಾವುದು ತತ್ವವಲ್ಲವೋ ಅದನ್ನು ತತ್ವವೆಂದು ಉಪಾಸನೆ ಮಾಡುವುದೇ ಅತತ್ವ ಉಪಾಸನೆಯು). ಹೀಗೆ ವೇದ ಬಲ್ಲವರ ಅಭಿಪ್ರಾಯ.

ಹೀಗೆ ಪ್ರತಿಜ್ಞಾವ್ಯಾಖ್ಯಾನವನ್ನು ನಿರಾಕರಿಸಿ, ಈಗ ಉತ್ಕರ್ಷಾತ್ ಎನ್ನುವ ಹೇತುವ್ಯಾಖ್ಯಾನವನ್ನು ನಿರಾಕರಿಸುತ್ತಾರೆ –

ಉತ್ಕರ್ಷಾದ್ಬ್ರಹ್ಮತಾಧ್ಯಾನೇ ಯದಿ ಸ್ಯಾತ್ಫಲಮಂಜಸಾ ।

ಬ್ರಹ್ಮಕೋ ನೀಚತಾಜ್ಞಾನಾದನರ್ಥಃ ಕಿಂ ನ ಜಾಯತೇ ॥ ೫೫ ॥

ಬ್ರಹ್ಮತ್ವ ಧ್ಯಾನದಲ್ಲಿ ಪ್ರತೀಕಗಳಿಗೆ ಉತ್ಕರ್ಷವು ದೃಷ್ಟವಾಗಿರುವುದರಿಂದ ಪುರಷಾರ್ಥರೂಪವಾದ ಫಲವು ಆಗುವುದಾದರೆ, ಆಗ ಬ್ರಹ್ಮನಿಗೆ ನೀಚತ್ವದ ಧ್ಯಾನದಿಂದ ಅನರ್ಥವು ಏಕೆ ಆಗಲಾರದು? ಆಗಿಯೇ ಆಗುವುದು ಎಂದು ಭಾವ. ಆದ್ದರಿಂದ ಇದು ಅಕಾರ್ಯವೇ ಆಗಿದೆ.

ಬ್ರಹ್ಮತ್ವ ಧ್ಯಾನಕ್ಕೆ ಪುರುಷಾರ್ಥರೂಪ ಫಲವನ್ನು ಅಂಗೀಕರಿಸಿ ಹೀಗೆ ಹೇಳಿದ್ದು. ವಸ್ತುತಃ ಪುರಷಾರ್ಥವಲ್ಲ, ಮತ್ತೆ ಅನರ್ಥವೇ ಆಗುವುದು ಎಂದು ಹೇಳುತ್ತಾರೆ –

ಅಚೇತನಸ್ಯ ಬ್ರಹ್ಮತ್ವಧ್ಯಾನೇ ತುಷ್ಟಿರ್ನ ಹಿ ಕ್ವಚಿತ್ ।

ನೀಚಸ್ಯ ಸ್ವಾತ್ಮತಾಜ್ಞಾನಾತ್ ಕುಪ್ಯತಿ ಬ್ರಹ್ಮ ಲೋಕವತ್ ॥ ೫೬ ॥

ಅಚೇತನಕ್ಕೆ ಬ್ರಹ್ಮತ್ವ ಧ್ಯಾನದಲ್ಲಿ ಎಲ್ಲಿಯೂ ತುಷ್ಟಿಯು ಆಗಲಾರದು. ಆದ್ದರಿಂದಲೇ ಅದು ಪುರಷಾರ್ಥಕ್ಕೆ ಕಾರಣವಾಗದು. ನೀಚವಾದ ಪ್ರತೀಕವನ್ನು ಸುಖಸ್ವರೂಪವಾದ ಆತ್ಮವೆಂದು ಧ್ಯಾನ ಮಾಡಿದರೆ ಬ್ರಹ್ಮನು ಕೋಪಗೊಳ್ಳುತ್ತಾನೆ. ಅಂದರೆ ಅನರ್ಥವನ್ನು ಉಂಟುಮಾಡುತ್ತಾನೆ. ಇದಕ್ಕೆ ದೃಷ್ಟಾಂತ ಲೋಕವತ್. ಲೋಕದಲ್ಲಿ ಶಿಲಾದಿಗಳನ್ನು ರಾಜನೆಂದು ಧ್ಯಾನಮಾಡಿದರೆ ಹೇಗೆ ಸಂತುಷ್ಟವೂ ಆಗುವುದಿಲ್ಲವೋ, ಪುರುಷಾರ್ಥಪ್ರದವೂ ಆಗುವುದಿಲ್ಲವೋ ಹಾಗೆ ಎಂದರ್ಥ.

ನಾವು ಬ್ರಹ್ಮನಲ್ಲಿ ಪ್ರತೀಕತ್ವೇನ ಉಪಾಸನೆಯನ್ನು ಹೇಳುವುದಿಲ್ಲ. ಹಾಗೆ ಹೇಳಿದ್ದರೆ ಬ್ರಹ್ಮನ ಕೋಪಕ್ಕೆ ಗುರಿಯಾಗಬೇಕಿತ್ತು. ಆದರೆ ನಾವು ಪ್ರತೀಕದಲ್ಲಿ ಬ್ರಹ್ಮತ್ವ ಉಪಾಸನೆಯನ್ನು ಹೇಳುತ್ತೇವೆ. ಅದರಿಂದ ಪುರುಷಾರ್ಥಪ್ರಾಪ್ತಿಯು ಎಂದರೆ –

ಚಂಡಾಲೋ ನೃಪ ಇತ್ಯುಕ್ತೇ ನೃಪಶ್ಚಂಡಾಲ ಇತ್ಯಪಿ ।

ಕೋ ವಿಶೇಷಃ ಪರಿಜ್ಞಾತೇ ನೃಪೇಣ ಸ್ಯಾತ್ಕಥಂಚನ ॥ ೫೭ ॥

ಚಂಡಾಲನನ್ನು ರಾಜ ಎಂದು ಹೇಳಿದರೂ, ರಾಜನನ್ನು ಚಂಡಾಲ ಎಂದು ಹೇಳಿದರೂ ಏನೂ ವಿಶೇಷವಿಲ್ಲ. ಎರಡು ಪ್ರಕಾರದಲ್ಲಿಯೂ ತಾತ್ಪರ್ಯವು ಒಂದೇ ಆಗಿರುವುದು. ಹೀಗೆ ಯಾವ ಪ್ರಕಾರದಿಂದ ಹೇಳಿದರೂ, ರಾಜನಿಂದ ಅನರ್ಥವು ಆಗಿಯೇ ಆಗುವುದು. ಇದೇರೀತಿ ಪ್ರತೀಕವೇ ಬ್ರಹ್ಮನೆಂದೂ ಅಥವಾ ಬ್ರಹ್ಮನು ಪ್ರತೀಕನೆಂದೂ ಯಾವಪ್ರಕಾರದಿಂದ ಉಪಾಸನೆಮಾಡಿದರೂ ಅನರ್ಥವು ಸಮವೇ.

ಹಾಗಾದರೆ ಸಾರಥಿಯನ್ನು ರಾಜನೆಂದು ಕಾಣುವುದು ಫಲವುಳ್ಳದ್ದು, ರಾಜನಲ್ಲಿ ಸಾರಥಿಯನ್ನು ಕಾಣುವುದು ಅನರ್ಥಕ್ಕೆ ಕಾರಣವೆಂದು ಕಂಡಿದೆ. ಆದ್ದರಿಂದ

ಎರಡಕ್ಕೂ ಸಾಮ್ಯವು ಹೇಗೆ ಹೇಳಲ್ಪಡುತ್ತದೆ ಎಂದರೆ, ಹಾಗೆ ಹೇಳಕೂಡದು. ಅಲ್ಲಿ ಹಾಗೆ ದೃಷ್ಟಿಯಿಲ್ಲ. ಅದು ಸಿಂಹೋ ದೇವದತ್ತಃ ಎಂಬಂತೆ ಕೇವಲ ಔಪಚಾರಿಕವಷ್ಟೆ. ದೃಷ್ಟಿಯಿದ್ದರೆ ಅಲ್ಲಿಯೂ ಅನರ್ಥವು ಸಮವೇ ಆಗಿದೆ ಎಂಬ ಅಭಿಪ್ರಾಯದಿಂದ ಪುರತಃ ಎಂದು ಹೇಳುತ್ತಾರೆ –

ಪುರತೋ ನರದೇವಸ್ಯ ಚಂಡಾಲೋ ಯದಿ ಪೂಜ್ಯತೇ ।

ರಾಜವತ್ಕಿಂ ನ ಕೋಪಃ ಸ್ಯಾದ್ರಾಜ್ಞೋ ಲೋಕೇऽಭಿಪಶ್ಯತಿ ॥ ೫೮ ॥

ಪ್ರಜೆಗಳ ಸಮಕ್ಷಮದಲ್ಲಿ ರಾಜನ ಎದುರಿನಲ್ಲಿರುವ ಚಂಡಾಲನನ್ನು ರಾಜನಂತೆ ಪೂಜಿಸಿದ ಪಕ್ಷದಲ್ಲಿ ರಾಜನಿಗೆ ಕೋಪವಾಗುವುದಿಲ್ಲವೇನು?

ಕೇವಲ ದೃಷ್ಟಿಗೆ ಕಾರಣವಾದ ಪೂಜೆಯಿಂದ ಮಾತ್ರವಲ್ಲ, ಮತ್ತೆ ಅಂಥಹ ಉಕ್ತಿಯಿಂದಲೂ ಕೂಡ ರಾಜನಿಗೆ ಕೋಪವಾಗುವುದು ಎಂದು ಹೇಳುತ್ತಾರೆ –

ರಾಜ್ಞಸ್ತು ಪುರತಃ ಪ್ರೋಕ್ತೇ ಚಂಡಾಲೇ ನೃಪ ಇತ್ಯಪಿ ।

ಆತ್ಮಾನಂ ಸ ಇತಿ ಪ್ರೋಕ್ತಮಿತಿವದ್ಧ್ಯೇವ ಕುಪ್ಯತಿ ॥ ೫೯ ॥

ರಾಜನ ಎದುರಿನಲ್ಲಿಯೇ ಚಂಡಾಲನು ರಾಜನು ಎಂದು ಹೇಳಲ್ಪಡಲು, ತನ್ನನ್ನೇ ಆ ಚಂಡಾಲನೆಂದು ಬೆನ್ನಾಗಿ ಹೇಳಿಂದತಾಯಿತೆಂದು ರಾಜನು ಕುಪಿತನು ಆಗಿಯೇ ಆಗುತ್ತಾನೆ. ಪೂಜೆಯೇ ಕೋಪಕ್ಕೆ ಕಾರಣ, ದೃಷ್ಟಿಯಲ್ಲ ಎಂಬುದನ್ನು ನಿರಾಕರಿಸಿ; ಯಾವದೇ ಪ್ರಕಾರದಿಂದಲೂ ಅಭೇದದರ್ಶನವು ಅನರ್ಥಕರ ಎಂಬ ವಿವೇಕೋದಯಕ್ಕಾಗಿ ಈ ಶ್ಲೋಕವು.

ಹೀಗೆ ಉದ್ದೇಶವಿಧಾನೋಕ್ತಿಗಳಿಂದ ದೃಷ್ಟಿ–ಉಪಾಸನೆಗಳೆಂಬ ಎರಡು ಪ್ರಕಾರ ಗಳನ್ನು ಅಂಗೀಕರಿಸಿ ಅನರ್ಥರೂಪ ಫಲಸಾಮ್ಯವು ಹೇಳಲ್ಪಟ್ಟಿತು. ಈಗ ಆ ದ್ವೈರೂಪ್ಯವೂ ಇಲ್ಲವೆಂದು ಹೇಳುತ್ತಾರೆ –

ಅಭೇದೇನೈತಯೋರ್ಧ್ಯಾನೇ ಕೋ ವಿಶೇಷೋ ವಚಸ್ಯಪಿ ।

ಅಯಂ ರಾಜಾ ತ್ವಮಿತ್ಯುಕ್ತೇ ಚಂಡಾಲೇऽಥ ನೃಪೇऽಪಿ ಚ ॥ ೬೦ ॥

ಚಂಡಾಲ ಇತಿ ತು ಪ್ರೋಕ್ತೇ ಸಮಮೇವ ಹಿ ದೂಷಣಮ್ ।

ಬ್ರಹ್ಮ – ಪ್ರತೀಕಗಳಿಗೆ ಅಭೇದದಿಂದ ಧ್ಯಾನವು ಅಂಗೀಕರಿಸಲ್ಪಡಲು ಕೇವಲ ಅನರ್ಥಸಾಮ್ಯವಲ್ಲ, ಮತ್ತೆ ವಚನದಲ್ಲಿಯೂ ಯಾವ ವಿಶೇಷವೂ ಇಲ್ಲ (ಅಂದರೆ ಸಾಮ್ಯವಿದೆ). ಈ ವಿಷಯದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ. ಚಂಡಾಲನನ್ನು ಕುರಿತು ನೀನು ಈ ರಾಜನು ಎಂದೂ, ಹಾಗೆಯೇ ರಾಜನನ್ನು ಕುರಿತು ನೀನು ಈ ಚಂಡಾಲನೆಂದೂ ಹೇಳುತ್ತಿರಲು, ನೀಚತ್ವ ರೂಪವಾದ ದೂಷಣವು ಸಮಾನವೇ ಆಗಿದೆಯಷ್ಟೆ.

ಹಾಗಾದರೆ ಬ್ರಹ್ಮ ಪ್ರತೀಕಗಳಿಗೆ ಅಭೇದದಿಂದ ಧ್ಯಾನಮಾಡಿದರೆ ದೂಷಣವು ಕೂಡುವುದು. ಆದರೆ ನಾವು ಪ್ರತೀಕಕ್ಕೆ ಬ್ರಹ್ಮತ್ವವನ್ನು ಹೇಳುತ್ತೇವೆ ಹೊರತು ಬ್ರಹ್ಮನಿಗೆ ಪ್ರತೀಕತ್ವವಲ್ಲ ಎಂದರೆ –

ಧ್ಯಾತೇಽಪ್ಯೇಕಸ್ಯ ತದ್ಭಾವೇ ತದ್ಭಾವೋಽನ್ಯಸ್ಯ ಕಿಂ ನ ತತ್ ।। ೬೧ ।।

ಆ ಬ್ರಹ್ಮ–ಪ್ರತೀಕಗಳಲ್ಲಿ ಪ್ರತೀಕಕ್ಕೆ ಬ್ರಹ್ಮಭಾವವು ಧ್ಯಾನಿಸಲ್ಪಡಲು, ಬ್ರಹ್ಮನಿಗೆ ಪ್ರತೀಕಭಾವವು ಧ್ಯಾನಮಾಡಿದಂತೆ ಆಗುವುದಿಲ್ಲವೇನು?

ಹಾಗಾದರೆ ಈ ಉಪಾಸನೆಯು ಬ್ರಹ್ಮನಿಂದ ತಿಳಿಯಲ್ಪಟ್ಟರೆ ಮಾತ್ರ ಅನರ್ಥವು ಆಗುವುದು, ಬ್ರಹ್ಮನಿಗೆ ತಿಳಿಯದಿದ್ದರೆ ಅನರ್ಥವಿಲ್ಲ ಎಂದರೆ –

ನ ಚೈವ ತದವಿಜ್ಞಾತಂ ಸರ್ವಜ್ಞಬ್ರಹ್ಮಣಾ ಕ್ವಚಿತ್ ।

ಸರ್ವಜ್ಞನಾದ್ದರಿಂದ ಬ್ರಹ್ಮನಿಂದ ಈ ಉಪಾಸನೆಯು ಎಲ್ಲಿಯೂ ಅಜ್ಞಾತವು ಆಗುವುದೇ ಇಲ್ಲ.

ತಸ್ಮಾದಪೇಶಲಂ ಸರ್ವಮನ್ಯಸ್ಯ ಬ್ರಹ್ಮತಾವಚಃ ।। ೬೨ ।।

ತಸ್ಮಾದ್ಯಥೋಕ್ತಮಾರ್ಗೇಣ ಬ್ರಹ್ಮೋಪಾಸ್ಯಂ ಮುಮುಕ್ಷುಭಿಃ ।

ಆದ್ದರಿಂದ ಶ್ರುತಿಸೂತ್ರ ವ್ಯಾಖ್ಯಾನರೂಪವಾದ ಬ್ರಹ್ಮತ್ವ ವಚನವು ಇತರರಿಗೆ ತಿಳಿಯುವುದಿಲ್ಲ. ಆದ್ದರಿಂದ ನಾವು ಹೇಳಿದ ಸೂತ್ರಾರ್ಥವನ್ನು ಅತಿಕ್ರಮಿಸದೆ ಇರತಕ್ಕ ಮಾರ್ಗದಿಂದ ಮುಮುಕ್ಷುಗಳಿಂದ ಪರಬ್ರಹ್ಮನು ಉಪಾಸ್ಯನು.

ತದಧಿಗಮಾಧಿಕರಣಮ್

।। ಓಂ ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್ ಓಂ ।।

ಸಾಧನ ವಿಚಾರವನ್ನು ಸಮಾಪ್ತಿಗೊಳಿಸಿ ಈಗ ಫಲವನ್ನು ನಿರೂಪಿಸುತ್ತಾರೆ. ಪ್ರತಿಬಂಧಕಗಳಾದ ಅನಂತಾನಂತ ಪೂರ್ವೋತ್ತರ ಕರ್ಮಗಳು ಇರುವುದರಿಂದ ಜ್ಞಾನಿಗಳಿಗೆ ಮೋಕ್ಷವಾಗದು ಎಂಬ ಆಶಂಕೆಯನ್ನು ನಿರಾಕರಿಸುವುದಕ್ಕಾಗಿ ಕರ್ಮ ನಾಶಾಖ್ಯ ಜ್ಞಾನಫಲವು ಇಲ್ಲಿ ಹೇಳಲ್ಪಡುತ್ತದೆ. ಅದರಲ್ಲಿ ಜ್ಞಾನಸಾಮರ್ಥ್ಯದಿಂದಲೇ ಕರ್ಮಕ್ಷಯವು ಎಂಬ ಪ್ರತೀತಿಯನ್ನು ನಿರಾಕರಿಸಲು ಸೂತ್ರತಾತ್ಪರ್ಯವನ್ನು ಹೇಳುತ್ತಾರೆ –

ತಥೋಪಾಸ್ಯಾಂಜಸಾ ದೃಷ್ಟಂ ಬ್ರಹ್ಮ ಪಾಪಂ ಚ ಭಸ್ಮಸಾತ್ ।। ೬೩ ।।

ಕರೋತಿ ನಿಖಿಲಂ ಪೂರ್ವಂ ಪಾಶ್ಚಾತ್ತ್ಯಸ್ಯಾಪ್ಯಸಂಗತಾಮ್ ।

ಕರೋತಿ..... ।।

ಹಿಂದೆ ಹೇಳಿದ ಪ್ರಕಾರದಿಂದ ಆದರ ನೈರಂತರ್ಯಗಳಿಂದ ಉಪಾಸನೆ ಮಾಡಿ

ರಾಯದುರ್ಗದ ಮಠದ ಕೃಷ್ಣಾಚಾರ
ಬಳ್ಳಾರಿ

ಕಾಣಲ್ಪಟ್ಟ ಪರಬ್ರಹ್ಮನು ಜ್ಞಾನಪೂರ್ವದಲ್ಲಿರತಕ್ಕ ಎಲ್ಲ ಪಾಪವನ್ನೂ, ಅನಿಷ್ಟಪುಣ್ಯವನ್ನೂ ಕೂಡ ಸುಟ್ಟು ಬೂಧಿ ಮಾಡುತ್ತಾನೆ. ಜ್ಞಾನೋತ್ತರ ಮಾಡಲ್ಪಟ್ಟ ಪಾಪಕ್ಕೂ ಅನಿಷ್ಟಪುಣ್ಯಕ್ಕೂ ಸಂಗವಾಗದಂತೆ (ಲೇಪವಾಗದಂತೆ) ಮಾಡುತ್ತಾನೆ. ಇದರಿಂದ 'ಅತೋಽನ್ಯದಪೀತ್ಯೇಕೇಷಾಮುಭಯೋಃ' ಸೂತ್ರದ ತಾತ್ಪರ್ಯವನ್ನು ಹೇಳಿದಂತೆ ಆಯಿತು.

॥ ಓಂ ಇತರಸ್ಯಾಪ್ಯೇವಮಸಂಶ್ಲೇಷಃ ಪಾತೇ ತು ಓಂ ॥

ಈ ಸೂತ್ರವನ್ನು ಕೆಲವರು ಬ್ರಹ್ಮಜ್ಞಾನಿಗೇನೆ ಶರೀರಪಾತವು ಸನ್ನಿಹಿತವಾಗಿರಲು ಪಾಪದಂತೆಯೇ ಪುಣ್ಯಕ್ಕೂ ಕೂಡ ಅಶೇಷ ವಿನಾಶವು ಆಗುವುದು ಎಂದು ವ್ಯಾಖ್ಯಾನ ಮಾಡುತ್ತಾರೆ. ಅದು ಸರಿಯಲ್ಲ. ಹಾಗಾದರೆ ಸೂತ್ರದ ತಾತ್ಪರ್ಯವೇನು ಎಂದರೆ –

..... ತದ್ದ್ವಿಷಶ್ಚೈವಂ ಪುಣ್ಯನಾಶೋಽಪ್ಯಸಂಗತಾ ॥ ೬೪ ॥

ಬ್ರಹ್ಮದ್ವೇಷಿಗೂ ಕೂಡ ಜ್ಞಾನಿಯಂತೆಯೇ ದ್ವೇಷಪೂರ್ತಿಯಾಗುವ ಮುಂಚಿನ ಪುಣ್ಯಕ್ಕೆ ನಾಶವೂ, ಆಮೇಲಿನ ಪುಣ್ಯಕ್ಕೆ ಅಸಂಗವೂ ಆಗುವುದು.

ಈ ಅಧಿಕರಣದಲ್ಲಿರತಕ್ಕ ಯದೇವ ವಿದ್ಯಯೇತಿ ಹಿ ಎನ್ನುವ ಸೂತ್ರಕ್ಕೆ ಪುನರುಕ್ತಿಯು. ಇದರ ಅರ್ಥವು ತಚ್ಛ್ರುತೇಃ ಎಂಬ ಸೂತ್ರದಿಂದ ಹಿಂದೆಯೇ ಉಕ್ತವಾಗಿದೆ ಎಂದರೆ –

ಯದೇವ ವಿದ್ಯಯೇತ್ಯತ್ರ ಪೂರ್ವೋಕ್ತಾದ್ಧಿ ವಿಶಿಷ್ಯತೇ ।

ಪೂರ್ವಂ ಸ್ವರ್ಗಾದಿಲಬ್ಧ್ಯರ್ಥಂ ವೀರ್ಯತ್ವೇನ ಚೋದಿತಮ್ ॥ ೬೫ ॥

ಕರ್ಮ ವಿದ್ಯಾಯುತಂ ಪಶ್ಚಾನ್ಮೋಕ್ಷೇ ವೀರ್ಯಪ್ರದಂ ತ್ವಿತಿ ।

ಯದೇವ ವಿದ್ಯಯಾ ಎನ್ನುವಲ್ಲಿ ಹೇಳಿದ ಪ್ರಮೇಯವು ತಚ್ಛ್ರುತೇಃ ಎಂದು ಹಿಂದೆ ಹೇಳಿದ ಪ್ರಮೇಯದ ದೆಶೆಯಿಂದ ವಿಲಕ್ಷಣವಾಗಿದೆ. ಹೇಗೆ ವಿಲಕ್ಷಣವಾಗಿದೆ ಎಂದರೆ, ಪೂರ್ವದಲ್ಲಿ ತಚ್ಛ್ರುತೇಃ ಎನ್ನುವ ಸೂತ್ರದಿಂದ ವಿದ್ಯೆಯಿಂದ ಯುಕ್ತವಾದ ಕರ್ಮವು ಮೋಕ್ಷದಿಂದ ಇತರವಾದ ಸ್ವರ್ಗಾದಿ ಫಲವನ್ನು ಕೊಡುವ ಸಾಮರ್ಥವುಳ್ಳದ್ದೆಂದು ಹೇಳಲ್ಪಟ್ಟಿದೆ. ಆಮೇಲೆ ಯದೇವ ವಿದ್ಯಯಾ ಎನ್ನುವ ಸೂತ್ರದಿಂದ ವಿದ್ಯೆಯಿಂದ ಯುಕ್ತವಾದ ಕರ್ಮವು ಮೋಕ್ಷದಲ್ಲಿ ಆನಂದಾತಿಶಯವನ್ನು ಕೊಡತಕ್ಕುದೆಂದು ಹೇಳಲ್ಪಟ್ಟಿದೆ. ಆದ್ದರಿಂದ ಪುನರುಕ್ತಿಯಿಲ್ಲ.

ಎಲ್ಲ ಕರ್ಮಗಳು ನಾಶವಾಗುತ್ತಿರುವಂತೆಯೇ ಮುಕ್ತಿಯಾಗಬೇಕಾಗುವುದು. ಜೀವನ್ಮುಕ್ತರೂ ಕಂಡುಬರುವುದರಿಂದ ಹೀಗೆ ಹೇಳಕೂಡದು ಎಂಬ ಆಶಂಕೆಯನ್ನು ಪರಿಹರಿಸಲು ಸೂತ್ರಕಾರರು ಅನಾರಬ್ಧಕಾರ್ಯೇ ಏವ ತು ಪೂರ್ವೇ ತದವಧೇಃ

ಎಂದು ಹೇಳಿದ್ದಾರೆ. ಹಾಗಾದರೆ ಪ್ರಾರಬ್ಧಕರ್ಮವಿರಲಿಕ್ಕೆ ಮೋಕ್ಷವು ಹೇಗೆ ಆಗುವುದೆಂದು ಆಶಂಕಿಸಿ, ಓಂ ಭೋಗೇನ ತ್ವಿತರೇ ಕ್ಷಪಯಿತ್ವಾಥ ಸಂಪತ್ಸ್ಯತೇ ಓಂ ಎಂಬ ಸೂತ್ರವನ್ನು ಹೇಳಿದ್ದಾರೆ. ಇದೂ ಕೂಡ ಬ್ರಹ್ಮಜ್ಞಾನಿಮಾತ್ರ ವಿಷಯಕವಲ್ಲ ಎನ್ನುವ ಅಭಿಪ್ರಾಯದಿಂದ ವ್ಯಾಖ್ಯಾನ ಮಾಡುತ್ತಾರೆ –

ತತೋ ಭೋಗೇನ ಪುಣ್ಯಂ ಚ ಕ್ಷಪಯಿತ್ವೇತರತ್ತಥಾ ।। ೬೬ ।।

ಬ್ರಹ್ಮದ್ವಿಟ್ ಬ್ರಹ್ಮದರ್ಶೀ ಚ ತಮೋಮೋಕ್ಷಾವವಾಪ್ನುತಃ ।

ಅನಾರಬ್ಧಕರ್ಮವು ನಾಶವಾದ ನಂತರ ಬ್ರಹ್ಮದ್ವೇಷಿಯೂ ಬ್ರಹ್ಮಜ್ಞಾನಿಯೂ ಕೂಡ ಭೋಗದಿಂದ ಪುಣ್ಯವನ್ನೂ ಹಾಗೆಯೇ ಪಾಪವನ್ನೂ ಕೂಡ ನಾಶಮಾಡಿ ಕೊಂಡು ತಮಸ್ಸನ್ನೂ ಮೋಕ್ಷವನ್ನೂ ಹೊಂದುತ್ತಾರೆ.

ಪ್ರಾರಬ್ಧಕರ್ಮಗಳು ಅನಂತವಾಗಿರಲು ಭೋಗದಿಂದ ನಾಶವು ಶಕ್ಯವಲ್ಲ ಎಂಬ ಆಶಂಕೆಯನ್ನು ಆಗಮ ವಾಕ್ಯದಿಂದ ಪರಿಹರಿಸುತ್ತಾರೆ –

ಬ್ರಹ್ಮಣಾಂ ಶತಕಾಲಾತ್ತು ಪೂರ್ವಮಾರಬ್ಧಸಂಕ್ಷಯಃ ।। ೬೭ ।।

ಬ್ರಹ್ಮಣಸ್ತ್ವೇವ ತಾವತ್ತ್ವಂ ಪಂಚಾಶದ್ಬ್ರಹ್ಮಣಸ್ತಥಾ ।
ರುದ್ರಸ್ಯ ವಿಂಶದೇವ ಸ್ಯಾದಿಂದ್ರಸ್ಯಾರ್ಕಾದಿಕೇ ದಶ ।। ೬೮ ।।

ಅನ್ಯೇಷಾಂ ಬ್ರಹ್ಮಮಾತ್ರಸ್ಯ ತ್ವಂತ ಆರಬ್ಧಸಂಕ್ಷಯಃ ।
ಬ್ರಹ್ಮಣೈವ ಸಹಾತಶ್ಚ ಪರಂ ನಾರಾಯಣಂ ವ್ರಜೇತ್ ।। ೬೯ ।।
ಇತಿ ಸತ್ತತ್ತ್ವವಚನಂ ಸ್ವಯಂ ಭಗವತೋದಿತಮ್ ।

ನೂರು ಬ್ರಹ್ಮರ ಕಾಲವು ಪೂರ್ತಿಯಾಗುವುದಕ್ಕಿಂತ ಮುಂಚೆಯೇ ಎಲ್ಲ ಜ್ಞಾನಿಗಳ ಪ್ರಾರಬ್ಧಕರ್ಮಕ್ಕೆ ವಿನಾಶವು. ಇದನ್ನೇ ವಿವರಿಸುತ್ತಾರೆ – ಚತುರ್ಮುಖ ಬ್ರಹ್ಮನಿಗೆ ನೂರು ಬ್ರಹ್ಮಕಲ್ಪಗಳಲ್ಲಿಯೇ ಪ್ರಾರಬ್ಧಕರ್ಮದ ಕ್ಷಯವು. ರುದ್ರನಿಗೆ ಐವತ್ತು ಬ್ರಹ್ಮಕಲ್ಪಗಳ ಅಂತ್ಯದಲ್ಲಿಯೂ, ಇಂದ್ರನಿಗೆ ಇಪ್ಪತ್ತು ಬ್ರಹ್ಮಕಲ್ಪಗಳಲ್ಲಿಯೂ ಹಾಗೂ ಸೂರ್ಯನಿಗೆ ಹತ್ತು ಬ್ರಹ್ಮಕಲ್ಪಗಳಲ್ಲಿಯೂ ಪ್ರಾರಬ್ಧ ಕರ್ಮದ ಕ್ಷಯವು ಆಗುವುದು. ಇತರರಿಗೆ ಒಂದೇ ಬ್ರಹ್ಮಕಲ್ಪದ ಅಂತ್ಯಕ್ಕೆ ಪ್ರಾರಬ್ಧಕರ್ಮದ ಕ್ಷಯವು. ಪ್ರಾರಬ್ಧಕರ್ಮವು ಸಂಪೂರ್ಣ ನಾಶವಾದ ಮೇಲೂ ಬ್ರಹ್ಮನಿಂದ ಕೂಡಿಕೊಂಡೇ ಎಲ್ಲರೂ ನಾರಾಯಣನನ್ನು ಹೊಂದತಕ್ಕುದು. ಹೀಗೆ ಸಾಕ್ಷಾತ್ತಾಗಿ ಭಗವಂತನಿಂದ ಹೇಳಲ್ಪಟ್ಟ ಸತ್ತತ್ವವಚನವಿದೆ.

।। ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮದನುವ್ಯಾಖ್ಯಾನೇ ಚತುರ್ಥಾಧ್ಯಾಯಸ್ಯ ಪ್ರಥಮಃ ಪಾದಃ ।।

।। ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ನಾಲ್ಕನೆಯ ಅಧ್ಯಾಯ ಮೊದಲನೆಯ ಪಾದದ
ಶ್ರೀಮನ್ನ್ಯಾಯಸುಧಾನುಸಾರಿ ಕನ್ನಡಾನುವಾದವು ಮುಕ್ತಾಯವಾಯಿತು ।।

ನಾಲ್ಕನೆಯ ಅಧ್ಯಾಯ ಎರಡನೆಯ ಪಾದ

ಪ್ರಥಮಪಾದದಲ್ಲಿ ಕರ್ಮಕ್ಷಯವು ಹೇಳಲ್ಪಟ್ಟಿದೆ. ಈಗ ದ್ವಿತೀಯ ಪಾದದಲ್ಲಿ ಉತ್ಕ್ರಾಂತಿಯು ಹೇಳಲ್ಪಡುತ್ತದೆ. ಉತ್ಕ್ರಾಂತಿಮಾರ್ಗಗಳು ಕರ್ಮಕ್ಷಯದಂತೆ ದೇವಮನುಷ್ಯ ಸಾಧಾರಣಗಳಲ್ಲ. ಹೇಗೆಂದರೆ –

ದೇವಾನಾಂ ಚ ಮನುಷ್ಯಾಣಾಮೇತಾವತ್ಸಮಮೇವ ಹಿ ।

ಉತ್ಕ್ರಾಂತಿಮಾರ್ಗೌ ದೇವಾನಾಂ ನ ಪ್ರಾಯೇಣ ಭವಿಷ್ಯತಃ ॥ ೧ ॥

ಪ್ರಥಮಪಾದದಲ್ಲಿ ವಿಚಾರ ಮಾಡಲ್ಪಟ್ಟ ಕರ್ಮನಾಶಾಖ್ಯ ಫಲವು ದೇವತೆಗಳು ಹಾಗೂ ಮುನಷ್ಯರಿಗೂ ಕೂಡ ಸಮವೇ ಆಗಿದೆ. ಈ ಪಾದದಲ್ಲಿ ಪ್ರತಿಪಾದಿತವಾದ ದೇಹದಿಂದ ಉತ್ಕ್ರಾಂತಿಯೂ ಹಾಗೂ ಮೂರನೆಯ ಪಾದದಲ್ಲಿ ಪ್ರತಿಪಾದಿತವಾದ ಅರ್ಚಿರಾದಿ ಮಾರ್ಗವೂ ದೇವತೆಗಳಿಗೆ ಪ್ರಾಯಶಃ ಆಗುವುದಿಲ್ಲ. ಆದುದರಿಂದ ವಿಭಾಗದಿಂದ ಉಕ್ತಿಯು ಅಸಂಗತವಲ್ಲ.

ಹಾಗಾದರೆ ಮಾರ್ಗ ಉತ್ಕ್ರಾಂತಿಗಳು ಪ್ರತಿಪಾದ್ಯವಾಗಲಿ. ಇದನ್ನು ಪ್ರತಿಪಾದಿಸುವ ವಿಷಯದಲ್ಲಿ ಸಂಗತಿಯು ಯಾವುದು ಎಂದರೆ, ಪ್ರಸಂಗ ಬಂದಿರುವುದರಿಂದ ನಾಲ್ಕು ಪಾದಗಳಿಗೂ ಸಂಗತಿಯನ್ನು ಹೇಳುತ್ತಾರೆ –

ಕರ್ಮಕ್ಷಯಸ್ತಥೋತ್ಕ್ರಾಂತಿರ್ಮಾರ್ಗೌ ಭೋಗಶ್ಚತುಷ್ಟಯಮ್ ।

ಫಲಂ ಮೋಕ್ಷ ಇತಿ ಪ್ರೋಕ್ತಂ ಕ್ರಮಾತ್ಪಾದೇಷು ಚೋದಿತಮ್ ॥ ೨ ॥

ಕರ್ಮಕ್ಷಯ, ಉತ್ಕ್ರಾಂತಿ, ಮಾರ್ಗ ಹಾಗೂ ಬ್ರಹ್ಮಪ್ರಾಪ್ತಿ, ಭೋಗ ಹೀಗೆ ನಾಲ್ಕು ವಿಧವಾದ ಫಲವು ಮೋಕ್ಷವೆಂದು ಹೇಳಲ್ಪಟ್ಟಿದೆ. ಇವುಗಳು ಕ್ರಮದಿಂದ ನಾಲ್ಕು ಪಾದಗಳಲ್ಲಿ ಹೇಳಲ್ಪಟ್ಟಿವೆ.

ದೇವತೆಗಳಿಗೆ ಮಾರ್ಗವಿಲ್ಲವೆಂದು ಹಿಂದೆ ಹೇಳಿದೆ. ಹಾಗಾದರೆ ಅವರು ಎಲ್ಲಿರುತ್ತಾರೋ ಅಲ್ಲಿಯೇ ಮುಕ್ತರಾಗುತ್ತರೋ ಹೇಗೆ ಎಂದರೆ –

ಸ್ರಷ್ಟೃಷ್ವೇವ ಚ ಸೃಜ್ಯಾನಾಂ ಪ್ರವೇಶೋ ಬ್ರಹ್ಮಣೋ ಲಯೇ ।

ದೇವಾನಾಂ ಮಾರ್ಗ ಉದ್ದಿಷ್ಟೋ ನಾರ್ಚಿರಾದಿರ್ನ ಚೋತ್ಕ್ರಮಃ ॥ ೩ ॥

ಚತುರ್ಮುಖನಿಗೆ ಲಯವು ಇನ್ನೇನು ಆಗಲಿದೆ ಎನ್ನುವಾಗ, ಸೃಷ್ಟರಾದವರಿಗೆ ಸೃಷ್ಟಿ ಮಾಡಿದವರಲ್ಲಿ ಪ್ರವೇಶವೇ ದೇವತೆಗಳಿಗೆ ಮಾರ್ಗವು ಎಂದು ಹೇಳಲ್ಪಟ್ಟಿದೆ. ಲಯವು ಸಮೀಪಿಸುತ್ತಿರಲು ಬ್ರಹ್ಮನ ಪ್ರವೇಶಕ್ಕೆ ಅನುಸರಣೆಯೇ ದೇವತೆಗಳಿಗೆ

ಮಾರ್ಗಗಮನವು. ಅವರಿಗೆ ಅರ್ಚಿರಾದಿ ಮಾರ್ಗವೂ ದೇಹದಿಂದ ಉತ್ಕ್ರಮಣವೂ ಇರುವುದಿಲ್ಲ. ಅವರು ದೇಹಸಹಿತರಾಗಿಯೇ ಇರುತ್ತಾರೆ.

ಇದನ್ನೇ ವಿವರಿಸುತ್ತಾರೆ –

ಸ್ರಷ್ಟುಸ್ತು ಗ್ರಾಸಭೂತಸ್ಯ ದೇಹಸ್ತತ್ರ ಲಯಂ ವ್ರಜೇತ್ ।

ಯತಃ ಸೃಜ್ಯಸ್ಯ ದೇವಸ್ಯ ನೈವೋತ್ಕ್ರಾಂತಿಸ್ತತೋ ಭವೇತ್ ॥ ೪ ॥

ಚೇತನದಿಂದ ಅಧಿಷ್ಠಿತವೇ ಆದ ದೇವತೆಗಳ ದೇಹವಾದರೂ ಸ್ರಷ್ಟುವಿಗೆ ಗ್ರಾಸಭೂತವಾಗಿರುವ ನಿಮಿತ್ತ ಆ ಸ್ರಷ್ಟುವಿನಲ್ಲಿಯೇ ಲಯವನ್ನು ಹೊಂದುವುದು. ಅಂದರೆ ಚೇತನವು ನಿಷ್ಕ್ರಮಣವಾಗುವ ಮುಂಚೆಯೇ ದೇವತೆಗಳ ದೇಹವು ಸ್ರಷ್ಟುವಿನಲ್ಲಿ ವಿಲೀನವಾಗುವುದು. ಆದ್ದರಿಂದ ಸೃಷ್ಟಿಮಾಡಲಿಕ್ಕೆ ಯೋಗ್ಯರಾದ ದೇವತೆಗಳಿಗೆ ದೇಹದಿಂದ ಉತ್ಕ್ರಮಣವು ಆಗುವುದೇ ಇಲ್ಲ.

ದೇವತೆಗಳಿಗೆ ಅರ್ಚಿರಾದಿ ಮಾರ್ಗವಿಲ್ಲವೆಂದು ಉಕ್ತವಾಗಿದೆ. ಅದು ಯಾವ ಕಾರಣದಿಂದ ಎಂದರೆ ಯುಕ್ತ್ಯಂತರವನ್ನು ಹೇಳುತ್ತಾರೆ –

ಲಯಾಚ್ಚೈವಾರ್ಚಿರಾದೀನಾಂ ಲೋಕಾನಾಮಪಿ ಸರ್ವಶಃ ।

ಕಥಂ ಮಾರ್ಗೋ ಭವೇತ್ತೇಷಾಂ ವಿಶತಾಮುತ್ತರಂ ಸ್ವತಃ ॥ ೫ ॥

ದೇವತೆಗಳಿಗೆ ಮುಕ್ತಿಯಾಗುವದಕ್ಕಿಂತ ಮುನ್ನವೇ ಅರ್ಚಿರಾದಿ ಮಾರ್ಗಗಳಿಗೂ ಎಲ್ಲ ಲೋಕಗಳಿಗೂ ಕೂಡ ನಾಶವು ಪ್ರಾಪ್ತವಾಗಿರುವುದು. ಆದಕಾರಣ ತಮ್ಮಿಂದ ಉತ್ತಮರಲ್ಲಿ ಲಯವನ್ನು ಹೊಂದುವ ಆ ದೇವತೆಗಳಿಗೆ ಅರ್ಚಿರಾದಿ ಮಾರ್ಗವೂ ಲೋಕವೂ ಹೇಗೆ ಆಗುವುದು?

ಹಾಗಾದರೆ ಪ್ರಾಯೇಣ ಎಂದು ಹೇಳಿರುವುದರಿಂದ ಕೆಲವು ಸಲ ದೇವತೆಗಳಿಗೆ ಉತ್ಕ್ರಾಂತಿ ಮಾರ್ಗಗಳನ್ನು ಅಂಗೀಕರಿಸಬೇತು. ಅಲ್ಲಿ ಹೇಳಿದ ಯುಕ್ತಿವಿರೋಧವು ಯಾವುದೆಂದರೆ –

ಜಾತಾನಾಂ ಮಾನುಷೇ ಲೋಕೇ ದೇವಾನಾಂ ತು ಕದಾಚನ ।

ಉತ್ಕ್ರಾಂತಿಮಾರ್ಗೌ ಭವತೋ ನ ತದಾ ಮುಕ್ತಿರಿಷ್ಯತೇ ॥ ೬ ॥

ಮನಷ್ಯಲೋಕದಲ್ಲಿ ಹುಟ್ಟಿರತಕ್ಕ ದೇವತೆಗಳಿಗೆ ಯಾವಾಗಲೂ ಉತ್ಕ್ರಾಂತಿ ಮಾರ್ಗಗಳು ಆಗುತ್ತವೆಯಾದರೂ ಆಗ ಮುಕ್ತಿಯು ಅಂಗೀಕರಿಸಲ್ಪಡುವುದಿಲ್ಲ. ಮತ್ತೆ ಬ್ರಹ್ಮನಿಂದ ಕೂಡಿಕೊಂಡೇ ಮುಕ್ತಿಯು. ಆದ್ದರಿಂದ ಹಿಂದೆ ಹೇಳಿದ ಯುಕ್ತಿಯಿಂದ ವಿರೋಧವಿಲ್ಲ. ಹೇಗೆಂದರೆ– ಅಲ್ಲಿ ಸಾಮಾನ್ಯವಾದ ಉತ್ಕ್ರಾಂತಿಮಾರ್ಗಗಳ ಅಪೇಕ್ಷೆಯಿಂದ ಪ್ರಾಯೇಣ ಎಂದು ಹೇಳಲಾಗಿದೆ. ಮುಕ್ತಿಕಾಲದಲ್ಲಿನ ಉತ್ಕ್ರಾಂತಿ ಮಾರ್ಗಗಳ ಅಪೇಕ್ಷೆಯಿಂದಲ್ಲ. ಅಲ್ಲಿ ಹೇಳಿದ ಯುಕ್ತಿಯು ಮುಕ್ತಿವಿಷಯಕವು.

ಆದ್ದರಿಂದ ಯುಕ್ತಿವಿರೋಧವಿಲ್ಲವೆಂದು ತಾತ್ಪರ್ಯ.

ಹಾಗಾದರೆ ದೇವತೆಗಳಿಗೆ ಮಾತ್ರವೇ ಬ್ರಹ್ಮನಿಂದ ಕೂಡಿಕೊಂಡು ಮುಕ್ತಿಯೋ ಏನು ಎಂದರೆ, ಇತರರಿಗೂ ಬ್ರಹ್ಮನಿಂದ ಕೂಡಿಕೊಂಡೇ ಮುಕ್ತಿಯು ಎನ್ನುತ್ತೇವೆ. ಹಾಗಾದರೆ 'ಭೇಜೇ ಖಗೇಂದ್ರಧ್ವಜಪಾದಮೂಲಂ' ಇತ್ಯಾದಿಗಳಿಂದ ವಿರೋಧವು ಎಂದರೆ –

ಅನ್ಯೇಷಾಮಪಿ ಸಾಕ್ಷಾತ್ತು ಮುಕ್ತಿಃ ಪ್ರಾಪ್ಯಾಪಿ ತಂ ಹರಿಮ್ ।

ಸಹೈವ ಬ್ರಹ್ಮಣಾ ಭೂಯಾದಿತಿ ಶಾಸ್ತ್ರಸ್ಯ ನಿರ್ಣಯಃ ॥ ೭ ॥

ಇತರರಿಗೂ ಕೂಡ ಅಂದರೆ ವೈಕುಂಠಾದಿ ಸ್ಥಾನಗಳಲ್ಲಿರತಕ್ಕ ಶ್ರೀಹರಿಯನ್ನು ಹೊಂದಿ ಇರುವವರಿಗೂ ಕೂಡ ಬ್ರಹ್ಮನಿಂದ ಕೂಡಿಕೊಂಡೇ ಲಿಂಗದೇಹ ಭಂಗ ರೂಪವಾದ ಮುಕ್ತಿಯು ಆಗವುದು. ಹೀಗೆ ಶಾಸ್ತ್ರದ ನಿರ್ಣಯ.

ಇತಿ ಶಾಸ್ತ್ರಸ್ಯ ನಿರ್ಣಯಃ ಎಂದು ಹೇಳಿದ್ದನ್ನೇ ವಿವರಿಸುತ್ತಾರೆ –

ಕ್ಷ್ಮಾಂಭೋಽನಲಾನಿಲವಿಯನ್ಮನಇಂದ್ರಿಯಾರ್ಥ–

ಭೂತಾದಿಭಿಃ ಪರಿವೃತಃ ಪ್ರತಿಸಂಜಿಘೃಕ್ಷುಃ ।

ಅವ್ಯಾಕೃತಂ ವಿಶತಿ ಯರ್ಹಿ ಗುಣತ್ರಯಾತ್ಮಾ

ಕಾಲಂ ಪರಂ ಸ್ವಮನುಭೂಯ ಪರಃ ಸ್ವಯಂಭೂಃ ॥ ೮ ॥

ಏವಂ ಪರೇತ್ಯ ಭಗವಂತಮನುಪ್ರವಿಷ್ಟಾಃ

ಯೇ ಯೋಗಿನೋ ಜಿತಮರುನ್ಮನಸೋ ವಿರಾಗಾಃ ।

ತೇನೈವ ಸಾಕಮಮೃತಂ ಪುರುಷಂ ಪುರಾಣಂ

ಬ್ರಹ್ಮಪ್ರಧಾನಮುಪಯಾಂತ್ಯಗತಾಭಿಮಾನಾಃ ॥ ೯ ॥

ಗುಣತ್ರಯಾಭಿಮಾನಿಯೂ ಪೃಥಿವ್ಯಾದಿ ಅಭಿಮಾನಿಗಳಿಗಿಂತ ಉತ್ತಮನೂ ಆದ ಚತುರ್ಮುಖ ಬ್ರಹ್ಮನು ಪರಸಂಖ್ಯಾಕವಾದ ತನ್ನ ಕಾಲವನ್ನು ಅನುಭವಿಸಿ, ಸರ್ವ ಸಂಹಾರವನ್ನು ಮಾಡಲು ಇಚ್ಛಿಸಿ, ಪೃಥಿವೀ, ಜಲ, ಅಗ್ನಿ, ವಾಯು, ಆಕಾಶ, ಮನಸ್ಸು, ಇಂದ್ರಿಯಗಳು, ವಿಷಯಗಳು, ಭೂತಗಳಿಗೆ ಕಾರಣವಾದ ಅಹಂಕಾರತತ್ವ ಇವುಗಳಿಗೆ ಅಭಿಮಾನಿಗಳಾದ ದೇವತೆಗಳಿಂದ ಕೂಡಿಕೊಂಡು ನಿರ್ವಿಕಾರನಾದ ಪರಬ್ರಹ್ಮನನ್ನು ಪ್ರವೇಶ ಮಾಡುವನು. ಆಗ ಆ ಬ್ರಹ್ಮನೊಂದಿಗೆ ಭಗವಂತನ ಲೋಕವನ್ನು ಯಾವ ಯೋಗಿಗಳು ಪ್ರವೇಶ ಮಾಡಿರುವರೋ, ಅವರು ವಾಯು–ಮನೋಜಯವನ್ನು ಸಾಧಿಸಿ ರಾಗರಹಿತರಾಗುವರು. ಅವರು ಜೀವಭಾವವನ್ನು ಕಳೆದುಕೊಂಡು ಮರಣರಹಿತವಾದ ಷಡ್ಗುಣಪೂರ್ಣನಾದ ಸರ್ವೋತ್ತಮನಾದ ಪರಬ್ರಹ್ಮನನ್ನು ಹೊಂದುತ್ತಾರೆ.

ಭಗವಂತಮನುಪ್ರಾಪ್ತಾ ಅಪಿ ತು ಬ್ರಹ್ಮಣಾ ಸಹ ।

ಪರಮಂ ಮೋಕ್ಷಮಾಯಾಂತಿ ಲಿಂಗಭಂಗೇನ ಯೋಗಿನಃ ॥ ೧೦ ॥

ಪ್ರಾಪ್ತಾ ಅಪಿ ಪರಂ ದೇವಂ ಸಹೈವ ಬ್ರಹ್ಮಣಾ ಪುನಃ ।

ಆನಂದವ್ಯಕ್ತಿಮಾಯಾಂತಿ ಪೂರ್ಣಾ ಲಿಂಗಸ್ಯ ಭಂಗತಃ ॥ ೧೧ ॥

ಇತಿ ಶ್ರುತಿಪುರಾಣೋಕ್ತಿಬಲಾದ್ವಿಜ್ಞಾಯತೇ ಚ ತತ್ ।

ಯೋಗಿಗಳು ಭಗವಂತನನ್ನು ಹೊಂದಿದವರೇ ಆಗಿದ್ದರೂ ಕೂಡ ಮತ್ತೆ ಚತುರ್ಮುಖನಿಂದ ಕೂಡಿಕೊಂಡೇ ಲಿಂಗಭಂಗದಿಂದ ಪೂರ್ಣಾನಂದಾಭಿವ್ಯಕ್ತಿ ರೂಪವಾದ ಶ್ರೇಷ್ಠವಾದ ಮುಕ್ತಿಯನ್ನು ಹೊಂದುತ್ತಾರೆ. ಹೀಗೆ ಶ್ರುತಿ ಪುರಾಣಗಳ ಉಕ್ತಿಯ ಬಲದಿಂದ ಹಿಂದೆ ಹೇಳಿದ ಪ್ರಮೇಯವು ತಿಳಿಯಲ್ಪಡುತ್ತದೆ.

ಹಾಗಾದರೆ ದ್ವಿತೀಯ ಮತ್ತು ತೃತೀಯ ಪಾದಗಳಲ್ಲಿ ಪ್ರತಿಪಾದ್ಯವಾದ ಉತ್ಕ್ರಮಣಾದಿಗಳಂತೆಯೇ ಚತುರ್ಥಪಾದೋಕ್ತ ಭೋಗವೂ ಅಸಾಧಾರಣವೋ ಎಂದು ಕೇಳಿದರೆ –

ಭೋಗಸ್ತು ಸರ್ವದೇವಾನಾಂ ನರಾದೀನಾಂ ಚ ವಿದ್ಯತೇ ॥ ೧೨ ॥

ಭೋಗವಾದರೂ ಎಲ್ಲ ದೇವತೆಗಳಿಗೂ ಮನುಷ್ಯರೇ ಮೊದಲಾದವರಿಗೂ ಇರುತ್ತದೆ.

ಈ ಪಾದದ ಸೂತ್ರಭಾಷ್ಯದ ಪ್ರಥಮದಲ್ಲಿ ದೇವತೆಗಳಿಗೆ ಮೋಕ್ಷವೆಂದು ಹೇಳಲಾಗಿದೆ. ಅದರ ತಾತ್ಪರ್ಯವನ್ನು ಇಲ್ಲಿ ಹೇಳುತ್ತಾರೆ –

ತತ್ರ ಪ್ರವೇಶೋ ದೇವಾನಾಮುತ್ತರೋತ್ತರತಃ ಕ್ರಮಾತ್ ।

ಉಚ್ಯತೇ ..... ॥

ಎರಡನೆಯ ಪಾದದಲ್ಲಿ ಪ್ರಾರಂಭದಲ್ಲಿ ದೇವತೆಗಳಿಗೆ ಉತ್ತರೋತ್ತರದಲ್ಲಿ ಕ್ರಮದಿಂದ ಪ್ರವೇಶವು ಹೇಳಲ್ಪಡುವುದು. ಆದಕಾರಣ ಭಾಷ್ಯದಲ್ಲಿ ಇದು ಪ್ರಥಮದಲ್ಲಿ ನಿರೂಪಿತವಾಗಿದೆ.

ದೇವತೆಗಳಿಗೆ ಉತ್ತರೋತ್ತರದಲ್ಲಿ ಪ್ರವೇಶವು ಹೇಳಲ್ಪಟ್ಟಿದೆ ಎನ್ನುವುದು ಯುಕ್ತವಲ್ಲ. ಏಕೆಂದರೆ ವಾಙ್ಮನಸಿ ಇತ್ಯಾದಿ ಸೂತ್ರಗಳಲ್ಲಿ ದೇವತೆಗಳು ಶ್ರುತವಾಗಿಲ್ಲ ಎಂದರೆ –

..... ದೇಹಗಾನಾಂ ಚ ವೃತ್ತೀನಾಮೇವಮೇವ ತು ॥ ೧೩ ॥

ದೇಹದಲ್ಲಿರತಕ್ಕ ಜಡಗಳಾದ ವಾಗಾದಿಗಳಿಗೆ (ವರ್ತತೇ ಏತಾದಿಭಿಃ ಎಂಬ ವ್ಯುತ್ಪತ್ತಿಯಿಂದ ವೃತ್ತಯಃ ಎಂದರೆ ಜಡಗಳಾದ ವಾಗಾದಿಗಳು) ಇದೇರೀತಿಯಲ್ಲಿ

ಉತ್ತರೋತ್ತರ ಕ್ರಮದಿಂದ ಲಯವು. ಇಲ್ಲಿ ಜಡಭೂತಗಳಾದ ವಾಗಾದಿಗಳು ಅಭಿಮಾನಿ ದೇವತೆಗಳ ಅಧೀನವಾದ್ದರಿಂದ ವಾಗಾದಿ ಶಬ್ದಗಳಿಂದ ಅಭಿಮಾನಿ ದೇವತೆಗಳನ್ನೂ ತೆಗೆದುಕೊಳ್ಳಬೇಕು ಎಂಬುದನ್ನು ತು ಶಬ್ದದಿಂದ ಸೂಚಿಸಿದ್ದಾರೆ.

ಕರ್ಮಕ್ಷಯಸ್ತಥೋತ್ಕ್ರಾಂತಿಃ ಇತ್ಯಾದಿಯಾಗಿ ಹಿಂದೆ ಹೇಳಲ್ಪಟ್ಟ ಮೋಕ್ಷ ಸ್ವರೂಪವು ನಿಶ್ಚಿತವಾಗಿಲ್ಲ. ಏಕೆಂದರೆ ನಾನಾ ವಾದಿಗಳು ಮೋಕ್ಷಸ್ವರೂಪವನ್ನು ನಾನಾ ರೀತಿಯಿಂದ ವರ್ಣಿಸಿರುವರು. ಆದ್ದರಿಂದ ಈ ಪಾದಾರ್ಥವೂ ಸಂಗತಿಯೂ ಕೂಡುವುದಿಲ್ಲ ಎಂದರೆ –

ತತ್ರ ಮೋಕ್ಷಸ್ವರೂಪಂ ತು ವಾದಿನಃ ಪ್ರತಿಭಾಶ್ರಯಾತ್ ।

ನಾನಾ ವದಂತಿ ಪುಂಸಾಂ ಹಿ ಮತಯೋ ಗುಣಭೇದತಃ ।। ೧೪ ।।

ಪೃಥಕ್ ಪೃಥಕ್ ಪ್ರಜಾಯಂತೇ ತಮಸ್ಯೈವಾನ್ಯಥಾಮತಿಃ ।

ರಜಸಾ ಮಿಶ್ರಬುದ್ಧಿತ್ವಂ ಸತ್ತ್ವೇನೈವ ಯಥಾಮತಿಃ ।। ೧೫ ।।

ಸೂತ್ರಕಾರರಿಂದ ಹಿಂದೆ ಹೇಳಲ್ಪಟ್ಟ ಮೋಕ್ಷಸ್ವರೂಪವು ಶ್ರುತ್ಯಾದಿ ಪ್ರಮಾಣ ಗಳಿಂದ ಉಪಪಾದಿತವಾಗಿದೆ. ನಾನಾ ವಾದಿಗಳಾದರೂ ತಮ್ಮ ತಮ್ಮ ಪ್ರಜ್ಞೆಯನ್ನು ಆಶ್ರಯಿಸಿ ನಾನಾ ಪ್ರಕಾರವಾಗಿ ಮೋಕ್ಷಸ್ವರೂಪವನ್ನು ಹೇಳುತ್ತಾರೆ. ಅವುಗಳಿಗೆ ಶ್ರುತಿಗಳ ಬೆಂಬಲವಿಲ್ಲದ ಪ್ರಯುಕ್ತ ಅವು ಪ್ರಮಾಣವಲ್ಲ. ಮೋಕ್ಷ ವಿಷಯಕವಾಗಿ ನಾವು ನೀಡಿರುವ ವಿವರಣೆ ಶ್ರುತ್ಯನುಸಾರವಾದುದರಿಂದ ಪ್ರಮಾಣವು. ನಾನಾ ವಾದಿಗಳಲ್ಲಿ ಮೋಕ್ಷದ ವಿಷಯದಲ್ಲಿರತಕ್ಕ ಮತಭೇದಕ್ಕೆ ಆ ಪುರುಷರಲ್ಲಿರುವ ಮತಿಭೇದವೇ ಕಾರಣ. ಗುಣವಿಶೇಷ ನಿಮಿತ್ತಕವಾಗಿ ನಾನಾರೀತಿಯ ಮತಿಭೇದವು ಹುಟ್ಟುತ್ತದೆ ('ಜ್ಞಾನಂ ಕರ್ಮ ಚ ಕರ್ತಾ ಚ ತ್ರಿಧೈವ ಗುಣಭೇದತಃ। ಪ್ರೋಚ್ಯತೇ ಗುಣಸಂಖ್ಯಾನೇ ಯಥಾವಚ್ಛೃಣು ತಾನ್ಯಪಿ' ಹೀಗೆ ಗೀತೆಯ ಕೊನೆಯ ಅಧ್ಯಾಯ ದಲ್ಲಿ ಜ್ಞಾನಕರ್ಮಕರ್ತೃಗಳಲ್ಲಿ ಸಾತ್ವಿಕ ರಾಜಸ ತಾಮಸ ಭೇದದಿಂದ ಪ್ರತ್ಯೇಕವಾಗಿ ಮೂರು ವಿಧವೆಂದು ಹೇಳಲ್ಪಟ್ಟಿದೆ.). ಗುಣತ್ರೈವಿಧ್ಯಕ್ಕೆ ಅನುಗುಣವಾಗಿ ಜ್ಞಾನವು ಯಥಾರ್ಥಜ್ಞಾನ, ಮಿಶ್ರಜ್ಞಾನ ಹಾಗೂ ಮಿಥ್ಯಾಜ್ಞಾನ ಎಂದು ಮೂರು ವಿಧವು. ತಮೋಗುಣವು ಮಿಥ್ಯಾಜ್ಞಾನಕ್ಕೆ ಕಾರಣವಾದರೆ, ರಜೋಗುಣದಿಂದ ಮಿಶ್ರ ಅಥವಾ ಸಂಶಯಾತ್ಮಕವಾದ ಜ್ಞಾನವು ಹುಟ್ಟುತ್ತದೆ. ಸತ್ವಗುಣವು ಯಥಾರ್ಥಜ್ಞಾನಕ್ಕೆ ಕಾರಣವಾಗುತ್ತದೆ.

ಯಥಾರ್ಥಜ್ಞಾನವು ಸತ್ವಗುಣದಿಂದ ಆಗುತ್ತದೆ ಎಂದು ಹೇಳಲಾಯಿತು. ಅದಕ್ಕೆ ಮುಕ್ತರ ವಿಷಯದಲ್ಲಿ ಅಪವಾದವನ್ನು ಹೇಳುತ್ತಾರೆ –

ಗುಣಾತೀತಾ ವಿಮುಕ್ತಾನಾಂ ಮತಿಃ ಶುದ್ಧೈವ ತಿರ್ಯತಃ ।

ಸಮ್ಯಗೇವಾಥ ನಿತ್ಯಾ ಚ ತತ್ತನ್ಮಾಹಾತ್ಮ್ಯಯೋಗತಃ ।। ೧೬ ।।

ಬಹುಲಾ ಚಾತಿವಿಶದಾ ..... ।

ಮುಕ್ತರ ಜ್ಞಾನವು ಯಥಾರ್ಥವೇ ಆಗಿದ್ದರೂ ಸತ್ವಗುಣದಿಂದ ಹುಟ್ಟಿದ್ದು ಆಗುವುದಿಲ್ಲ. ಏಕೆಂದರೆ ಅದು ಸ್ವಾಭಾವಿಕವಾಗಿ ದೋಷರಹಿತವೂ ನಿತ್ಯವೂ ಆಗಿದೆ. ಮುಕ್ತರ ಜ್ಞಾನವು ಅವರವರ ಯೋಗ್ಯತೆಗೆ ಅನುಗುಣವಾದ ಮಾಹಾತ್ಮ್ಯವನ್ನು ಹೊಂದಿರುವುದು. ಅಂದರೆ ಯೋಗ್ಯತೆಗೆ ತಕ್ಕಂತೆ ಅವರ ಜ್ಞಾನವು ಬಹ್ವರ್ಥ ವಿಷಯಕವೂ ಹಾಗೂ ಅತ್ಯಂತ ಸ್ಪಷ್ಟವೂ ಆಗಿರುವುದು.

..... ಸ್ಪಷ್ಟಾ ಚೈವ ಶ್ರಿಯೋ ಮತಿಃ ।

ಮಹಾಶುದ್ಧಚಿತಿತ್ವೇನ ..... ॥

ಲಕ್ಷ್ಮೀದೇವಿಯ ಜ್ಞಾನವು ಮಹಾಶುದ್ಧಚೈತನ್ಯಾತ್ಮಕವು. ಆದ್ದರಿಂದ ಸತ್ವಗುಣ ಜನ್ಯವಾದುದಲ್ಲ. ಲಕ್ಷ್ಮೀಜ್ಞಾನವು ಯಾವಾಗಲೂ ನಿರ್ದೋಷವೂ ಯಥಾರ್ಥವೂ ಆಗಿರುವುದು. ಅದು ಬಹುವಿಶೇಷಾರ್ಥಕವೂ, ಎಲ್ಲ ಮುಕ್ತರಿಗಿಂತ ಅತಿಶಯವಾಗಿ ಸ್ಪಷ್ಟವೂ ಆಗಿರುವುದು.

..... ತತೋಽಪ್ಯತಿಮಾಹಾಚಿತಿಃ ॥ ೧೭ ॥

ಅಶೇಷೋರುವಿಶೇಷಾಣಾಮತಿಸ್ಪಷ್ಟತಯಾ ದೃಶಿಃ ।

ನಿತ್ಯಮೇಕಪ್ರಕಾರಾ ಚ ನಾರಾಯಣಮತಿಃ ಪರಾ ॥ ೧೮ ॥

ಶ್ರೀನಾರಾಯಣನ ಜ್ಞಾನವು ಅತ್ಯಂತ ಯಥಾರ್ಥವು. ಆದರೂ ಸತ್ವಗುಣ ಜನ್ಯವಲ್ಲ. ಲಕ್ಷ್ಮೀಜ್ಞಾನಕ್ಕಿಂತಲೂ ಅತಿಶಯವಾದ ಚೈತನ್ಯಸ್ವರೂಪವು. ಸರ್ವದಾ ದೋಷರಹಿತವು. ಸರ್ವೋತ್ಕೃಷ್ಟವು. ಅನಂತಾನಂತ ಅಶೇಷ ವಿಶೇಷಾರ್ಥಗಳನ್ನು ವಿಷಯೀಕರಿಸುವುದು. ಲಕ್ಷ್ಮೀಜ್ಞಾನಕ್ಕಿಂತಲೂ ಅತಿಶಯವಾಗಿ ಸ್ಪಷ್ಟವು. ನಿತ್ಯವೂ ಏಕಪ್ರಕಾರವಾದುದು. ಉತ್ಪತ್ತಿ ವಿನಾಶಗಳಿಂದ ರಹಿತವು.

ಕೆಲವರು ಈಶ್ವರಜ್ಞಾನವು ಒಂದೇ ಎಂದು ಹೇಳುತ್ತಾರೆ. ಇತರರು ಅನೇಕಗಳು ಎನ್ನುತ್ತಾರೆ. ಅದನ್ನು ಸೂರ್ಯ ಇತ್ಯಾದಿ ವಚನದಿಂದ ವಿವೇಚಿಸುತ್ತಾರೆ –

ಸೂರ್ಯಪ್ರಭಾವದಖಿಲಂ ಭಾಸಯಂತೀ ನಿರಂತರಾ ।

ನಿರ್ಲೇಪಾ ವೀತದೋಷಾ ಚ ನಿತ್ಯಮೇವಾವಿಕಾರಿಣೀ ॥ ೧೯ ॥

ಈಶ್ವರಜ್ಞಾನವು ನಿರಂತರವಾದುದು ಅಂದರೆ ಸರ್ವಕಾಲದಲ್ಲಿಯೂ ವ್ಯಾಪಿಸಿ ಕೊಂಡು ಇರತಕ್ಕುದು. ಕರ್ಮಸಂಬಂಧ ರಹಿತವಾದುದು. ಯಾವುದೇ ರೀತಿಯ ದೋಷಗಳಿಂದ ರಹಿತವಾದುದು. ನಿರಂತರವಾಗಿ ಎಲ್ಲ ಪದಾರ್ಥಗಳನ್ನು ವಿಷಯೀ ಕರಿಸಿದರೂ ಅವುಗಳ ಸಂಬಂಧದಿಂದ ಸ್ವಲ್ಪವೂ ವಿಕಾರವನ್ನೂ ಹೊಂದುವುದಿಲ್ಲ. ಹೇಗೆಂದರೆ – ಸೂರ್ಯನ ಪ್ರಭೆಯು ಹೇಗೆ ಎಲ್ಲ ವಸ್ತುಗಳನ್ನೂ ಪ್ರಕಾಶಿಸಿದರೂ

ತಾನು ನಿರ್ವಿಕಾರವಾಗಿಯೇ ಇರುವುದೋ ಹಾಗೆ ಎಂದು ತಿಳಿಯಬೇಕು.

ವಿಶೇಷಾಂಸ್ತದ್ಗತಾಂಸ್ತ್ಯಕ್ತ್ವಾ ಪ್ರಾಯಸ್ತಲ್ಲಕ್ಷಣಾ ಶ್ರಿಯಃ ।

ತಥೈವ ಸ್ಪಷ್ಟತಾಭಾವಾತ್ತತ್ತಂತ್ರತ್ವಾತ್ತು ಕೇವಲಮ್ ।। ೨೦ ।।

ನ ತಾದೃಶೀ..... ।

ಲಕ್ಷ್ಮೀಜ್ಞಾನವು ಭಗವದ್ಗತ ಅಶೇಷ ವಿಶೇಷ ವಿಷಯೀಕಾರಿತ್ವವನ್ನು ಬಿಟ್ಟು ಪ್ರಾಯಶಃ ಆ ಭಗವಜ್ಜ್ಞಾನ ಲಕ್ಷಣಗಳನ್ನು ಉಳ್ಳದ್ದು ಎಂದು ತಿಳಿಯತಕ್ಕದ್ದು. ಆ ಜ್ಞಾನವು ಭಗವಜ್ಜ್ಞಾನದಷ್ಟು ಸ್ಪಷ್ಟತೆಯನ್ನು ಹೊಂದಿರುವುದಿಲ್ಲ. ಮುಖ್ಯವಾಗಿ ಭಗವಜ್ಜ್ಞಾನಕ್ಕೆ ಮಾತ್ರ ಅಧೀನವಾದುದು. ಆದ್ದರಿಂದ ಭಗವಜ್ಜ್ಞಾನಕ್ಕೆ ಸದೃಶವಲ್ಲ.

..... ಬ್ರಹ್ಮಣಸ್ತು ಪ್ರಾಯೇಣೈವಂ ಶ್ರಿಯೋ ಯಥಾ ।

ಚತುರ್ಮುಖ ಬ್ರಹ್ಮನ ಜ್ಞಾನವಾದರೂ ಪ್ರಾಯಶಃ ಲಕ್ಷ್ಮೀಜ್ಞಾನವು ಹೇಗೋ ಹಾಗೆ. ಆದರೆ ಲಕ್ಷ್ಮೀಜ್ಞಾನದಷ್ಟು ಅತಿಶಯಾರ್ಥಕವಿಷಯತ್ವ ಹಾಗೂ ಸ್ಪಷ್ಟತ್ವವನ್ನು ಹೊಂದಿಲ್ಲ.

ಮುಕ್ತಾನಾಂ ತು ತದನ್ಯೇಷಾಂ ಸಮುದ್ರತರಲೋಪಮಾ ।। ೨೧ ।।

ಅಗ್ನಿಜ್ವಾಲಾವದೇವ ಸ್ಯಾತ್ಸೃತಿಗಾನಾಂ ದೃಶೋ ಭವಃ ।

ಬ್ರಹ್ಮನಿಂದ ಇತರರಾದ ಮುಕ್ತರ ಜ್ಞಾನವಾದರೂ ಸಮುದ್ರದ ಅಲೆಗಳಂತೆ ವೃದ್ಧಿ ಹ್ರಾಸವುಳ್ಳದ್ದು. ಹೇಗೆ ಅಗ್ನಿಜ್ವಾಲೆಗೆ ಅಗ್ನಿಯಿಂದ ಉತ್ಪತ್ತಿಯೋ ಹಾಗೆ ಸಂಸಾರಿಗಳ ಜ್ಞಾನಕ್ಕೆ ಅಂತಃಕರಣ ನಿಮಿತ್ತದಿಂದ ಉತ್ಪತ್ತಿಯು.

ಏವಂ ವಿಧೇಷು ಜ್ಞಾನೇಷು ತಮಸಾ ಮುಷ್ಟದೃಷ್ಟಯಃ ।। ೨೨ ।।

ಖದ್ಯೋತಸದೃಶಾತ್ಯಲ್ಪಜ್ಞಾನತ್ವಾದನ್ಯಥಾದೃಶಃ ।

ವದಂತಿ ವಾದಿನೋ ಮೋಕ್ಷಂ ನಾನಾಮತಸಮಾಶ್ರಯಾತ್ ।। ೨೩ ।।

ಜ್ಞಾನಗಳಿಗೆ ಗುಣನಿಮಿತ್ತಕವಾಗಿ ಅನೇಕ ಪ್ರಕಾರತ್ವವು ಕೂಡುತ್ತವೆ. ಹಾಗಿದ್ದರೂ ತಮೋಗುಣದಿಂದ ಯುಕ್ತರಾದ ವಾದಿಗಳು ಪ್ರಮಾಣಗಳನ್ನು ತಿರಸ್ಕರಿಸುತ್ತ ಅನೇಕ ವಿಧವಾದ ಮತಗಳ ಆಶ್ರಯದಿಂದ ಮೋಕ್ಷವನ್ನು ನಾನಾ ವಿಧವಾಗಿ ಹೇಳುತ್ತಾರೆ. ತಮೋಗುಣದಿಂದ ಯಥಾರ್ಥಜ್ಞಾನವು ಅಪಹೃತವಾಗಿರುವುದರಿಂದ ವಾದಿಗಳು ಮಿಂಚುಹುಳಕ್ಕೆ ಸದೃಶವಾದ ಅತ್ಯಲ್ಪವಾದ ಸಾಮಾನ್ಯ ಜ್ಞಾನವನ್ನು ಹೊಂದಿರುವರು. ಆದ್ದರಿಂದಲೇ ಅವರು ಅನ್ಯಥಾಜ್ಞಾನಿಗಳು.

ನಾನಾವಿಧವಾದ ಮೋಕ್ಷವಾದಗಳಲ್ಲಿ ಒಂದು ಪ್ರಮಾಣಮೂಲಕವು, ಇತರವು ಮಿಥ್ಯಾಜ್ಞಾನಮೂಲಕಗಳು ಎಂದು ತಿಳಿದುಬರುವುದು. ಸಿದ್ಧಾಂತಿಗಳು ಹೇಳಿದ

ಮೋಕ್ಷಸ್ವರೂಪವೇ ಪ್ರಮಾಣಮೂಲಕವು ಎಂಬ ವಿಶೇಷವು ತಿಳಿದು ಬರುವುದಿಲ್ಲ. ಮತ್ತೆ ಸಂಶಯವೇ ಹುಟ್ಟುತ್ತದೆ ಎಂದರೆ, ಪರಮತಗಳೆಲ್ಲವೂ ಹೇಯವು ಎಂದು ತೋರಿಸಲಿಕ್ಕಾಗಿ ಮೊದಲು ಜಿನೋದಿತವಾದ ಮೋಕ್ಷಸ್ವರೂಪವನ್ನು ಅನುವಾದ ಮಾಡುತ್ತಾರೆ –

ಆಶ್ರಿತ್ಯ ಪ್ರತಿಭಾಮಾಹ ಜಿನಸ್ತತ್ರಾತಿತಾಮಸೀಮ್ ।

ಜ್ಞಾನಾತ್ಕರ್ಮಕ್ಷಯಾನ್ಮೋಕ್ಷೋ ಭವೇದ್ದೇಹಾಖ್ಯಪಂಜರಾತ್ ॥ ೨೪ ॥

ಪಂಜರೋನ್ಮುಕ್ತಖಗವದಲೋಕಾಕಾಶಗೋಚರಃ ।

ನಿತ್ಯಮೂರ್ಧ್ವಂ ವ್ರಜತ್ಯೇವ ಪುದ್ಗಲೋ ಹಸ್ತಪಾದವಾನ್ ॥ ೨೫ ॥

ಇತಿ ।

ಆ ವಾದಿಗಳ ಮಧ್ಯದಲ್ಲಿ ಜಿನನು ಅತ್ಯಂತ ತಾಮಸವಾದ (ವೇದಗಳಿಗೆ ಪ್ರಾಮಾಣ್ಯವನ್ನು ಅಂಗೀಕರಿಸದೇ ಇದ್ದುದರಿಂದ) ಪ್ರಜ್ಞೆಯನ್ನು ಆಶ್ರಯಿಸಿಕೊಂಡು ಹೇಳಿದನು. ಏನೆಂದರೆ – ಕೆಲವರಿಗೆ ಜ್ಞಾನದಿಂದಲೂ, ಕೆಲವರಿಗೆ ಭೋಗದಿಂದಲೂ ಕರ್ಮಕ್ಷಯವು. ಹೇಗೆ ಪಕ್ಷಿಗೆ ಪಂಜರದಿಂದ ಬಿಡುಗಡೆಯಾಗುವುದೋ ಹಾಗೆ ಕರ್ಮಕ್ಷಯದ ನಿಮಿತ್ತದಿಂದ ಜೀವನಿಗೆ ದೇಹದಿಂದ ಮುಕ್ತಿಯು ಆಗುವುದು. ಪಂಜರದಿಂದ ಮುಕ್ತವಾದ ಪಕ್ಷಿಯು ಹೇಗೆ ಆಕಾಶದಲ್ಲಿ ಮೇಲೆ ಮೇಲಕ್ಕೆ ಹಾರಿ ಹೋಗುವುದೋ, ಹಾಗೆಯೇ ಜೀವನು ಹಸ್ತಪಾದಾದಿ ಯುಕ್ತವಾದ ಚರಮ ದೇಹದಿಂದ ಯುಕ್ತನಾಗಿ ನಿರಂತರದಲ್ಲಿಯೂ ಅಲೋಕಾಕಾಶವನ್ನೇ ನೋಡುತ್ತ ಮೇಲಕ್ಕೆ ಹೋಗಿಯೇ ಹೋಗುತ್ತಾನೆ. ಹೀಗೆ ಜಿನನು ಹೇಳುತ್ತಾನೆ.

..... ತತ್ಕೇನ ಮಾನೇನ ಮೋಕ್ಷರೂಪಂ ಪ್ರದರ್ಶ್ಯತೇ ।

ಜಿನೋದಿತ ಮೋಕ್ಷಸ್ವರೂಪವು ಯಾವ ಪ್ರಮಾಣದಿಂದ ತೋರಿಸಲ್ಪಡುತ್ತದೆ? ಈ ವಿಷಯದಲ್ಲಿ ಪ್ರತ್ಯಕ್ಷವಿಲ್ಲ, ಆಗಮವೂ ಇಲ್ಲ. ಅವನ ಆಗಮವನ್ನು ನಾವು ಪ್ರಮಾಣವೆಂದು ಅಂಗೀಕರಿಸಿಲ್ಲ. ವೇದಗಳನ್ನು ಪ್ರಮಾಣವೆಂದು ಅವನು ಅಂಗೀಕರಿಸಿಲ್ಲ. ಆದ್ದರಿಂದ ಅವನು ಯಾವುದಾದರೂ ಅನುಮಾನವನ್ನು ಮಾತ್ರ ಪ್ರಮಾಣವಾಗಿ ಹೇಳಬೇಕು. ಆ ವಿಷಯದಲ್ಲಿ ಹೇಳುತ್ತಾರೆ –

ಗತಿರೂರ್ಧ್ವಾ ಚ ದುಃಖೇತಾ ಗತಿತ್ವಾಲ್ಲೌಕಿಕೀ ಯಥಾ ॥ ೨೬ ॥

ಇತ್ಯುಕ್ತೇ ಚಾನುಮಾನೈಕಶರಣಸ್ಯ ಕಿಮುತ್ತರಮ್ ।

ಊರ್ಧ್ವಗಮನವು ದುಃಖದಿಂದ ಪ್ರಾಪ್ತವಾದುದು ಹಾಗೂ ದುಃಖದಿಂದ ಕೂಡಿರುವುದು, ಚೇತನಾಶ್ರಿತವಾದ ಗತಿತ್ವವಿದ್ದುದರಿಂದ. ಲೌಕಿಕವಾದ ದೇವದತ್ತನ ಗತಿಯಂತೆ. ಹೀಗೆ ಅನುಮಾನವು ಹೇಳಲ್ಪಡುತ್ತದೆ. ಇದಕ್ಕೆ ಅನುಮಾನವನ್ನೇ

ಮುಖ್ಯವಾಗಿ ಆಶ್ರಯವಾಗಿವುಳ್ಳ ಜಿನನಿಂದ ಏನು ಉತ್ತರವಿದೆ?

ಪ್ರತ್ಯನುಮಾನಕ್ಕೆ ಉತ್ತರವನ್ನು ಶಂಕಿಸುತ್ತಾರೆ –

ಅನೂರ್ಧ್ವಗತಿತಾ ತತ್ರ ಯದ್ಯುಪಾಧಿಃ ಖಗಸ್ಯ ಚ ।। ೨೭ ।।

ದೂರೋರ್ಧ್ವಗಮನೇ ದುಃಖಮಿತಿ ಸಾಧ್ಯಾನುಗೋ ನ ಸಃ ।

ದೇವದತ್ತನ ಗತಿಯು ದುಃಖಯುಕ್ತವಾಗಿದೆ ಎನ್ನುವಲ್ಲಿ ಊರ್ಧ್ವವಲ್ಲದ ಗತಿತ್ವವು ಉಪಾಧಿಯು, ಕೇವಲ ಗತಿತ್ವವಲ್ಲ ಎಂದರೆ ಅದನ್ನು ನಿರಾಕರಿಸುತ್ತಾರೆ. ಪಾರಿವಾಳ ಮೊದಲಾದ ಪಕ್ಷಿಗಳಿಗೆ ದೂರಕ್ಕೆ ಮೇಲಕ್ಕೆ ಗಮನದಿಂದ ದುಃಖವು ಎಂಬ ಹೇತುವಿನಿಂದ ಉಪಾಧಿಗೆ ಸಾಧ್ಯವ್ಯಾಪಕತ್ವವಿಲ್ಲದಿರುವ ನಿಮಿತ್ತ ಉಪಾಧಿತ್ವ ಕೂಡುವುದಿಲ್ಲ.

ಹಾಗಾದರೆ ಇದು ಉಪಾಧಿಯಾಗುವುದು ಬೇಡ. ಶರೀರವೃತ್ತಿತ್ವವು ಉಪಾಧಿಯಾಗುವುದು ಎಂದರೆ – ಎಲ್ಲ ಉಪಾಧಿಗಳಿಗೆ ಸಾಧಾರಣವಾದ ದೂಷಣವನ್ನು ಹೇಳುತ್ತಾರೆ –

ಪ್ರತಿಸಾಧನರೂಪಸ್ಯ ನಾನುಮಾನಸ್ಯ ದೂಷಣಮ್ ।। ೨೮ ।।

ಉಪಾಧಿಃ ಪ್ರತಿರೂಪಂ ಹಿ ಸಾಧನಂ ತನ್ನ ಚಾಪರಮ್ ।

ಜಿನನಿಂದ ಹೇಳಲ್ಪಟ್ಟ ಅನುಮಾನಗಳಿಗೆ ಪ್ರತಿಸಾಧನವು ನಮ್ಮಿಂದ ಉಪನ್ಯಾಸ ಮಾಡಲ್ಪಟ್ಟಿದೆ. ಆ ರೀತಿಯಾದ ಅನುಮಾನಕ್ಕೆ ಉಪಾಧಿಯು ದೂಷಣವಲ್ಲ. ಏಕೆಂದರೆ ಯಾವ ಪ್ರತಿಪಕ್ಷಕ್ಕೆ ಉಪಾಧಿಯು ದೂಷಣವಾಗುವದೋ ಅದಕ್ಕೆ ಪ್ರತಿರೂಪವಾದ ಪಕ್ಷಕ್ಕೆ ಉಪಾಧಿಯು ಸಾಧನವಾಗುವದು. ಇತರವಾದ ಅನೈಕಾಂತಿಕ ಮೊದಲಾದುದು ದೂಷಣವಲ್ಲ.

ಶರೀರವೃತ್ತಿತ್ವವು ಉಪಾಧಿಯಾಗಲಿ ಎನ್ನುವ ಪಕ್ಷವನ್ನು ದೂಷಿಸುತ್ತಾರೆ –

ಅಥಾಪಿ ಸಶರೀರತ್ವಂ ಚಾತ್ರೋಪಾಧಿರ್ನ ವೈ ಭವೇತ್ ।। ೨೯ ।।

ಗತಿತ್ವಂ ಯತ್ರ ದೇಹಿತ್ವಮಿತಿ ಯತ್ಸಾಧನಾನುಗಮ್ ।

ಯಾವುದೊಂದು ವಿವಕ್ಷೆಯಿಂದ ಪ್ರತಿಪಕ್ಷಾನುಮಾನಕ್ಕೆ ಉಪಾಧಿಯನ್ನು ಹೇಳಿದರೂ, ನಾವು ಹೇಳಿದ ಅನುಮಾನದಲ್ಲಿ ಸಶರೀರತ್ವವು ಉಪಾಧಿಯು ಸರ್ವಥಾ ಆಗಲಾರದು. ಎಲ್ಲಿ ಚೇತನಾಶ್ರಿತವಾದ ಗತಿತ್ವವೋ ಅಲ್ಲಿ ದೇಹತ್ವವು. ಈ ಪ್ರಕಾರವಾಗಿ ಶರೀರವೃತ್ತಿತ್ವವು ಸಾಧನಕ್ಕೆ ವ್ಯಾಪಕವು. ಆದ್ದರಿಂದ ಉಪಾಧಿಯು.

ಅದಿರಲಿ. ಯಾ ಗತಿಃ ಸಾ ದುಃಖೇತಾ ಎಂಬ ವ್ಯಾಪ್ತಿಯಿಂದ ಮುಕ್ತರಿಗೆ ದುಃಖ ಪ್ರಾಪ್ತಿಯನ್ನು ಹೇಳುವವನು, ಈಶ್ವರನಿಗೂ ಗತಿತ್ವ ನಿಮಿತ್ತಕವಾದ ದುಃಖವನ್ನು

ಅಂಗೀಕರಿಸಬೇಕು. ನಿರ್ದೋಷನಾದ ಭಗವಂತನಲ್ಲಿ ದುಃಖತ್ವವನ್ನು ಆರೋಪಿಸಿದರೆ ಅಪಸಿದ್ಧಾಂತವು. ಶರೀರ ವೃತ್ತಿತ್ವಕ್ಕೆ ಸಾಧನವ್ಯಾಪಕತ್ವವನ್ನು ಅಂಗೀಕರಿಸಿದರೆ ಗತಿತ್ವ ನಿಮಿತ್ತಕವಾದ ಶರೀರತ್ವವನ್ನು ಈಶ್ವರನಿಗೂ ಅಂಗೀಕರಿಸಬೇಕಾಗುವುದು. ಆದ್ದರಿಂದ ಅಪಸಿದ್ಧಾಂತವು ಎಂದರೆ –

ಆಗಮಾನನುಸಾರಿತ್ವೇ ಪ್ರಸಂಗೋऽಯಂ ಯತಸ್ತತಃ ।। ೩೦ ।।

ನಾಪಸಿದ್ಧಾಂತತಾ ದೋಷಃ ಪ್ರಸಂಗೇ ಯದಿ ಸಾ ಭವೇತ್ ।

ತದೈವಾತಿಪ್ರಸಂಗಃ ಸ್ಯಾನ್ನ ಪ್ರಸಂಗಃ ಕ್ವಚಿದ್ಭವೇತ್ ।। ೩೧ ।।

ಮೋಕ್ಷಸ್ವರೂಪವನ್ನು ವೇದ ಮೊದಲಾದ ಆಗಮಗಳನ್ನು ಅನುಸರಿಸದೆ ಅನುಮೇಯಿಸಿದ ಪಕ್ಷದಲ್ಲಿ ಈ ಅತಿಪ್ರಸಂಗವು. ನಾವು ವೇದಾದಿ ಆಗಮಗಳನ್ನು ಅಪೇಕ್ಷಿಸಿಯೇ ಮೋಕ್ಷಸ್ವರೂಪವನ್ನು ಹೇಳುವುದರಿಂದ ನಮಗೆ ಅಪಸಿದ್ಧಾಂತ ದೋಷವು ಬರುವುದಿಲ್ಲ. ಯಾವಾಗ ಅತಿಪ್ರಸಂಗದಲ್ಲಿ ಅಪಸಿದ್ಧಾಂತ ದೋಷವು ಉದ್ಭವಿಸುವುದೋ ಆಗಲೇ ಅತಿಪ್ರಸಂಗವು ಆಗುವುದು. ಎಲ್ಲ ಪ್ರಸಂಗಗಳಲ್ಲಿಯೂ ಅಪಸಿದ್ಧಾಂತವನ್ನು ಹೇಗಾದರೂ ಉದ್ಭಾವಿಸುವುದು ಶಕ್ಯವಾದುದರಿಂದ, ಎಲ್ಲಿಯೂ ಅತಿಪ್ರಸಂಗವು ಆಗಲಾರದು.

ಇದರ ಅಭಿಪ್ರಾಯವಿಷ್ಟು – ವೇದಗಳನ್ನು ಅನುಸರಿಸದೆ ಇರುವ ಅನುಮಾನ ದಿಂದ ಮೋಕ್ಷವನ್ನು ಸಾಧಿಸಲಿಕ್ಕೆ ಶಕ್ಯವಾಗುವುದಿಲ್ಲ. ಅಂತಹ ಅನುಮಾನದಿಂದಲೇ ದೂಷಿಸಲಿಕ್ಕೂ ಶಕ್ಯವಾಗುವುದು ಎನ್ನುವ ಅತಿಪ್ರಸಂಗವನ್ನು ಹೇಳಿದರೆ, ಅದು ಅಪಸಿದ್ಧಾಂತವಾಗದು. ಹಾಗಿದ್ದರೂ ಅಪಸಿದ್ಧಾಂತವನ್ನು ಹೇಳುವುದಾದರೆ, ಹೀಗೆ ಎಲ್ಲ ಅತಿಪ್ರಸಂಗಗಳನ್ನು ಅಪಲಾಪ ಮಾಡುವುದು ಶಕ್ಯವಿರುವುದರಿಂದ, ಎಲ್ಲಿಯೂ ಅತಿಪ್ರಸಂಗವು ಯುಕ್ತವಾಗಲಾರದು ಎನ್ನುವ ಅತಿಪ್ರಸಂಗವು ಬರುವುದು.

ಹಾಗಾದರೆ ಲೋಕಾಕಾಶ ಸಂಬಂಧಿತ್ವವೇ ಉಪಾಧಿಯು ಎಂದರೆ ಅದನ್ನು ದೂಷಿಸುತ್ತಾರೆ –

ಲೋಕಾಕಾಶಗತಿತ್ವಂ ಚೇದುಪಾಧಿಃ ಸಾಧನಾನುಗಃ ।

ಸೋऽಪೀತ್ಯುಕ್ತೇ ವದೇತ್ಕಿಂ ಸ ತಸ್ಮಾದ್ವೇದೋದಿತೋ ಭವೇತ್ ।। ೩೨ ।।

ಮೋಕ್ಷಃ ।

ಇಲ್ಲಿ ಲೋಕಾಕಾಶಸಂಬಂಧಿತ್ವವೇ ಉಪಾಧಿಯು. ಸಾಧ್ಯವ್ಯಾಪಕವಾದ್ದರಿಂದ ಗತಿತ್ವವಾದರೂ ಸ್ವರೂಪಕಥನವು ಎಂದರೆ – ಯಾವುದು ಗತಿಯೋ ಅದು ಲೋಕಾಕಾಶ ಸಂಬಂಧಿನಿಯು. ಆದ್ದರಿಂದ ಅದೂ ಉಪಾಧಿಯೇ. ಅದೂ ಕೂಡ ಸಾಧನವ್ಯಾಪಕವು. ಹೀಗೆ ಹೇಳಿದರೆ ಆ ಜಿನನು ಏನೆಂದು ಹೇಳುವನು? ಹೀಗೆ ಜಿನನು ಹೇಳಿದ ಮೋಕ್ಷಸ್ವರೂಪದಲ್ಲಿ ಪ್ರಮಾಣವಿಲ್ಲದಿರುವುದರಿಂದ, ವೇದದಲ್ಲಿ

ಹೇಳಲ್ಪಟ್ಟಂತೆ ನಾವು ಪ್ರತಿಪಾದಿಸಿದ ಪ್ರಕಾರವೇ ಮೋಕ್ಷಸ್ವರೂಪವು ಎನ್ನುವುದು ಸಿದ್ಧವಾಗುವದು.

ಹಿಂದೆ ಹೇಳಿದ ದೋಷಗಳನ್ನು ಬೌದ್ಧಮತಕ್ಕೂ ಅನ್ವಯಮಾಡಿ ಬೌದ್ಧರು ಹೇಳಿದ ಮೋಕ್ಷಸ್ವರೂಪವನ್ನು ದೂಷಿಸುತ್ತಾರೆ –

..... ಏವಂ ಸ್ವಯಂ ವಿಷ್ಣುರ್ಯದ್ಯಪೀಶೋ ಹ್ಯಶೇಷವಿತ್ ।

ಚಕಾರ ಸೌಗತಮತಂ ಮೋಹಾಯೈವ ಚಕಾರ ಯತ್ ॥ ೩೩ ॥

ಅಸುರಾಣಾಮಯೋಗ್ಯಾನಾಂ ವೇದಮಾರ್ಗೇ ಪ್ರವರ್ತತಾಮ್ ।

ಅತೋಽಸುರಾಧಿಕಾರತ್ವಾನ್ನ ಗ್ರಾಹ್ಯಂ ತನ್ಮತಂ ಕ್ವಚಿತ್ ॥ ೩೪ ॥

ಹೇಗೆ ಅಪ್ರಾಮಾಣಿಕವಾದ್ದರಿಂದ ಜೈನಮತವು ಗ್ರಾಹ್ಯವಲ್ಲವೋ ಹಾಗೆಯೇ ಸೌಗತಮತವೂ (ಬೌದ್ಧಮತವೂ) ಎಲ್ಲಿಯೂ ಗ್ರಾಹ್ಯವಾಗುವುದಿಲ್ಲ. ಈ ಬೌದ್ಧ ಮತವು ಪರಮಾಪ್ತನಾದ ಬುದ್ಧರೂಪಿಯಾದ ವಿಷ್ಣುವಿನಿಂದಲೇ ಪ್ರವರ್ತಿತವಾಗಿದೆ. ಹೀಗಿರುವಾಗ ಈ ಮತವು ಹೇಗೆ ಸ್ವೀಕಾರಕ್ಕೆ ಅರ್ಹವಲ್ಲ ಎಂದರೆ – ಹೌದು ಈ ಮತವು ಸ್ವಯಂ ವಿಷ್ಣುವಿನಿಂದಲೇ ಮಾಡಲ್ಪಟ್ಟಿದೆ ಎನ್ನುವುದು ಸುಳ್ಳಲ್ಲ. ಆ ವಿಷ್ಣುವು ಕರಣಪಾಟವವುಳ್ಳವನು ಹಾಗೂ ಸರ್ವಜ್ಞನಾದ ತತ್ವಜ್ಞಾನಿ ಎನ್ನುವುದೂ ನಿಜವೇ. ಹಾಗಿದ್ದರೂ ಆ ಮತವು ಅಗ್ರಾಹ್ಯವು ಎಂದು ಪ್ರಸಿದ್ಧವು. ಏಕೆಂದರೆ ವಿಷ್ಣುವು ಈ ಮತವನ್ನು ಅಸುರರ ಮೋಹನಕ್ಕಾಗಿಯೇ ಮಾಡಿರುವನು. ಇದಕ್ಕೆ ಅಸುರರೇ ಅಧಿಕಾರಿಗಳು. ಅಸುರರನ್ನಾದರೂ ಏಕೆ ಮೋಹನಗೊಳಿಸಬೇಕು ಎಂದರೆ, ಅವರು ವೇದಮಾರ್ಗದಲ್ಲಿ ಅಯೋಗ್ಯರಾಗಿದ್ದರೂ ವೇದಮಾರ್ಗದಲ್ಲಿ ಪ್ರವರ್ತಿಸುವರು. ಅಸುರರಿಗೆ ಯಥಾರ್ಥಜ್ಞಾನವು ಆಗಬಾರದು ಮತ್ತು ಮಿಥ್ಯಾಜ್ಞಾನವೇ ಆಗಬೇಕು ಎಂಬ ಉದ್ದೇಶದಿಂದ ವಿಷ್ಣುವು ಬೌದ್ಧಮತವನ್ನು ಮಾಡಿದನು. ಈ ಕಾರಣದಿಂದ ಸಜ್ಜನರು ಈ ಮತವನ್ನು ಸ್ವೀಕರಿಸಬಾರದು. ಇದಕ್ಕೆ ಭಾಗವತ ವಾಕ್ಯವು ಪ್ರಮಾಣ. 'ತತಃ ಕಲೌ ಸಂಪ್ರವೃತ್ತೇ ಸಂಮೋಹಾಯ ಸುರದ್ವಿಷಾಮ್। ಬುದ್ಧೋ ನಾಮ್ನಾ ಜಿನಸುತಃ ಕೀಕಟೇಷು ಭವಿಷ್ಯತಿ' ಎಂದು ಭಾಗವತದಲ್ಲಿ ತೃತೀಯ ಸ್ಕಂಧದ ತೃತೀಯ ಅಧ್ಯಾಯದಲ್ಲಿ ಉಕ್ತವಾಗಿದೆ.

ಹೀಗೆ ಸಾಮಾನ್ಯವಾಗಿ ದೂಷಿಸಲ್ಪಟ್ಟ ಬೌದ್ಧಮತವನ್ನು ವಿಶೇಷವಾಗಿ ನಿರಾಕರಿಸಲು ಈ ಮತದ ಪ್ರಭೇದಗಳನ್ನು ಹೇಳುತ್ತಾರೆ –

ಚತುಷ್ಪ್ರಕಾರಂ ತಚ್ಚೋಕ್ತಂ ಶೂನ್ಯಂ ವಿಜ್ಞಾನಮೇಕಲಮ್ ।

ಅನುಮೇಯಬಹಿಸ್ತತ್ವಂ ತಥಾ ಪ್ರತ್ಯಕ್ಷಬಾಹ್ಯಗಮ್ ॥ ೩೫ ॥

ಇತಿ ।

ವ್ಯಾಖ್ಯಾತೃವಿನ ಮತಿಭೇದದಿಂದ ಬೌದ್ಧಮತವು ನಾಲ್ಕು ಪ್ರಕಾರವುಳ್ಳದ್ದಾಗಿ ಹೇಳಲ್ಪಡುತ್ತದೆ. ಅದ್ವಿತೀಯವಾದ ಶೂನ್ಯವೇ ತತ್ವವೆಂದು ಒಂದು ಮತವು. ವಿಜ್ಞಾನವೇ ತತ್ವವೆಂದು ಇನ್ನೊಂದು ಮತವು. ಅನುಮೇಯಿಸಲಿಕ್ಕೆ ಯೋಗ್ಯವಾದ ಜ್ಞಾನವ್ಯತಿರಿಕ್ತವಾದ ತತ್ವವು ಇದ್ದೇ ಇದೆ ಎಂದು ಹೇಳುವ ಸೌತ್ರಾಂತಿಕ ಮತವು ಇನ್ನೊಂದು. ಹಾಗೆಯೇ ಮತ್ತೊಂದು ಪ್ರಕಾರವೆಂದರೆ ಪ್ರತ್ಯಕ್ಷವಾದ ಬಾಹ್ಯವಿಷಯವುಳ್ಳದ್ದು ಎಂದು ಹೇಳುವ ವೈಭಾಷಿಕ ಮತವು. ಹೀಗೆ ಬೌದ್ಧಮತದಲ್ಲಿ ನಾಲ್ಕು ಪ್ರಕಾರಗಳು.

ಅದರಲ್ಲಿ ಶೂನ್ಯವಾದಿಗಳು ಹೇಳಿದ ಮೋಕ್ಷವನ್ನು ಅನುವಾದ ಮಾಡುತ್ತಾರೆ –

..... ತತ್ರ ತು ಯೇ ಶೂನ್ಯಂ ವದಂತ್ಯಜ್ಞಾನಮೋಹಿತಾಃ ।

ತೇ ಮೋಕ್ಷಂ ತಾದೃಶಂ ಬ್ರೂಯುರ್ನಿಃಶಂಕಂ ಮಾಯಿನೋ ಯಥಾ ॥೩೬॥

ಆ ನಾಲ್ಕರಲ್ಲಿ ಯಾರು ತತ್ವಜ್ಞಾನಾಭಾವದ ನಿಮಿತ್ತ ಮಿಥ್ಯಾಜ್ಞಾನಯುಕ್ತರಾಗಿ ಶೂನ್ಯವೇ ತತ್ವವೆಂದು ಹೇಳುತ್ತಾರೋ ಅವರು ಮಾಯಿಗಳು. ಏಕೆಂದರೆ ಇವರೂ ಮಾಯಿಗಳು ಹೇಳುವಂತಹ ರೀತಿಯ ಮೋಕ್ಷವನ್ನೇ ನಿಸ್ಸಂದೇಹವಾಗಿ ಹೇಳುತ್ತಾರೆ. ಆದರೆ ಇಲ್ಲಿ ವಿಶೇಷವಿದೆ. ಮಾಯಿಗಳು ತಾವು ವೇದಪ್ರಾಮಾಣ್ಯವಾದಿಗಳೆಂಬ ಅಭಿಮಾನದಿಂದ 'ಪರಮಂ ಸಾಮ್ಯಮುಪೈತಿ' 'ಸೋಽಶ್ನುತೇ ಸರ್ವಾನ್ಕಾಮಾನ್' ಇತ್ಯಾದಿ ವೇದಕ್ಕೆ ಅದು ಗೌಣಮುಕ್ತಿ ಪರವು ಇತ್ಯಾದಿಯಾಗಿ ಅನ್ಯಥಾ ವ್ಯಾಖ್ಯಾನಿಸಿ ತಮಗೆ ಅಭಿಮತವಾದ ಮೋಕ್ಷವನ್ನು ಪ್ರತಿಪಾದಿಸುತ್ತಾರೆ. ವೇದಪ್ರಾಮಾಣ್ಯವನ್ನು ಒಪ್ಪದ ಶೂನ್ಯವಾದಿಗಳಾದರೂ ತಮಗೆ ತೋಚಿದ ರೀತಿಯಲ್ಲಿ ಮೋಕ್ಷವನ್ನು ಹೇಳುತ್ತಾರೆ.

ಹೀಗೆ ಸಾಮಾನ್ಯವಾಗಿ ಹೇಳಿದ್ದನ್ನೇ ಸ್ಪಷ್ಟವಾಗಿ ಹೇಳುತ್ತಾರೆ –

ನ ಕಿಂಚಿನ್ಮುಕ್ತ್ಯವಸ್ಥಾಯಾಮಾತ್ಮಾತ್ಮೀಯಮಥಾಪಿ ವಾ ।

ಮೋಕ್ಷಾವಸ್ಥೆಯಲ್ಲಿ ಯಾವುದೇ ಜ್ಞಾನವಾಗಲೀ ಜ್ಞೇಯವಾಗಲೀ ಇರುವುದಿಲ್ಲ.

ಶೂನ್ಯವಾದವು ಏಕಾತ್ಮವಾದ ಹಾಗೂ ಅನೇಕಾತ್ಮವಾದ ಎಂದು ಎರಡು ವಿಧ. ಅದರಲ್ಲಿ ಮೊದಲನೆಯದೇ ಮುಖ್ಯಸಿದ್ಧಾಂತ. ಮಂದರ ಬುದ್ಧಿಗೆ ಹಿಡಿಯಲಿಕ್ಕೆ ಎರಡನೆಯದನ್ನು ಹೇಳಲಾಗಿದೆ. ಎರಡಕ್ಕೂ ಸಾಧಾರಣವಾದ ವಿಷಯವನ್ನು ಹೇಳಿ ಅದರಲ್ಲಿ ವಿಶೇಷವನ್ನು ಹೇಳುವ ಇಚ್ಛೆಯಿಂದ ಆದಿಯಲ್ಲಿ ಮೊದಲನೆಯದಾದ ಏಕಾತ್ಮವಾದವನ್ನು ಹೇಳುತ್ತಾರೆ –

ಏಕಸ್ಮಿನ್ ಸಂಸೃತೇರ್ಮುಕ್ತೇ ನ ಕಿಂಚಿದವಶಿಷ್ಯತೇ ॥ ೩೭ ॥

ತತ್ಸಂವೃತ್ಯೈವ ಭೇದೋಽಯಂ ಚೇತನಾಚೇತನಾತ್ಮಕಃ ।

ದೃಶ್ಯತೇ ಸಂಸೃತೇರ್ಧ್ವಂಸೇ ನಿರ್ವಿಶೇಷೈವ ಶೂನ್ಯತಾ ॥ ೩೮ ॥

ಒಬ್ಬನು ಸಂಸಾರದಶೆಯಿಂದ ಮುಕ್ತನಾಗುತ್ತಿದ್ದಂತೆ ಯಾವೊಂದು ಚೇತನ ಅಥವಾ ಅಚೇತನವಾಗಲೀ ಉಳಿಯುವುದಿಲ್ಲ. ಏಕೆಂದರೆ ಆ ಒಬ್ಬನೇ ಆತ್ಮನ ಅಜ್ಞಾನದ ನಿಮಿತ್ತಕವಾಗಿ ಚೇತನ–ಅಚೇತನ ಎಂಬ ಭೇದಾತ್ಮಕವಾದ ಜಗತ್ತು ಆರೋಪಿತವಾಗಿ ಕಾಣಲ್ಪಡುತ್ತದೆ. ಒಬ್ಬನೇ ಆದ ಆತ್ಮನ ಅಜ್ಞಾನಕ್ಕೆ ವಿನಾಶವು ಉಂಟಾದಾಗ, ಅಜ್ಞಾನದಿಂದ ಆರೋಪಿತವಾದ ಜಗತ್ತು ಮಾಯವಾಗುತ್ತದೆ. ಆಗ ನಿರ್ವಿಶೇಷವಾದ ಶೂನ್ಯತ್ವವೇ ಉಳಿಯುತ್ತದೆ.

ನಿರ್ವಿಶೇಷತ್ವವನ್ನೇ ವಿವರಿಸುತ್ತಾರೆ –

ನ ಸತ್ತ್ವಂ ನೈವ ಚಾಸತ್ತ್ವಂ ಶೂನ್ಯತತ್ತ್ವಸ್ಯ ವಿದ್ಯತೇ ।

ನ ಸುಖತ್ವಂ ನ ದುಃಖತ್ವಂ ನ ವಿಶೇಷೋಽಪಿ ಕಶ್ಚನ ॥ ೩೯ ॥

ಶೂನ್ಯತ್ವಕ್ಕೆ ಜಾತ್ಯಾದಿರೂಪವಾದ ಸತ್ವವೂ ಇಲ್ಲ, ಅಭಾವಪ್ರತಿಯೋಗಿತ್ವ ರೂಪವಾದ ಅಸತ್ವವೂ ಇಲ್ಲ. ಸುಖತ್ವವೂ ಇಲ್ಲ, ದುಃಖತ್ವವೂ ಇಲ್ಲ. ಯಾವ ವಿಶೇಷವೂ ಇಲ್ಲವೆಂದು ತಾತ್ಪರ್ಯ.

ಹಾಗಾದರೆ ಮೋಕ್ಷವು ಇಲ್ಲವೆಂದು ಹೇಳಲಿಕ್ಕೆ ಬರುವುದಿಲ್ಲ. ಹಾಗೆ ಒಪ್ಪಿದರೆ ಯಾವಾಗಲೂ ಸಂಸಾರವು ಇರಬೇಕಾಗುವುದು. ಆದ್ದರಿಂದ ಇರತಕ್ಕ ಮೋಕ್ಷದಿಂದ ಶೂನ್ಯವು ಸವಿಶೇಷವಾದುದು ಎಂದರೆ –

ನಿರ್ವಿಶೇಷಂ ಸ್ವಯಂಭಾತಂ ನಿರ್ಲೇಪಮಜರಾಮರಮ್ ।

ಶೂನ್ಯಂ ತತ್ತ್ವಮಸಂಬಾಧಂ ನಾನಾಸಂವೃತಿವರ್ಜಿತಮ್ ॥ ೪೦ ॥

ಅಶೇಷದೋಷರಹಿತಂ ಮನೋವಾಚಾಮಗೋಚರಮ್ ।

ಮೋಕ್ಷ ಇತ್ಯುಚ್ಯತೇಽಸದ್ಭಿಃ ..... ॥

ನಿರ್ವಿಶೇಷವೂ, ಸ್ವಪ್ರಕಾಶವೂ, ಧರ್ಮಾಧರ್ಮಗಳಿಂದ ಲೇಪವಿಲ್ಲದ್ದೂ, ಜರಾ ಮರಣರಹಿತವೂ, ಅದ್ವಿತೀಯವೂ, ನಾನಾರೀತಿಯ ಅಜ್ಞಾನಗಳಿಂದ ವರ್ಜಿತವೂ, ಎಲ್ಲ ಕಾಮಾದಿ ದೋಷಗಳಿಂದ ರಹಿತವೂ, ಮನೋವಚನಗಳಿಗೆ ಅಗೋಚರವೂ ಆದ ಶೂನ್ಯತತ್ವವೇ ಮೋಕ್ಷವೆಂದು ಅಸಜ್ಜನರಿಂದ ಹೇಳಲ್ಪಡುತ್ತದೆ.

..... ನಾನಾಸಂವೃತಿದೂಷಿತಮ್ ॥ ೪೧ ॥

ಸಂಸೃತ್ಯವಸ್ಥಾ ವಿಜ್ಞೇಯಾ ಸಂವೃತ್ಯೈವ ವಿಶಿಷ್ಯತೇ ।

ಸ್ಥಿತಯಾ ಧ್ವಸ್ತಯಾ ಚೈವ ಸಂಸೃತಿರ್ಮೋಕ್ಷ ಇತ್ಯಪಿ ॥ ೪೨ ॥

ಯಾವ ಕಾರಣದಿಂದ ನಾನಾ ವಿಧವಾದ ಅಜ್ಞಾನಗಳಿಂದ ದೂಷಿತವಾದ ಶೂನ್ಯವೇ ಸಂಸಾರಾವಸ್ಥೆ ಎಂದು ತಿಳಿಯತಕ್ಕುದೋ, ಆ ಕಾರಣದಿಂದ ಅದಕ್ಕೆ

ವಿಪರೀತವಾದ ಶೂನ್ಯವೇ ಮೋಕ್ಷ ಎನ್ನುವುದು ಯುಕ್ತವು. ಹೀಗೆ ಸಂಸಾರವೂ ಮೋಕ್ಷವೂ ಶೂನ್ಯವೆಂದಾದರೆ, ಇರತಕ್ಕ ಹಾಗೂ ಧ್ವಂಸವಾದ ಅಜ್ಞಾನದಿಂದಲೇ ಸಂಸಾರ ಹಾಗೂ ಮೋಕ್ಷಗಳು ಎನ್ನುವುದು ವಿಶೇಷವೇ ಆಗುವುದು. ಸಂವೃತಿ ಧ್ವಂಸರೂಪವಾದ ಭೇದವಿರುವ ಪ್ರಯುಕ್ತ, ಸಂಸಾರ ಹಾಗೂ ಮೋಕ್ಷ ಶಬ್ದಗಳಿಗೆ ಪರ್ಯಾಯತ್ವವು ಬರುವುದಿಲ್ಲ ಎಂದು ಭಾವ.

ಹೀಗೆ ಏಕಾತ್ಮವಾದವನ್ನು ಉಪನ್ಯಾಸ ಮಾಡಿ ಈಗ ಅನೇಕಾತ್ಮವಾದವನ್ನು ತಿಳಿಸುತ್ತಾರೆ –

ಕೇಚಿತ್ತೇಷ್ವನ್ಯಥಾ ಪ್ರಾಹುಃ ಸಂವೃತ್ಯೈವ ತ್ವನೇಕಧಾ ।

ಅವಚ್ಛಿನ್ನಂ ಮಹಾಶೂನ್ಯಂ ನಾನಾ ಪುದ್ಗಲಶಬ್ದಿತಮ್ ॥ ೪೩ ॥

ಶೂನ್ಯವಾದಿಗಳಲ್ಲಿ ಕೆಲವರು ಏಕಾತ್ಮವಾದದಿಂದ ಬೇರೆಯಾಗಿ ಹೇಳುತ್ತಾರೆ. ಹೇಗೆಂದರೆ ವಿಶ್ವಾರೋಪಕ್ಕೆ ಕಾರಣವಾದ ಅಜ್ಞಾನದಿಂದಲೇ ಅನೇಕ ವಿಧದಲ್ಲಿ ಅವಚ್ಛಿನ್ನವಾಗಿರುವ (ಅಂದರೆ ಸೇರಿಕೊಂಡಿರುವ) ಮಹಾಶೂನ್ಯವು ನಾನವಿಧವಾದ ಪುದ್ಗಲ ಶಬ್ದದಿಂದ ಹೇಳಲ್ಪಡುತ್ತದೆ. ಶೂನ್ಯವು ಅವಚ್ಛಿನ್ನವೇ ಆಗಿದೆ, ಹೊರತು ಸ್ವಭಾವದಿಂದ ಅಲ್ಲ. ಈ ರೀತಿಯಲ್ಲಿ ಅನೇಕಾತ್ಮವಾದವು ಏಕಾತ್ಮವಾದಕ್ಕಿಂತ ಭಿನ್ನವಾಗಿದೆ ಎಂಬುದನ್ನು ತು ಶಬ್ದದಿಂದ ತಿಳಿಸಿದ್ದಾರೆ.

ಇದರಿಂದ ಏನು ಹೇಳಿದಂತಾಯಿತು ಎಂದರೆ –

ಯಸ್ಯ ಶೂನ್ಯೈಕರಸತಾ ಜ್ಞಾನಾತ್ಸಾ ತ್ವಪಗಚ್ಛತಿ ।

ಸ ಪುದ್ಗಲತ್ವನಿರ್ಮುಕ್ತೋ ಮಹಾಶೂನ್ಯತ್ವಮೇಷ್ಯತಿ ॥ ೪೪ ॥

ಸಂವೃತ್ಯಾ ಯಸ್ತ್ವವಚ್ಛಿನ್ನೋ ದುಃಖಾನ್ಯನುಭವತ್ಯಲಮ್ ।

ಇತಿ ॥

ಅನೇಕಾತ್ಮರಲ್ಲಿ ಯಾವೊಬ್ಬ ಆತ್ಮನಿಗಾದರೂ ಶೂನ್ಯವು ಅದ್ವಿತೀಯವು ಎಂಬ ಜ್ಞಾನದಿಂದ ವಿಶ್ವಾರೋಪನಿಮಿತ್ತವಾದ ಅಜ್ಞಾನವು (ಮೂಲಸಂವೃತಿಯು) ಬಿಟ್ಟು ಹೋಗುತ್ತದೆ. ದುಃಖಾದಿ ಅನುಭವಕ್ಕೆ ಕಾರಣವಾದ ಅಜ್ಞಾನವು ನಾಶವಾಗುತ್ತದೆ. ಆಗ ಕರ್ತೃತ್ವಾದಿ ರೂಪವಾದ ಪುದ್ಗಲತ್ವದಿಂದ ಬಿಡಲ್ಪಟ್ಟವನಾಗಿ ಮಹಾಶೂನ್ಯತ್ವವನ್ನು ಹೊಂದುತ್ತಾನೆ. ಅಜ್ಞಾನದಿಂದ ಯುಕ್ತನಾದ ಆತ್ಮನು ಪುದ್ಗಲಭಾವದಿಂದ ದುಃಖಗಳನ್ನು ಚೆನ್ನಾಗಿ ಪರಮಾರ್ಥಬುದ್ಧಿಯಿಂದಲೇ ಅನುಭವಿಸುತ್ತಾನೆ. ಹೀಗೆ ಕೆಲವರು ಹೇಳುತ್ತಾರೆ.

ಶೂನ್ಯವಾದಿಗಳಿಗೆ ಅಭಿಮತವಾದ ಮೋಕ್ಷದ ನಿರಾಕರಣೆಯಿಂದಲೇ ಮಾಯಾವಾದಿ ಅಭಿಮತವಾದ ಮೋಕ್ಷವೂ ನಿರಾಕೃತವಾಗುವುದು ಎಂಬ ಅಭಿಪ್ರಾಯದಿಂದ ಮಾಯಿನೋ ಯಥಾ ಎಂದು ಹೇಳಿದ ಸಿದ್ಧಾಂತಸಾಮ್ಯವನ್ನು ಉಪಪಾದಿಸುತ್ತಾರೆ–

..... ಏವಂ ಮಾಯಿನಶ್ಚಾಹುರೇಕಜೀವತ್ವವಾದಿನಃ ।। ೪೫ ।।

ಬಹುಜೀವಮತಾಶ್ಚೇತಿ ಮಾಯಾ ತೇಷಾಂ ತು ಸಂವೃತಿಃ ।

ನಿರ್ವಿಶೇಷತ್ವವಾಚ್ಯೈವ ಶೂನ್ಯಂ ಬ್ರಹ್ಮೇತಿ ನೋ ಭಿದಾ ।। ೪೬ ।।

ಏಕಜೀವವಾದಿಗಳು ಮತ್ತು ಬಹುಜೀವವಾದಿಗಳು ಎಂಬ ದ್ವಿವಿಧ ಮಾಯಾವಾದಿಗಳೂ ಕೂಡ ದ್ವಿವಿಧ ಶೂನ್ಯವಾದಿಗಳಂತೆಯೇ ಮೋಕ್ಷಸ್ವರೂಪವನ್ನು ಹೇಳುತ್ತಾರೆ. ಶೂನ್ಯವಾದಿಗಳು ಅಂಗೀಕರಿಸಿರುವ ಸಂವೃತಿಯೇ ಮಾಯಾವಾದಿಗಳ ಮಾಯೆಯು. ಶೂನ್ಯವಾದಿಗಳ ಶೂನ್ಯ ಮತ್ತು ಮಾಯಾವಾದಿಗಳ ಬ್ರಹ್ಮ ಎರಡೂ ನಿರ್ವಿಶೇಷತ್ವ ವಾಚ್ಯವೇ ಆದ್ದರಿಂದ ಅವುಗಳಿಗೆ ಭೇದವಿಲ್ಲ. ಶಬ್ದಮಾತ್ರದಿಂದ ಭೇದವು, ವಸ್ತುತ್ವದಿಂದ ಭೇದವಿಲ್ಲ ಎಂದು ಭಾವ.

ಹಾಗಾದರೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ' 'ವಿಜ್ಞಾನಮಾನಂದಂ ಬ್ರಹ್ಮೈವ' ಇತ್ಯಾದಿ ಶ್ರುತಿಗಳಿಂದಲೇ ಬ್ರಹ್ಮನು ಸರ್ವವಸ್ತುಗಳಿಂದಲೂ ಭಿನ್ನನೆಂದು ತಿಳಿದು ಬರುತ್ತದೆ. ಆದ್ದರಿಂದ ಶೂನ್ಯ ಮತ್ತು ಬ್ರಹ್ಮಗಳಿಗೆ ಭೇದವಿಲ್ಲವೆನ್ನುವುದು ಹೇಗೆ ಎಂದರೆ – ಸತ್ಯ ಜ್ಞಾನ ಇತ್ಯಾದಿ ಲಕ್ಷಣಗಳಿಂದ ಬ್ರಹ್ಮನು ಜಗತ್ತಿಗಿಂತ ಭಿನ್ನನೆಂದು ಶ್ರುತಿ ಹೇಳುತ್ತದೆ. ಆದರೆ ಮಾಯಾವಾದಿಗಳ ಬ್ರಹ್ಮನಿಗೆ ಈ ಯಾವ ಲಕ್ಷಣವೂ ಕೂಡುವುದಿಲ್ಲ ಎಂದು ಹೇಳುತ್ತಾರೆ –

ಸಚ್ಚಿತ್ಸುಖಾದಿಕಂ ಚೈವ ಕಿಂ ಕುತೋಽಖಂಡವಾದಿನಃ ।

ಮಾಯಾವಾದಿಗಳ ಪ್ರಕಾರ ನಿರ್ದೋಷವಾದ (ಸತ್), ಜ್ಞಾನರೂಪವಾದ (ಚಿತ್), ಸುಖರೂಪವಾದ ಮೊದಲಾದ ಯಾವ ಧರ್ಮಗಳೂ ಇಲ್ಲ. ನಿರ್ವಿಶೇಷವಾದಿಗಳಾದ ಅವರು ಸತ್ವಾದಿ ಧರ್ಮಗಳನ್ನು ಹೇಗೆ ಅಂಗೀಕರಿಸುವುದು ಸಾಧ್ಯ?

ಸತ್ವಾದಿ ಪದಗಳಿಂದ ಪ್ರತಿಪಾದ್ಯವಾದ ವಸ್ತುವಿನಲ್ಲಿ ಭೇದವಿಲ್ಲದಿದ್ದರೂ ಅಸತ್ವಾದಿ ವ್ಯಾವರ್ತ್ಯ ಧರ್ಮಗಳಿಗೆ ಭೇದವಿದ್ದೇ ಇದೆ. ಆದ್ದರಿಂದ ಅಸತ್ವಾದಿ ವ್ಯಾವೃತ್ತಿಯೇ ಪ್ರಯೋಜನವಾಗಿವುಳ್ಳ ಸತ್ವಾದಿ ವಾಚಕವಾದ ಅನೇಕ ಪದಗಳು ಬ್ರಹ್ಮನಲ್ಲಿ ಇರುತ್ತವೆ. ಆದಕಾರಣ ನಮ್ಮ ಮತದಲ್ಲಿ ಶ್ರುತ್ಯರ್ಥ ನಿರ್ವಾಹವು ಹೇಗೆ ಸಾಧ್ಯವಿಲ್ಲ ಎಂದರೆ –

ವ್ಯಾವರ್ತ್ಯಮಾತ್ರಭೇದಸ್ತು ವಿದ್ಯತೇ ಶೂನ್ಯವಾದಿನಃ ।। ೪೭ ।।

ವ್ಯಾವರ್ತ್ಯಮಾತ್ರ ಭೇದವಾದರೂ ಶೂನ್ಯವಾದಿಗೆ ಇರುತ್ತದೆ. ಈ ಪ್ರಕ್ರಿಯೆಯು ಎಲ್ಲವೂ ಶೂನ್ಯವಾದಿಗಳ ಮತದಲ್ಲಿಯೂ ಇದ್ದೇ ಇರುವ ಪ್ರಯುಕ್ತ, ಇದರಿಂದಲೂ ಬ್ರಹ್ಮ–ಶೂನ್ಯರಿಗೆ ಭೇದವನ್ನು ಹೇಳಲಿಕ್ಕೆ ಶಕ್ಯವಾಗುವುದಿಲ್ಲ ಎಂದು ಭಾವ.

ಅನೃತಾದೇರಪೋಹಂ ತು ಸ್ವಯಮೇವ ಹಿ ಮನ್ಯತೇ ।

ನಿರ್ವಿಶೇಷತ್ವತೋ ನೈವ ವಿಶೇಷೋ ಬ್ರಹ್ಮಶೂನ್ಯಯೋಃ ।। ೪೮ ।।

ಶೂನ್ಯವಾದಿಯು ಅನೃತಾದಿಗಳಿಗೆ ಸತ್ವಾದಿ ಪದಾರ್ಥತ್ವದಿಂದಲೂ ಶೂನ್ಯ ವಿಶೇಷಣತ್ವದಿಂದಲೂ ವ್ಯಾವರ್ತಿಯನ್ನು ತಾನಾಗಿಯೇ ತಿಳಿಯುತ್ತಾನೆ. ಬೌದ್ಧರು ಅಪೋಹಪದಾರ್ಥವಾದಿಗಳೆನ್ನುವುದು ಪ್ರಸಿದ್ಧವೆಂದು ಹಿ ಶಬ್ದದಿಂದ ಸೂಚಿಸುತ್ತಾರೆ. ಬ್ರಹ್ಮ–ಶೂನ್ಯಗಳಿರಡೂ ನಿರ್ವಿಶೇಷವಾದುದರಿಂದ, ಮಾಯಾವಾದಿಗಳು ಹಾಗೂ ಶೂನ್ಯವಾದಿಗಳು ವಿಶೇಷವನ್ನು ಪ್ರತಿಜ್ಞೆ ಮಾಡಲಿಕ್ಕೆ ಶಕ್ಯವಾಗುವುದೇ ಇಲ್ಲ.

ಹಾಗಾದರೆ ಮಾಯಾವಾದಿಗಳು ವೇದಕ್ಕೆ ಪ್ರಾಮಾಣ್ಯವನ್ನೂ ನಿತ್ಯತ್ವವನ್ನೂ ಅಂಗೀಕರಿಸಿ ವೇದವಾಕ್ಯ ನಿರ್ವಾಹವನ್ನು ಮಾಡಿರುವರು. ಆದರೆ ಶೂನ್ಯವಾದಿಗಳು ವೇದಕ್ಕೆ ಪ್ರಮಾಣತ್ವವನ್ನೇ ಅಂಗೀಕರಿಸಿಲ್ಲ. ಆದ್ದರಿಂದ ವ್ಯಾವರ್ತಮಾತ್ರ ಭೇದಸ್ತು ಎನ್ನುವುದು ಹೇಗೆಂದರೆ –

ಪ್ರಾಮಾಣ್ಯಾದಿ ಚ ವೇದಸ್ಯ ಫಲತಃ ಸಮಮೇವ ಹಿ ।

ಅತತ್ವಾವೇದಕಂ ಯಸ್ಮಾತ್ಪ್ರಮಾಣಂ ತೇನ ಕಥ್ಯತೇ ।। ೪೯ ।।

ಅತತ್ವಾವೇದಕತ್ವಂ ಯದಪ್ರಾಮಾಣ್ಯಂ ಸತಾಂ ಮತಮ್ ।

ವೇದಕ್ಕೆ ಪ್ರಾಮಾಣ್ಯ ಮೊದಲಾದುದಕ್ಕೆ ಶಬ್ದಮಾತ್ರದಿಂದ ಭೇದವಷ್ಟೆ. ಅರ್ಥದಿಂದ ಇಬ್ಬರಿಗೂ ಸಾಮ್ಯವೇ. ಆದ್ದರಿಂದ ವಾಕ್ಯಾರ್ಥನಿರ್ವಾಹವೂ ಸಮವೇ ಎಂದು ಹೇಳಿದ್ದು ಉಚಿತವೇ ಆಗಿದೆ. ಮಾಯಾವಾದಿಯು ವೇದವಾಕ್ಯಕ್ಕೆ ಪ್ರಾಮಾಣ್ಯವನ್ನು ಹೇಳುವುದು ಕೇವಲ ಕಪಟವೇ. ಪ್ರಮೇಯದಿಂದ ಶೂನ್ಯವಾದಿಗೆ ಸಮಾನವೇ. ಫಲತಃ ಸಾಮ್ಯವು ಹೇಗೆಂದರೆ – ವೇದವು ಅಯಥಾರ್ಥವನ್ನು ತಿಳಿಸಿ ಕೊಡತಕ್ಕ (ಅತತ್ವಾವೇದಕ) ಪ್ರಮಾಣವೆಂದು ಮಾಯಾವಾದಿಯು ಹೇಳುತ್ತಾನೆ. ಆದರೆ ಅತತ್ವಾವೇದಕತ್ವವು ಅಪ್ರಮಾಣವೆಂದು ವಿದ್ವಾಂಸರ ಮತವು.

ಹಾಗಾದರೆ ಅತತ್ವಾವೇದಕವಾಗಿದ್ದರೂ ಯಾವುದರ ವಿಷಯವು ಬ್ರಹ್ಮಜ್ಞಾನದ ದೆಶೆಯಿಂದ ಮೊದಲೇ ಬಾಧಿಸಲ್ಪಡುವುದೋ ಅದು ಅಪ್ರಮಾಣವು. ಯಾವುದರ ವಿಷಯವು ಬ್ರಹ್ಮಜ್ಞಾನದಿಂದಲೇ ಬಾಧ್ಯವಾಗುವುದೋ ಅದು ಪ್ರಮಾಣವು. ಹೀಗೆ ವ್ಯವಸ್ಥೆಯು. ವೇದವಿಷಯವಾದರೂ ಬ್ರಹ್ಮಜ್ಞಾನದಿಂದಲೇ ಬಾಧಿಸಲ್ಪಡುತ್ತದೆ. ಆದ್ದರಿಂದ ಅದಕ್ಕೆ ಪ್ರಾಮಾಣ್ಯವು ಎನ್ನುವ ಅಭಿಪ್ರಾಯದಿಂದ ಆಶಂಕಿಸುತ್ತಾರೆ –

ದೀರ್ಘಭ್ರಾಂತಿಕರೀ ಚೇತ್ಸ್ಯಾದತತ್ವಾವೇದಕಪ್ರಮಾ ।। ೫೦ ।।

ರಜ್ಜು ಸರ್ಪಾದಿವಿಜ್ಞಾನಾದವ್ಯಾಧಿಕ್ಯಾದಮಾನತಾ ।

ಸ್ಯಾದಾಗಮಸ್ಯಾನಿವರ್ತ್ಯಮಹಾಮೋಹಪ್ರದತ್ವತಃ ।। ೫೧ ।।

ತಲನೈರ್ಮ್ಯಾದಿವಿಜ್ಞಾನಮಾಕಾಶೇ ಮಾನತಾಂ ವ್ರಜೇತ್ ।

ಛತ್ರಾಕಾರತ್ವವಿಜ್ಞಾನಂ ಚಂದ್ರಪ್ರಾದೇಶತಾ ಮತಿಃ ।। ೫೨ ।।

ದೀರ್ಘಕಾಲ ಭ್ರಾಂತಿಗೆ ಕಾರಣವಾದುದು ಅತತ್ವಾವೇದಕ ಪ್ರಮಾಣವು ಎಂದು ಮತವಾಗಿದ್ದರೆ, ಅದು ಲೋಕಾನುಭವದಿಂದ ಹೇಳಿದ್ದೋ ಅಥವಾ ಸಂಕೇತ ಮಾತ್ರದಿಂದಲೋ ಎಂದು ವಿಕಲ್ಪ ಮಾಡಿ, ಮೊದಲನೆಯ ಕಲ್ಪದಲ್ಲಿ ದೋಷವನ್ನು ಹೇಳುತ್ತಾರೆ – ಹಗ್ಗ ಹಾವು ಇತ್ಯಾದಿ ಭ್ರಾಂತಿವಿಷಯಕ ಜ್ಞಾನಕ್ಕಿಂತಲೂ ಅಧಿಕವೂ, ಅಲ್ಪಕಾಲದಲ್ಲಿ ಹೋಗದಿರುವುದೂ ಆದ ಮಹಾ ಭ್ರಾಂತಿಯನ್ನು ನೀಡುವುದರಿಂದ ವೇದಕ್ಕೆ ಅಪ್ರಮಾಣ್ಯವು ಬರುವುದು. ಎರಡನೆಯ ಕಲ್ಪದಲ್ಲಿ ಅತಿಪ್ರಸಂಗವನ್ನು ಹೇಳುತ್ತಾರೆ – ಇಂದ್ರನೀಲಮಣಿಯ ನೈಲ್ಯದಂತೆ ಇರತಕ್ಕ ನೈಲ್ಯಾದಿ ಜ್ಞಾನವೂ, ಛತ್ರಾಕಾರತ್ವ ಜ್ಞಾನವೂ ಆಕಾಶದಲ್ಲಿ ಪ್ರಾಮಾಣ್ಯವನ್ನು ಹೊಂದುವುದು. ಚಂದ್ರನು ಪ್ರಾದೇಶಪರಿಮಿತನು ಎಂಬ ತಿಳಿವಳಿಕೆಯೂ ಮಾನ್ಯತೆಯನ್ನು ಹೊಂದುವುದು.

ಹಾಗಾದರೆ ಮಾಯಾವಾದಿಗಳು ಸಮಸ್ತವೇದವನ್ನೂ ಅತತ್ವಾವೇದಕ ಅಥವಾ ಅಪ್ರಮಾಣವೆಂದು ಹೇಳುವುದಿಲ್ಲ. ತತ್ವಮಸಿ ಇತ್ಯಾದಿ ಮಹಾವಾಕ್ಯಕ್ಕೂ ಯತ್ತದ ದ್ರೇಶ್ಯಮಗ್ರಾಹ್ಯಂ ಸತ್ಯ ಜ್ಞಾನಂ ಇತ್ಯಾದಿ ಅವಾಂತರವಾಕ್ಯಕ್ಕೂ ತತ್ವಾವೇದಕತ್ವವನ್ನು ಹೇಳುತ್ತಾರೆ. ಶೂನ್ಯವಾದಿಯು ಸಮಸ್ತ ವೇದಕ್ಕೂ ಅಪ್ರಾಮಾಣ್ಯವನ್ನು ಹೇಳುತ್ತಾನೆ. ಆದುದರಿಂದ ಸಾಮ್ಯವು ಹೇಗೆ ಎಂದರೆ –

ನಿರ್ಭೇದತ್ವಂ ತು ಶೂನ್ಯಸ್ಯ ತೇನಾಪ್ಯಂಗೀಕೃತಂ ಸದಾ ।

ಸತ್ವಾಸತ್ವಾದಿಧರ್ಮಾಣಾಮಭಾವ ಉಭಯೋರ್ಮತಃ ॥ ೫೩ ॥

ಶೂನ್ಯತತ್ವಕ್ಕೆ ಭೇದಾಭಾವವಾದರೂ ಶೂನ್ಯವಾದಿಯಿಂದಲೂ ಕೂಡ ಯಾವಾಗಲೂ ಅಂಗೀಕರಿಸಲ್ಪಟ್ಟಿದೆ. ತತ್ವಕ್ಕೆ ಸತ್ವ–ಅಸತ್ವ ಮೊದಲಾದ ಧರ್ಮಗಳ ಅಭಾವವು ಮಾಯಾವಾದಿ ಹಾಗೂ ಶೂನ್ಯವಾದಿಗಳಿಬ್ಬರಿಗೂ ಸಮ್ಮತವೇ ಆಗಿದೆ.

ಅಸತ್ವವೇ ಶೂನ್ಯವು. ಅದಕ್ಕೆ ಸತ್ವವು ಹೇಗೆಂದರೆ –

ನ ಹಿ ಸತ್ಪ್ರತಿಯೋಗಿತ್ವಂ ಶೂನ್ಯತ್ವಂ ತೇನ ಚೇಷ್ಯತೇ ।

ನ ಚ ದುಃಖವಿರೋಧಿತ್ವಾದನ್ಯಾ ಹ್ಯಾನಂದತೇಷ್ಯತೇ ॥ ೫೪ ॥

ಮಾಯಿನಾ ಶೂನ್ಯಪಕ್ಷೇಽಪಿ ಜ್ಞಾನಂ ಜಾಡ್ಯವಿರೋಧಿ ಚ ।

ಸತ್ತಿಗೆ ವಿರೋಧಿಯಾದ ಅಸತ್ವವು ಶೂನ್ಯತ್ವವೆಂದು ಶೂನ್ಯವಾದಿಯಿಂದಲೂ ಅಂಗೀಕರಿಸಲ್ಪಡುವುದಿಲ್ಲ. ನಿರ್ವಿಶೇಷತ್ವವೆಂಬ ಅಭಿಪ್ರಾಯದಿಂದಲೇ ಶೂನ್ಯವು ಹೇಳಲ್ಪಡುತ್ತದೆ ಹೊರತು ಅಸತ್ವವೆಂಬ ಅಭಿಪ್ರಾಯದಿಂದಲ್ಲ. ಏಕೆಂದರೆ ಅವರು ಶೂನ್ಯವನ್ನು ತತ್ವವೆಂದು ಅಂಗೀಕರಿಸಿದ್ದಾರೆ. ಮಾಯಾವಾದಿಯು ಹೇಳುವಂತಹ ಆನಂದತ್ವವನ್ನು ಶೂನ್ಯವಾದಿಯೂ ಅಂಗೀಕರಿಸುತ್ತಾನೆ. ಮಾಯಾವಾದಿಯಿಂದ ಅಂಗೀಕೃತವಾಗಿರುವ ಪ್ರಕಾರ ದುಃಖವಿರೋಧಿತ್ವವೇ ಆನಂದತ್ವವು, ಅದಕ್ಕಿಂತ ಇತರವಾದ ಧರ್ಮರೂಪವಾದ ಆನಂದತ್ವವು ಯಾವುದೂ ಇಲ್ಲ. ಶೂನ್ಯವಾದಿಯ

ಪ್ರಕಾರವೂ ಆನಂದತ್ವವು ದುಃಖವಿರೋಧಿತ್ವ ರೂಪವಾದುದು. ಹೀಗೆ ಸಾಮ್ಯವು. ಜ್ಞಾನವು ಜಾಡ್ಯಕ್ಕೆ ವಿರೋಧಿಯಾದುದು ಎಂಬುದಾಗಿಯೇ ಮಾಯಾವಾದಿಯಿಂದ ಹೇಳಲ್ಪಡುತ್ತದೆ. ಶೂನ್ಯವಾದಿಯೂ ಹೀಗೆಯೇ ಹೇಳುತ್ತಾನೆ.

ಮಾಯಾವಾದಿಯು ಬ್ರಹ್ಮನಿಗೆ ನಿರ್ವಿಶೇಷತ್ವಾದಿಗಳನ್ನು ಅಂಗೀಕರಿಸುವನು. ಶೂನ್ಯವಾದಿಯಾದರೂ ಶೂನ್ಯಕ್ಕೆ ನಿರ್ವಿಶೇಷತ್ವಾದಿಗಳನ್ನು ಅಂಗೀಕರಿಸುವನು. ಆದ್ದರಿಂದ ಸಾಮ್ಯವು ಹೇಗೆಂದರೆ –

ಧರ್ಮಾಃ ಕೇಽಪಿ ನ ಸಂತ್ಯೇವ ಕೋ ವಿಶೇಷಸ್ತತಸ್ತಯೋಃ ॥ ೫೫ ॥

ಮಾಯಾವಾದಿಯ ಬ್ರಹ್ಮನಿಗೂ, ಶೂನ್ಯವಾದಿಯ ಶೂನ್ಯಕ್ಕೂ ಯಾವ ಧರ್ಮಗಳೂ ಇಲ್ಲವೇ ಇಲ್ಲ. ಬ್ರಹ್ಮ ಶೂನ್ಯಗಳಿಗೆ ವ್ಯಾವರ್ತಕ ಧರ್ಮಾಭಾವದ ಪ್ರಯುಕ್ತ ಅವುಗಳಿಗೆ ಯಾವ ವಿಶೇಷದಿಂದ ಭೇದವು ಹೇಳಲ್ಪಡುತ್ತದೆ? ಅಂದರೆ ಸಾಮ್ಯವೇ ಎಂದರ್ಥ.

ಹಾಗಾದರೆ ಹಿಂದೆ ಹೇಳಿದ ಅದ್ವೈತತತ್ವವು ಸೂತ್ರಕಾರರ ಸಿದ್ಧಾಂತವೇ ಆಗಿದೆ. ಆದ್ದರಿಂದ ದೂಷಣೆ ಮಾಡಲಿಕ್ಕಾಗಿ ಏಕೆ ಅದನ್ನು ಅನುವಾದಮಾಡಿದ್ದು ಎಂದರೆ –

ಏತಾದೃಶಾನಾಂ ಪಕ್ಷಾಣಾಂ ದೂಷಣಂ ಪ್ರಭುಣಾ ಕೃತಮ್ ।

ಸ್ವಪಕ್ಷಸಾಧನೇನೈವ ನಾಭಾವ ಇತಿ ಚೋಕ್ತಿತಃ ॥ ೫೬ ॥

ಶೂನ್ಯಪಕ್ಷಕ್ಕೆ ಸದೃಶವಾದ ಪಕ್ಷಗಳಿಗೆ ವಿರುದ್ಧವಾದ ಸ್ವಪಕ್ಷವನ್ನು ಸಾಧನೆ ಮಾಡುವುದರಿಂದಲೇ ಆ ಪಕ್ಷಗಳಿಗೆ ದೂಷಣವು ಸಮರ್ಥರಾದ ವೇದವ್ಯಾಸರಿಂದ ಮಾಡಲ್ಪಟ್ಟಿತು. ಅಭಿಪ್ರಾಯವೇನೆಂದರೆ – ಅದ್ವೈತವು ಸೂತ್ರಕಾರರ ಸಿದ್ಧಾಂತವಲ್ಲ. ಏಕೆಂದರೆ ಪೃಥಗುಪದೇಶಾತ್ ಇತ್ಯಾದಿ ಸೂತ್ರಗಳಿಂದ ಐಕ್ಯಕ್ಕೆ ವಿರುದ್ಧವಾದ ಭೇದವನ್ನು ಸಾಧಿಸಿದ್ದಾರೆ. ಕೇವಲ ಅರ್ಥತಃ ದೂಷಣವಲ್ಲ, ಮತ್ತೆ ನಾಭಾವ ಉಪಲಬ್ಧೇಃ ಎನ್ನುವ ಉಕ್ತಿಯಿಂದಲೂ ಕೂಡ ದೂಷಣವು ಸೂತ್ರಕಾರರಿಂದ ಮಾಡಲ್ಪಟ್ಟಿದೆ.

ಹೀಗೆ ಏಕಜೀವ ಬಹುಜೀವ ಎಂಬ ಪ್ರಭೇದ ಸಹಿತವಾದ ಶೂನ್ಯವಾದಿಗಳಿಗೆ ಅಭಿಮತವಾದ ಮೋಕ್ಷವನ್ನು ಅನುವಾದ ಮಾಡಿ, ಸಾಧಾರಣವಾದ ದೋಷದಿಂದ ದೂಷಿಸಿದರು. 'ಪ್ರಸ್ತುತ ಪ್ರದೀಪಸ್ಯೈವ ನಿರ್ವಾಣಂ ವಿಮೋಕ್ಷಸ್ಯ ಭಾವಿನಃ' ಎಂದು ಆತ್ಮವಿನಾಶ ರೂಪವಾದ ಯಾವ ಮೋಕ್ಷವು ಶೂನ್ಯವಾದಿಯಿಂದ ಹೇಳಲ್ಪಟ್ಟಿದೋ ಅದನ್ನು ದೂಷಿಸುತ್ತಾರೆ –

ಆತ್ಮಾಭಾವೇ ಪುಮರ್ಥಃ ಕ ಇಷ್ಟಸ್ಯಾತ್ಮಾವಧಿರ್ಯತಃ ।

ಆತ್ಮನಿಗೆ ವಿನಾಶವಾದರೆ ಮೋಕ್ಷವು ಯಾವ ಪುರುಷಾರ್ಥವು? ಅಂದರೆ ಪುರುಷಾರ್ಥವೇ ಆಗಲಾರದು. ಏಕೆಂದರೆ ಎಲ್ಲ ಇಷ್ಟಪ್ರಾಪ್ತಿಗೆ ಆತ್ಮನೇ ಅವಧಿಯು ಅಂದರೆ ಆಶ್ರಯನು. ಪುರುಷನು ಆತ್ಮೇತರವಾದ ಕೇವಲ ಇಷ್ಟವಾದ ವಿತ್ತಾದಿಗಳ

ನಾಶವನ್ನೇ ಬಯಸುವುದಿಲ್ಲ. ಹೀಗಿರುವಾಗ ಇಷ್ಟತಮವಾದ ಆತ್ಮನ ನಾಶವನ್ನು ಇಚ್ಛಿಸುತ್ತಾನೆಯೇ?

ಯದಿ ನಾತ್ಮಾವಧಿರ್ಮೋಕ್ಷೋ ಮೋಕ್ಷಃ ಸ್ಯಾದ್ಘಟಶೂನ್ಯತಾ ॥ ೫೭ ॥

ಮೋಕ್ಷವು ಆತ್ಮನಿಗೆ ಅವಧಿಯಾದುದು ಆಗದೇ ಇದ್ದ ಪಕ್ಷದಲ್ಲಿ, ಅಂದರೆ ಆತ್ಮನಿಗೂ ಶೂನ್ಯತ್ವವು ಪ್ರಾಪ್ತವಾದರೆ, ಆಗ ಘಟಶೂನ್ಯತ್ವವೂ ಕೂಡ ಮೋಕ್ಷವು ಎಂದಾಗುವುದು. ಘಟಶೂನ್ಯತ್ವ ರೂಪವಾದ ಮೋಕ್ಷಕ್ಕೆ ವೈರಾಗ್ಯಾದಿ ಸಾಧನೆಗಳ ಅವಶ್ಯಕತೆಯಿಲ್ಲ. ಹೀಗೆ ಅತಿಪ್ರಸಂಗವು.

ಹಾಗಾದರೆ ಈ ಅತಿಪ್ರಸಂಗವು ಯಾವುದರಿಂದ ಎಂದು ನಾವು ಕೇಳುತ್ತೇವೆ. ವಿಶೇಷಯಿಲ್ಲದಿರುವುದರಿಂದ ಎಂದು ಹೇಳಕೂಡದು. ಏಕೆಂದರೆ ಆತ್ಮಶೂನ್ಯತ್ವ, ಘಟಶೂನ್ಯತ್ವ ಎಂಬುದಾಗಿ ನೀವು ವಿಶೇಷವನ್ನು ಹೇಳಿದ್ದೀರಿ ಎಂದರೆ –

ಕಲ್ಪಿತತ್ವಾದ್ವಿಶೇಷಾಣಾಂ ಮಾಯಿನೋಽಪಿ ಸಮಂ ಹಿ ತತ್ ।

ಭಾವಾರ್ಥಪ್ರತಿಯೋಗಿತ್ವಂ ಭಾವತ್ವಂ ವಾ ನ ತತ್ವತಃ ಯಸ್ಯ ಎಂದು ಹೇಳಿರುವ ಪ್ರಯುಕ್ತ, ಶೂನ್ಯತಾ ಶಬ್ದದಿಂದ ಅಭಾವವು ಹೇಳಲ್ಪಡುವುದಿಲ್ಲ. ಮತ್ತೆ ನಷ್ಟವಾದ ಆತ್ಮವೆಂದೂ, ನಷ್ಟವಾದ ಘಟವೆಂದೂ ಹೇಳಲ್ಪಡುತ್ತದೆ. ಅವುಗಳು ಅಪ್ರಾಮಾಣಿಕವು. ಅಂತಹವುಗಳಿಗೆ ಪ್ರಾಮಾಣಿಕವಾದ ವಿಶೇಷಗಳು ಇರುವುದಿಲ್ಲ. ಆದಪ್ರಯುಕ್ತ ಆತ್ಮಶೂನ್ಯತ್ವ, ಘಟಶೂನ್ಯತ್ವ ಎನ್ನುವುದು ಕೇವಲ ವ್ಯವಹಾರಕ್ಕಾಗಿ ಕಲ್ಪಿತವಾದ ವಿಶೇಷಗಳು ಎಂದು ಅಂಗೀಕರಿಸಬೇಕು. ಆತ್ಮಾಭಾವ ಇತ್ಯಾದಿ ಉಕ್ತವಾದುದೆಲ್ಲವೂ ಮಾಯಾವಾದಿಗೂ ಸಮಾನವೇ.

ಹೀಗೆ ಆತ್ಮಶೂನ್ಯತ್ವಕ್ಕೆ ವಿಶೇಷವು ದೃಷ್ಟವಾಗಿದ್ದರೂ ಯಾವುದೋ ಒಂದು ಅಭಿಪ್ರಾಯದಿಂದ ನಿರ್ವಿಶೇಷತ್ವವು ಹೇಳಲ್ಪಡುತ್ತದೆ ಎಂದರೆ –

ದೃಶ್ಯಮಾನೇ ವಿಶೇಷೇಽಪಿ ಯದಿ ಚೇದವಿಶೇಷತಾ ॥ ೫೮ ॥

ಘಟಾಭಾವೇಽವಿಶೇಷಃ ಸ್ಯಾತ್ಪಾಶ್ಚಾತ್ಯಶ್ಚೇದನಾಗತಃ ।

ಮೋಕ್ಷತ್ವರೂಪದಿಂದ ತಿಳಿಯಲ್ಪಡುವ ಶೂನ್ಯಭಾವಕ್ಕೆ ವಿಶೇಷವು ಕಂಡರೂ ವಿಶೇಷಾಭಾವವು ಇದೆ ಎಂದು ಹೇಳಿದರೆ ಘಟಾಭಾವದಲ್ಲಿಯೂ ನಿರ್ವಿಶೇಷತ್ವವು ಬರುವುದು. ಆತ್ಮಶೂನ್ಯಭಾವವು ವಿಶೇಷರಹಿತವು ಎಂದಾದರೆ ಅಪ್ರಾಪ್ತವಾದುದು ಆಗುವುದು.

ಶೂನ್ಯವಾದಿ ಹಾಗೂ ಮಾಯಾವಾದಿಗಳಿಬ್ಬರಿಂದಲೂ ಪ್ರತಿಪಾದಿಸಲ್ಪಟ್ಟ ಆತ್ಮ ವಿನಾಶ ಸ್ವರೂಪವಾದ ಮೋಕ್ಷದ ವಿಷಯದಲ್ಲಿ ಯಾವ ಪ್ರಮಾಣವೂ ಇಲ್ಲ. ಹೇಗೆಂದರೆ ಆತ್ಮವಿನಾಶವು ಪ್ರತ್ಯಕ್ಷಕ್ಕೆ ಗೋಚರವಲ್ಲ. ವೇದವನ್ನು ಪ್ರಮಾಣವೆಂದು ಶೂನ್ಯವಾದಿಗಳು ಅಂಗೀಕರಿಸಿಲ್ಲ. ಅವರು ಹೇಳುವ ಆಗಮವು ಪ್ರಮಾಣವೆಂದು

ನಾವು ಒಪ್ಪುವುದಿಲ್ಲ. ಆದ್ದರಿಂದ ಆತ್ಮಶೂನ್ಯತ್ವವು ಪುರುಷಾರ್ಥವು ದುಃಖ ನಿವೃತ್ತಿಗೆ ಉಪಯುಕ್ತವಾದ್ದರಿಂದ, ಶರೀರಾದಿಗಳ ಶೂನ್ಯತ್ವದಂತೆ ಎಂಬ ಅನುಮಾನವನ್ನು ಹೇಳಬೇಕು. ಸತ್ಪ್ರತಿಪಕ್ಷತ್ವ ಕಾರಣದಿಂದ ಅದು ಅನುಮಾನವೇ ಆಗುವುದಿಲ್ಲ ಎಂದು ಹೇಳುತ್ತಾರೆ –

ನ ಮೋಕ್ಷೋ ವಿಮತೋ ಯಸ್ಮಾದದೇಹೋ ಘಟಶೂನ್ಯತಾ ।। ೫೯ ।।

ಯಥೇತ್ಯುಕ್ತೇ ವದೇತ್ಕಿಂ ಸ ಯೋಽನುಮಾಮಾತ್ರಮಾನಕಃ ।

ಶೂನ್ಯಭಾವ ಅಥವಾ ಬ್ರಹ್ಮಭಾವವು ಮೋಕ್ಷವಲ್ಲ ಎಂಬುದು ಪ್ರತಿಜ್ಞೆ. ದೇಹಾಭಾವತ್ವ ಎಂಬುದು ಹೇತು. ಘಟಾಭಾವ ಎಂಬುದು ದೃಷ್ಟಾಂತ. ಹೀಗೆ ಪ್ರತಿಪಕ್ಷಾನುಮಾನವನ್ನು ಹೇಳಿದರೆ, ಮೋಕ್ಷದ ವಿಷಯದಲ್ಲಿ ಅನುಮಾನವನ್ನು ಮಾತ್ರ ಪ್ರಮಾಣವೆಂದು ಅಂಗೀಕರಿಸುವ ಶೂನ್ಯವಾದಿಯು ಏನೆಂದು ಹೇಳುವನು?

ಈ ವಿಷಯದಲ್ಲಿ ಮಾಯಾವಾದಿಯು ಪ್ರತ್ಯನುಮಾನವು ಪ್ರಮಾಣವಲ್ಲ. ಏಕೆಂದರೆ ವಿದೇಹಾವಸ್ಥೈವ ಮೋಕ್ಷಃ ಎನ್ನುವ ಶ್ರುತಿಯಿಂದ ಇದು ಬಾಧಿತವಾಗಿದೆ ಎಂದು ಹೇಳುತ್ತಾನೆ. ಬ್ರಹ್ಮಭಾವ ಆವಿರ್ಭಾವವೇ ಮೋಕ್ಷ ಎಂದು ಶ್ರುತಿಯಿಂದ ತಿಳಿದುಬರುವುದರಿಂದ, ಬ್ರಹ್ಮಭಾವವು ಮೋಕ್ಷವಲ್ಲ ಎಂಬ ಅನುಮಾನದಿಂದ ಪ್ರಯೋಜನವಿಲ್ಲ ಎಂದರೆ –

ನ ಚ ಮಾಯೀ ವದೇದತ್ರ ಪೂರ್ವೋಕ್ತೇನೈವ ವರ್ತ್ಮನಾ ।। ೬೦ ।।

ಅಮಾನತ್ವಾತ್ ಶ್ರುತೇಸ್ತಸ್ಯ ನ ಚಾದೇಹತ್ವವಾದಿನೀ ।

ಶ್ರುತಿಃ ಕಾಚಿದದೇಹತ್ವಮಪ್ರಾಕೃತಶರೀರತಾ ।। ೬೧ ।।

ಈ ಅನುಮಾನದ ವಿಷಯದಲ್ಲಿ ಮಾಯಾವಾದಿಯು ಶ್ರುತಿಯನ್ನು ಆಶ್ರಯಿಸಿ ದೂಷಣವನ್ನು ಹೇಳಲಾರನು. ಹಾಗೂ ತನಗೆ ಅಭಿಮತವಾದ ಮೋಕ್ಷದಲ್ಲಿ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಲಾರನು. ಏಕೆಂದರೆ ಹಿಂದೆ ಹೇಳಿದ ಪ್ರಕಾರದಿಂದಲೇ ಮಾಯಾವಾದಿಯ ಮತದಲ್ಲಿ ಅತತ್ವಾವೇದಕವಾದ ಶ್ರುತಿಗೆ ಪ್ರಾಮಾಣ್ಯವಿಲ್ಲ. ಮತ್ತೆ ಮುಕ್ತಿಯಲ್ಲಿ ದೇಹಾಭಾವವನ್ನು ಹೇಳತಕ್ಕ ಯಾವ ಶ್ರುತಿಯೂ ಇಲ್ಲವೇ ಇಲ್ಲ. ಶ್ರುತಿಯು ಹೇಳುವ ದೇಹರಾಹಿತ್ಯಕ್ಕೆ ಪ್ರಾಕೃತ ಶರೀರ ರಾಹಿತ್ಯವೆಂದು ಅರ್ಥ, ಹೊರತು ಸರ್ವಥಾ ದೇಹರಾಹಿತ್ಯವೆಂದಲ್ಲ.

ಅಶರೀರತ್ವವನ್ನು ಹೇಳುವ ಶ್ರುತಿಗೆ ಏಕೆ ಅರ್ಥಸಂಕೋಚವು ಮಾಡಲ್ಪಡುತ್ತದೆ ಎಂದರೆ –

ಮೋಕ್ಷೇ ಭೋಗಂ ಯತೋ ಬ್ರೂತೇ ಜಕ್ಷನ್ ಕ್ರೀಡನ್ನಿತಿ ಶ್ರುತಿಃ ।

'ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾಽಜ್ಞಾತಿಭಿರ್ವಾ' ಎಂಬ ಶ್ರುತಿಯು ಮೋಕ್ಷದಲ್ಲಿ ಸ್ತ್ರೀ ಇತ್ಯಾದಿಗಳಿಂದ

ಭೋಗವನ್ನು ಹೇಳುತ್ತದೆ. ದೇಹವಿಲ್ಲದವನಿಗೆ ಭೋಗವು ಕೂಡುವುದಿಲ್ಲ. ಆದ್ದರಿಂದ ದೇಹವಿಲ್ಲ ಎಂದು ಹೇಳುವ ಶ್ರುತಿಗೆ ಪ್ರಾಕೃತ ದೇಹವಿಲ್ಲವೆಂದು ಅರ್ಥಸಂಕೋಚ ಮಾಡಿದ್ದು.

ಪರಕೀಯಾನುಮಾನಕ್ಕೆ ಪ್ರತಿಪಕ್ಷಾಂತರವನ್ನು ಹೇಳುತ್ತಾರೆ –

ನಿರ್ದುಃಖತ್ವಾನ್ನ ತನ್ಮೋಕ್ಷಃ ಪ್ರತಿಪನ್ನಂ ಯಥೇತಿ ಚ ।। ೬೨ ।।

ಅನುಮಾ ದೂಷಣಂ ಕಿಂ ಸ್ಯಾದ್ವಾದಿನೋಃ ಶೂನ್ಯಮಾಯಿನೋಃ ।

ಶೂನ್ಯತ್ವವಾಗಲೀ ಬ್ರಹ್ಮಭಾವವಾಗಲೀ ಮೋಕ್ಷವು ಆಗುವುದಿಲ್ಲ. ದುಃಖಾಭಾವ ನಿಮಿತ್ತದಿಂದ, ಘಟಶೂನ್ಯತ್ವದಂತೆ ಎಂಬ ಅನುಮಾನಕ್ಕೆ ಮಾಯಿಗಳು ಹಾಗೂ ಶೂನ್ಯವಾದಿಗಳ ಮತದಲ್ಲಿ ದೂಷಣವು ಏನು ಆಗುವುದು?

ದುಃಖಂ ದುಃಖಾದಭಿನ್ನತ್ವಾನ್ಮೋಕ್ಷೋಽಪಿ ಸ್ಯಾದಸಂಶಯಮ್ ।। ೬೩ ।।

ಶೂನ್ಯತ್ವ ಅಥವಾ ಬ್ರಹ್ಮತ್ವ ರೂಪವಾದ ಮೋಕ್ಷವೂ ಕೂಡ ದುಃಖದಿಂದ ಅಭಿನ್ನವಾದುದರಿಂದ ನಿಸ್ಸಂಶಯವಾಗಿ ದುಃಖಾತ್ಮವೇ ಆಗುವುದು.

ದುಃಖಪ್ರತಿಯೋಗಿಕ ಭೇದಾಭಾವವು ಯಾವ ಕಾರಣದಿಂದ ಎಂದರೆ –

ಭೇದೇ ಸದ್ದ್ವೈತತೈವ ಸ್ಯಾದಿತ್ಯಾದ್ಯಮಿತದೋಷತಃ ।

ಹೇಯಂ ಮಾಯಾಮತೇನೈವ ಸಹ ಶೂನ್ಯಮತಂ ಬುಧೈಃ ।। ೬೪ ।।

ದುಃಖ ನಿಮಿತ್ತಕವಾಗಿ ಶೂನ್ಯಬ್ರಹ್ಮರಿಗೆ ಭೇದವಿದ್ದರೆ ಸತ್ಯವಾದ ದ್ವೈತತ್ವವೇ ಅಂಗೀಕರಿಸಲ್ಪಡಬೇಕು. ಇದರಿಂದ ಅಪಸಿದ್ಧಾಂತವು. ಇದೇ ಮೊದಲಾದ ಅಪರಿಮಿತ ದೋಷಗಳ ನಿಮಿತ್ತದಿಂದ ಶೂನ್ಯವಾದವು ಮಾಯಾವಾದದೊಂದಿಗೆ ಕೂಡಿಕೊಂಡೇ ಜ್ಞಾನಿಗಳಿಂದ ತ್ಯಾಜ್ಯವು.

ವಿಜ್ಞಾನವಾದಿಗಳಿಗೆ ಅಭಿಮತವಾದ ಮೋಕ್ಷಸ್ವರೂಪವನ್ನು ಕೂಡ ಮೇಲೆ ಹೇಳಿದ ದೋಷಗಳ ಅತಿದೇಶದಿಂದ ನಿರಾಕರಿಸುತ್ತಾರೆ –

ಏವಂ ವಿಜ್ಞಾನವಾದೋಽಪಿ ಜ್ಞಾನಮಾತ್ರವಿಶೇಷತಃ ।

ತಸ್ಯಾಪಿ ಭಂಗುರತ್ವಾದಿವಿಶೇಷಮಪಹಾಯ ಹಿ ।। ೬೫ ।।

ಅದ್ವೈತತಾಮತಂ ಸಾಕ್ಷಾದುಕ್ತದೋಷಸ್ತತೋ ಭವೇತ್ ।

ಮಾಯಾವಾದಿ ಶೂನ್ಯವಾದಿಗಳಿಗೆ ಸಮ್ಮತವಾದ ಮೋಕ್ಷದಂತೆಯೇ ವಿಜ್ಞಾನ ವಾದಿಗಳ ಮೋಕ್ಷವೂ ತ್ಯಾಜ್ಯವು. ಹಾಗಾದರೆ ವಿಜ್ಞಾನವಾದಿಗಳು ಹೇಳುವ ವಿಜ್ಞಾನ ಎಂಬ ತತ್ವಕ್ಕೂ ಕ್ಷಣಿಕತ್ವ ಸ್ವಪ್ರಕಾಶತ್ವಗಳು ಇವೆ. ಪೂರ್ವೋಕ್ತಗಳು ಹೀಗಿಲ್ಲ. ಹೀಗೆ ವೈಷಮ್ಯವಿರುವುದರಿಂದ ಅತಿದೇಶವು ಕೂಡುವುದಿಲ್ಲ ಎಂದರೆ – ಜ್ಞಾನಮಾತ್ರ

ರೂಪವಾದ ವಿಶೇಷವನ್ನೂ ಕ್ಷಣಿಕತ್ವಾದಿ ವಿಶೇಷವನ್ನೂ ಬಿಟ್ಟರೆ ವಿಜ್ಞಾನವಾದವೂ ಕೂಡ ಅದ್ವೈತಮತವೇ ಎಂದು ತಿಳಿಯುತ್ತದೆ. ಆದ್ದರಿಂದ ಅಲ್ಲಿ ಉಕ್ತವಾದ ದೋಷಗಳು ಇಲ್ಲಿಯೂ ಅನ್ವಯವಾಗುತ್ತವೆ.

ಈ ಮತವನ್ನು ನಿರಾಕರಸಲಿಕ್ಕಾಗಿ ಅನುಮಾನಾಂತರವನ್ನೂ ಹೇಳುತ್ತಾರೆ –

ಕಾಲೋ ನ ಕೇವಲಜ್ಞಾನೀ ಕಾಲತ್ವಾತ್ ಪ್ರತಿಪನ್ನವತ್ ।। ೬೬ ।।

ಏತಯಾನುಮಯಾ ರೋಧಾನ್ನ ತಾದೃಙ್ಮೋಕ್ಷರೂಪತಾ ।

ಮೋಕ್ಷಕಾಲವು ಅದ್ವಿತೀಯಜ್ಞಾನವುಳ್ಳದ್ದು ಆಗುವುದಿಲ್ಲ, ಕಾಲವಾದ್ದರಿಂದ ವರ್ತಮಾನ ಕಾಲದಂತೆ. ಈ ಅನುಮಾನದಿಂದ ವಿರೋಧವಿದ್ದುದರಿಂದ ಅಂತಹ ಮೋಕ್ಷಸ್ವರೂಪವು, ಅಂದರೆ ಅದ್ವಿತೀಯಜ್ಞಾನತಾದಾತ್ಮ್ಯ ರೂಪವಾದ ಮೋಕ್ಷವು, ಆಗುವುದಿಲ್ಲ.

ಜ್ಞಾನಾತಿರಿಕ್ತವಾದ ಯಾವ ಪದಾರ್ಥವೂ ಇಲ್ಲವೆಂದು ಹೇಳುವ ಮತದಲ್ಲಿ ಕಾಲವೂ ಇಲ್ಲವೇ ಇಲ್ಲ. ಆದ್ದರಿಂದ ಅನುಮಾನ ಪ್ರವೃತ್ತಿಗೆ ಯಾವುದು ಆಶ್ರಯವು ಎಂದರೆ –

ಯದಿ ಕಾಲೋಽಪಿ ನೇತ್ಯಾಹ ಕದೇತಿ ಪ್ರಶ್ನ ಉತ್ತರಮ್ ।। ೬೭ ।।

ಕಿಂ ವಕ್ಷ್ಯತಿ ಯದಾವಸ್ಥಾಂ ವದೇತ್ಸಾ ಪಕ್ಷತಾಂ ವ್ರಜೇತ್ ।

ವಿಜ್ಞಾನವಾದಿಯು ಕಾಲವೂ ಕೂಡ ಇಲ್ಲವೆಂದು ಹೇಳಿದಾಗ, ಯಾವಾಗ ಕಾಲವು ಇರುವುದಿಲ್ಲ ಎಂದು ಪ್ರಶ್ನೆ ಮಾಡಿದರೆ ಅದಕ್ಕೆ ಅವನು ಉತ್ತರವನ್ನು ಏನೆಂದು ಹೇಳುವನು? ಮೋಕ್ಷಾವಸ್ಥೆಯಲ್ಲಿ ಕಾಲವು ಇರುವುದಿಲ್ಲ ಎಂದು ಅವನು ಹೇಳಿದರೆ, ಆಗ ಮೋಕ್ಷಾವಸ್ಥೆಯು ಪೂರ್ವಾನುಮಾನದಲ್ಲಿ ಪಕ್ಷತ್ವವನ್ನು ಅಂದರೆ ಪಕ್ಷದ ಏಕದೇಶವಾದ ಧರ್ಮಿತ್ವವನ್ನು ಹೊಂದುವುದು. ಮೋಕ್ಷಾವಸ್ಥೆಯು ಕೇವಲ ಜ್ಞಾನವತಿಯಲ್ಲ ಎಂದು ಪ್ರತಿಜ್ಞೆ ಮಾಡಲ್ಪಡುತ್ತದೆ ಎಂದರ್ಥ.

ಹೀಗಾದರೆ ಕಾಲತ್ವಾತ್ ಎಂಬ ಹೇತುವು ಸ್ವರೂಪಸಿದ್ಧವಾಗುವುದು ಎಂದರೆ –

ಅವಸ್ಥಾತ್ವಾದಿತಿ ಹ್ಯೇವ ಹೇತುಃ ಸಾಪಿ ಕದೇತಿ ಚ ।। ೬೮ ।।

ಪೃಷ್ಟೇ ಕಾಲಶ್ಚ ವಕ್ತವ್ಯೋ ನಾಕಾಲತ್ವಂ ತತೋ ಭವೇತ್ ।

ಅವಸ್ಥೆಯನ್ನು ಪಕ್ಷೀಕರಿಸಿದ ಪಕ್ಷದಲ್ಲಿ, ಅವಸ್ಥಾತ್ವಾತ್ ಎನ್ನುವ ಹೇತುವೇ ಹೇಳಲ್ಪಡುತ್ತದೆ, ಕಾಲತ್ವಾತ್ ಎಂಬುದಲ್ಲ. ಆದ್ದರಿಂದ ಹಿಂದೆ ಹೇಳಿದ ದೋಷವಿಲ್ಲ. ಕಾಲಾಭಾವಕ್ಕೆ ಅಧಿಕರಣವಾಗಿ ಹೇಳಲ್ಪಡುವ ಆ ಮೋಕ್ಷಾವಸ್ಥೆಯೂ ಕೂಡ ಯಾವಾಗ ಎಂದು ಯಾರಿಂದಲಾದರೂ ಕೇಳಲ್ಪಟ್ಟರೆ, ಭಾವನಾಪರಿಪಾಕವಾದ ಅನಂತರದ ಕಾಲದಲ್ಲಿ ಎಂದು ಅವಸ್ಥಾಕ್ಕೆ ಅಧಿಕರಣವಾಗಿ ಕಾಲವನ್ನೇ ಹೇಳಬೇಕು.

ಆದ್ದರಿಂದ. ಕಾಲವು ಸರ್ವಥಾ ಅಪರಿಹಾರ್ಯವಾದ ಪ್ರಯುಕ್ತ, ಕಾಲಾಭಾವವು ಉಂಟಾಗುವುದಿಲ್ಲ.

ನ ಕಾಲ ಇತಿ ಸಾಮಾನ್ಯನಿಷೇಧೇ ಕಾಲಗಪ್ರಮಾ ।। ೬೯ ।।

ನಿರುಣದ್ಧಿ ಸಮಶ್ಚಾಯಂ ತ್ರಯಾಣಾಮುಕ್ತವಾದಿನಾಮ್ ।

ಕಾಲವಿಲ್ಲ ಎಂದು ಕಾಲಕ್ಕೆ ಸಾಮಾನ್ಯತಃ ನಿಷೇಧವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಕಾಲವನ್ನು ಗ್ರಹಿಸತಕ್ಕ ಸಾಕ್ಷಿಯು ಆ ನಿಷೇಧವನ್ನು ತಡೆಯುತ್ತದೆ. ಈ ಸಾಕ್ಷಿವಿರೋಧವು ಕೇವಲ ವಿಜ್ಞಾನವಾದಿಗೆ ಮಾತ್ರವಲ್ಲ, ಮತ್ತೆ ಮೂವರಿಗೂ ಅಂದರೆ ವಿಜ್ಞಾನವಾದಿಗಳು, ಮಾಯಾವಾದಿಗಳು ಹಾಗೂ ಶೂನ್ಯವಾದಿಗಳಿಗೂ ಸಮಾನವೇ.

ಶೂನ್ಯವಾದಿ ಮಾಯಾವಾದಿಗಳಿಗೆ ಈ ಸಾಕ್ಷಿವಿರೋಧವು ಕೂಡುವುದಿಲ್ಲ. ಏಕೆಂದರೆ ಅವರು ಕಾಲಾಭಾವವನ್ನು ಅಂಗೀಕರಿಸಿಲ್ಲ ಎಂದರೆ –

ಏಕಜೀವತ್ವಪಕ್ಷೇ ತು ಕಾಲಾಭಾವಾದಿಯಂ ಪ್ರಮಾ ।। ೭೦ ।।

ಕುಪಿತಾ ಕಾಲಮಾಧಾಯ ದ್ವೈತಮೇವೋಪಪಾದಯೇತ್ ।

ಮಾಯಾವಾದಿ–ಶೂನ್ಯವಾದಿಗಳಲ್ಲಿ ಬಹುಜೀವವಾದಿಗಳು ಕಾಲವನ್ನು ಒಪ್ಪುತ್ತಾರೆ ಎನ್ನುವುದು ನಿಜವೇ. ಅವರ ವಿಷಯದಲ್ಲಿ ನಾವು ಸಾಕ್ಷಿ ವಿರೋಧವನ್ನು ಹೇಳುವುದಿಲ್ಲ. ಆದರೆ ಅವರಲ್ಲಿ ಒಂದು ವರ್ಗವು ಒಬ್ಬನ ಮುಕ್ತಿಯಿಂದಲೇ ಎಲ್ಲರ ಮುಕ್ತಿಯು, ಒಬ್ಬನು ಮುಕ್ತನಾದಮೇಲೆ ಏನೂ ಉಳಿಯದು ಎಂದು ಹೇಳುತ್ತದೆ. ಏಕಜೀವವಾದಿಗಳು ಎಂದು ಹೇಳಲ್ಪಡುವ ಈ ವರ್ಗದವರು ಮುಕ್ತಿಯಲ್ಲಿ ಕಾಲದ ಅಭಾವವನ್ನು ಅಂಗೀಕರಿಸುತ್ತಾರೆ. ಈ ಮತವು ಸಾಕ್ಷಿಪ್ರಮಾಣಕ್ಕೆ ವಿರುದ್ಧವು. ಈ ಸಾಕ್ಷಿಯು ಕಾಲವನ್ನು ಗ್ರಹಿಸುವುದರಿಂದ ದ್ವೈತವನ್ನೇ ಉಪಪಾದಿಸುವುದು.

ಮೂರು ವಾದಿಗಳ ಮತದಲ್ಲಿಯೂ ಸಾಧಾರಣವಾದ ದೋಷವನ್ನು ಹೇಳತಕ್ಕ ಅನುಮಾನಾಂತರವನ್ನು ಹೇಳುತ್ತಾರೆ –

ವಿಮತಃ ಪ್ರಪಂಚವಾನ್ ಕಾಲಃ ಕಾಲತ್ವಾತ್ಪ್ರತಿಪನ್ನವತ್ ।। ೭೧ ।।

ಇತಿ ಚಾನ್ಯಾನುಮೈಕತ್ವಂ ಜೀವಸ್ಯ ವಿನಿವಾರಯೇತ್ ।

ವಿವಾದ ವಿಷಯವಾದ ಮೋಕ್ಷಕಾಲವು ಆಕಾಶಾದಿ ಪ್ರಪಂಚವುಳ್ಳದ್ದು ಕಾಲತ್ವ ವಿರುವುದರಿಂದ, ವರ್ತಮಾನ ಕಾಲದಂತೆ. ಹೀಗೆ ಅನುಮಾನಾಂತರವೂ ಕೂಡ ಮುಕ್ತನಿಗೆ ಐಕ್ಯವನ್ನು ನಿರಾಕರಿಸುತ್ತದೆ.

ಹಿಂದೆ ಹೇಳಿದ ಅತಿದೇಶದಿಂದ ಇತರ ಅದ್ವೈತಮತಗಳನ್ನು ದೂಷಿಸುತ್ತಾರೆ –

ಕಾಲಶಬ್ದೇಶ್ವರೈಕತ್ವಮತಾನ್ಯಪ್ಯೇವಮೇವ ಹಿ ।। ೭೨ ।।

ನಿರಾಕೃತಾನಿ ತೇಷಾಂ ಚ ಸಮತ್ವಾತ್ಪಕ್ಷದೋಷಯೋಃ

ಕಾಲ ಶಬ್ದ ಈಶ್ವರರಿಗೆ ಐಕ್ಯವನ್ನು ಹೇಳುವ ಮತಗಳೂ ಕೂಡ ಹೀಗೆಯೇ ನಿರಾಕೃತವಾಗಿವೆ. ಹೇಗೆಂದರೆ, ಶೂನ್ಯನಾದಿ ಪ್ರಭೃತಿಗಳಿಗೂ ಇವರಿಗೂ ಪಕ್ಷದಲ್ಲಿ ಸಾಮ್ಯವಿದೆ. ಪರಮೇಷ್ಟನಾದ ಆತ್ಮನ ನಾಶವನ್ನು ಇವರೂ ಒಪ್ಪಿರುವ ಪ್ರಯುಕ್ತ ಮೋಕ್ಷಕ್ಕೆ ಅಪುರುಷಾರ್ಥತ್ವ ಮೊದಲಾದ ದೋಷದಲ್ಲಿಯೂ ಕೂಡ ಸಾಮ್ಯವಿದೆ.

ವೈಭಾಷಿಕ ಸೌತ್ರಾಂತಿಕರಿಗೆ ಅಭಿಮತವಾದ ಮೋಕ್ಷವನ್ನು ನಿರೂಪಿಸುತ್ತಾರೆ –

ಜ್ಞಾನಂ ಸ್ವರಸಭಂಗ್ಯೇವ ನಿತ್ಯಸಂತಾನಮಿಷ್ಯತೇ ।। ೭೩ ।।

ಬೌದ್ಧಾಭ್ಯಾಮಪರಾಭ್ಯಾಂ ತು ..... ।

ಶೂನ್ಯವಾದಿ ವಿಜ್ಞಾನವಾದಿಗಳಿಂದ ಇತರರಾದ ವೈಭಾಷಿಕ ಸೌತ್ರಾಂತಿಕರೆಂಬ ಬೌದ್ಧರಿಂದಲಾದರೂ ಜ್ಞಾನಕ್ಕೆ ಸ್ವಭಾವದಿಂದಲೇ ನಾಶವು, ಜ್ಞಾನಸಂತಾನವಾದರೂ ನಿತ್ಯವು ಎಂದು ಅಂಗೀಕರಿಸಲ್ಪಡುತ್ತದೆ.

ಬೌದ್ಧ ಮತದ ಅಭಿಪ್ರಾಯವು ಹೀಗಿದೆ – ಜ್ಞಾನವೇ ಆತ್ಮನು. ಆ ಜ್ಞಾನವು ಸ್ವಭಾವತಃ ಭಂಗುರವಾದುದು. ಆದ್ದರಿಂದಲೇ ಕ್ಷಣಿಕವು. ಜ್ಞಾನಸಂತಾನವಾದರೂ ನಿತ್ಯವು. ಅದಕ್ಕೆ ಅನಾದಿಯಾದ ಸಂಸ್ಕಾರದಿಂದ ವಿಷಯಸಂಬಂಧ ಉಂಟಾದಾಗ ಉತ್ಪತ್ತಿಯಾಗುವುದೇ ಸಂಸಾರ. ವಿಷಯಸಂಬಂಧವು ಕಳಚಿದಾಗ ಉಂಟಾಗುವ ಶುದ್ಧವಾದ ಜ್ಞಾನವೇ ಮೋಕ್ಷ. ಎರಡು ಪ್ರಕಾರದ ಬೌದ್ಧರಿಗೂ ಇದು ಸಮಾನವು. ಸೌತ್ರಾಂತಿಕರಾದರೂ ಸಂಸಾರದಲ್ಲಿ ಸಾಕಾರತ್ವವನ್ನೂ ಮುಕ್ತಿಯಲ್ಲಿ ನಿರಾಕಾರತ್ವ ರೂಪವಾದ ವಿಶೇಷವನ್ನೂ ಹೇಳುತ್ತಾರೆ.

ಅದನ್ನು ನಿರಾಕರಿಸುತ್ತಾರೆ –

..... ತತ್ರಾಪ್ಯುಕ್ತಾನುಮಾ ರಿಪುಃ ।

ಅದರಲ್ಲಿಯೂ 'ವಿಮತಃ ಕಾಲಃ ಪ್ರಪಂಚವಾನ್ ಕಾಲತ್ವಾದಿದಾನೀಂತನ ಕಾಲವತ್' ಇತ್ಯಾದಿ ಪೂರ್ವೋಕ್ತ ಅನುಮಾನಕ್ಕೆ ಸದೃಶವಾದ 'ವಿಮತಃ ಕಾಲೋ ನ ನಿರ್ವಿಷಯೈತಜ್ಜ್ಞಾನಸಂತತಿಮಾನ್ ಕಾಲತ್ವಾದಿದಾನೀಂತನಕಾಲವತ್' ಎನ್ನುವ ಅನುಮಾನವು ವಿರೋಧಿಯು.

ಅನುಮಾನಾಂತರವನ್ನು ಹೇಳುತ್ತಾರೆ –

ಮೋಕ್ಷೋ ನ ಶುದ್ಧವಿಜ್ಞಾನಸಂತಾನೀ ಕಾಲಗತ್ವತಃ ।। ೭೪ ।।
ಪ್ರತಿಪನ್ನೋ ಯಥೇತ್ಯೇತದನುಮಾನಂ ತದುತ್ತರಮ್ ।

ಮೋಕ್ಷವು ನಿರ್ವಿಷಯಕವಾದ ಚಿತ್ಸಂತಾನ ಸಂಬಂಧಿಯಲ್ಲ. ಕಾಲಸಂಬಂಧಿತ್ವ ವನ್ನು ಹೊಂದಿರುವ ಪ್ರಯುಕ್ತ ವರ್ತಮಾನಕಾಲೀನ ಸಂಸಾರದಂತೆ, ಎಂಬ ಅನುಮಾನವೇ ಈ ಪಕ್ಷಕ್ಕೆ ದೂಷಣವು.

ಈ ಮೋಕ್ಷವು ಅಪ್ರಾಮಾಣಿಕವೂ ಆಗಿದೆ. ಹಿಂದೆ ಹೇಳಿದಂತೆ ಇದಕ್ಕೆ ಪ್ರತ್ಯಕ್ಷ ಆಗಮಗಳ ಪ್ರಮಾಣವಿಲ್ಲ. ಕೇವಲ ಅನುಮಾನವನ್ನೇ ಹೇಳಬೇಕು. ಈ ಮೋಕ್ಷಕ್ಕೆ ಪ್ರಾಮಾಣ್ಯವನ್ನು ಹೇಳುವುದರಲ್ಲಿ ಅನುಮಾನಗಳೂ ಇಲ್ಲ ಎಂದು ಹೇಳುತ್ತಾರೆ –

ಅನುಮಾನಾನಿ ಸರ್ವಾಣಿ ಪ್ರತಿಸಾಧನಯೋಗತಃ ।। ೭೫ ।।

ನಿಷಿದ್ಧಾನ್ಯುಕ್ತಭಂಗ್ಯೈವ ಶ್ರುತಯಾಶ್ಚಾಸ್ಮದುಕ್ತಿಗಾಃ ।

ಎಲ್ಲ ಅನುಮಾನಗಳೂ ಹಿಂದೆ ಹೇಳಿದ ರೀತಿಯಿಂದಲೇ ಪ್ರತಿಪಕ್ಷದ ಸಂಬಂಧ ದಿಂದ ನಿಷೇಧಿಸಲ್ಪಟ್ಟಿವೆ. ಶ್ರುತಿಗಳೂ ಕೂಡ ನಾವು ಹೇಳಿರುವಂತಹ ಮೋಕ್ಷವನ್ನೇ ಪ್ರತಿಪಾದಿಸುತ್ತವೆ.

ಈಗ ಮೋಕ್ಷಸ್ವರೂಪದ ವಿಷಯದಲ್ಲಿ ಸಾಂಖ್ಯನೈಯಾಯಿಕಾದಿಗಳ ಮತವನ್ನು ನಿರಾಕರಿಸುತ್ತಾರೆ –

ಸಾಂಖ್ಯನೈಯಾಯಿಕಾದ್ಯಾಶ್ಚ ಪ್ರಾಹುರ್ಮೋಕ್ಷಂ ಚ ನಿಃಸುಖಮ್ ।। ೭೬ ।।

ಇಚ್ಛಾದ್ವೇಷಪ್ರಯತ್ನಾದೇರಪಿ ಸರ್ವಾತ್ಮನಾ ಲಯಮ್ ।

ತತ್ರಾಹುರ್ನೈತದಪ್ಯತ್ರ ಶೋಭನಂ ಶ್ರುತಯೋ ಯತಃ ।। ೭೭ ।।

ಮಹಾನಂದಂ ಚ ಭೋಗಂ ಚ ನಿಯಮೇನ ವದಂತಿ ಹಿ ।

ಸಾಂಖ್ಯರು, ನೈಯಾಯಿಕರು, ವೈಶೇಷಿಕರೇ ಮೊದಲಾದವರು ಮುಕ್ತಿಯನ್ನು ಸುಖರಹಿತವೆಂಬುದಾಗಿ ಹೇಳುತ್ತಾರೆ. ಹಿಂದಿನವರಂತೆಯೇ ಇವರೂ ಅನುಪಪನ್ನ ಭಾಷಿಗಳೇ ಎಂದು ಚ ಶಬ್ದದಿಂದ ಸೂಚಿಸಿದ್ದಾರೆ. ಅನುಪಪನ್ನ ಭಾಷಿಗಳು ಏಕೆಂದರೆ ಅವರು ಮುಕ್ತಿಯಲ್ಲಿ ಇಚ್ಛೆ ದ್ವೇಷ ಪ್ರಯತ್ನಾದಿಗಳಿಗೆ ಎಲ್ಲ ಪ್ರಕಾರದಿಂದಲೂ ನಾಶವನ್ನು ಹೇಳುತ್ತಾರೆ. ಮುಕ್ತಿಯಲ್ಲಿ ಸುಖರಾಹಿತ್ಯವನ್ನು ಹೇಳುವ ಮತವೂ ಕೂಡ ಶೋಭಿಸುವುದಿಲ್ಲ. ಏಕೆಂದರೆ ಶ್ರುತಿಗಳು ಮುಕ್ತಿಯಲ್ಲಿ ಮಹದಾನಂದವನ್ನೂ ಹಾಗೂ ಅದರ ಅನುಭವವನ್ನೂ ಅವಿರೋಧವಾಗಿ ಹೇಳುತ್ತವೆ. ಹಿ ಎಂಬ ಶಬ್ದದಿಂದ ಈ ಶ್ರುತಿಗಳು ಪ್ರಸಿದ್ಧವಾಗಿವೆ ಎಂದು ಹೇಳುತ್ತಾರೆ.

ಹಾಗಾದರೆ 'ಅಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ' ಎಂದು ಮುಕ್ತನಿಗೆ ದುಃಖದಂತೆ ಸುಖದ ನಾಶವೂ ಕೂಡ ಶ್ರುತವಾಗಿದೆ. ಹಾಗೆಯೇ ನ ಪ್ರೇತ್ಯ ಸಂಜ್ಞಾಸ್ತಿ ಎಂದು ಜ್ಞಾನಾಭಾವವೂ ಕೂಡ ಹೇಳಲ್ಪಟ್ಟಿದೆ. ಆದುದರಿಂದ ಮುಕ್ತನಿಗೆ ಆನಂದಾನುಭವವುಂಟು ಎನ್ನುವುದು ಹೇಗೆ ಕೂಡುತ್ತದೆ ಎಂದರೆ –

ಪ್ರಾಕೃತಪ್ರಿಯಹಾನಿಸ್ತು ಪ್ರಿಯಾಸ್ಪೃಷ್ಟಿರಿತೀರ್ಯತೇ ।। ೭೮ ।।

ಅಪ್ರಿಯಂ ಪ್ರತಿಕೂಲಂ ತದವಿಶೇಷೇಣ ಶಬ್ದಿತಮ್ ।

ಈ ಶ್ರುತಿಯಲ್ಲಿ ಪ್ರಿಯಾಸ್ಪೃಷ್ಟಿ ಎಂಬ ಶಬ್ದದಿಂದ ಪ್ರಾಕೃತವಾದ ಆಂದರೆ

ಅಂತಃಕರಣ ಪರಿಣಾಮರೂಪವಾದ ಸುಖದ ಹಾನಿಯೇ ಪ್ರತಿಪಾದಿಸಲ್ಪಡುತ್ತದೆ. ಸರ್ವಥಾ ಸುಖಾಭಾವವಲ್ಲ. ಹಾಗಾದರೆ ಅಪ್ರಿಯಾಸ್ಪೃಷ್ಟಿಯನ್ನೂ ಹೀಗೆಯೇ ವ್ಯಾಖ್ಯಾನ ಮಾಡಬೇಕು. ಆಗ ಮುಕ್ತಿಯಲ್ಲಿ ದುಃಖಪ್ರಾಪ್ತಿಯೂ ಪ್ರಸಕ್ತವಾಗುವುದು ಎಂದರೆ – ಅಪ್ರಿಯವೆಲ್ಲವೂ (ದುಃಖಾದಿಗಳು) ಮುಮುಕ್ಷುಗಳಿಂದ ಅಪೇಕ್ಷಿತವಲ್ಲ. ಆದಕಾರಣ ಅಪ್ರಿಯವನ್ನು ಪ್ರಾಕೃತತ್ವಾದಿ ವಿಶೇಷವಿಲ್ಲದೆಯೇ ಹೇಳಲ್ಪಟ್ಟಿದೆ. ಅಂದರೆ ಸರ್ವಪ್ರಕಾರದಿಂದಲೂ ಅನಿಷ್ಟನಿವೃತ್ತಿಯೇ ಮೋಕ್ಷವು ಎನ್ನುವುದು ಎಲ್ಲ ವಾದಿಗಳಿಂದಲೂ ಅಂಗೀಕೃತವೇ. ಈ ವಿಷಯದಲ್ಲಿ ವಿವಾದವಿಲ್ಲ. ದುಃಖವು ಯಾವ ಪ್ರಕಾರದ್ದೇ ಆಗಿದ್ದರೂ ಅನಿಷ್ಟವೇ. ಆದಕಾರಣ ದುಃಖವನ್ನು ಪ್ರಾಕೃತ ಅಪ್ರಾಕೃತ ಎಂಬ ವಿಭಾಗದಿಂದ ವ್ಯಾಖ್ಯಾನ ಮಾಡುವುದು ಕೂಡುವುದಿಲ್ಲವೆಂದು ತಾತ್ಪರ್ಯ.

ಅಪ್ರಿಯದಲ್ಲಿ ಪ್ರಾಕೃತಾದಿ ವಿಶೇಷಣವು ಕೂಡುವುದಿಲ್ಲ ಎನ್ನುವುದನ್ನು ಕಾರಣಾಂತರದಿಂದಲೂ ಉಪಪಾದಿಸುತ್ತಾರೆ –

ನಾಸ್ತಿ ಹ್ಯಪ್ರಾಕೃತಂ ದುಃಖಂ ಸತೋ ಜೀವಸ್ಯ ಕುತ್ರಚಿತ್ ॥ ೭೯ ॥

ಅಪ್ರಾಕೃತವಾದ ದುಃಖವು ಇದ್ದಿದ್ದರೆ, ಅದನ್ನು ವ್ಯಾವರ್ತಿಸಲು ಪ್ರಾಕೃತವೆಂಬ ವಿಶೇಷಣವು ಬೇಕಿತ್ತು. ಆದರೆ ಮುಕ್ತಿಯೋಗ್ಯನಾದ ಜೀವನಿಗೆ ಅಪ್ರಾಕೃತವಾದ ದುಃಖವು ಇಲ್ಲವೇ ಇಲ್ಲ. ಅಪ್ರಾಕೃತ ದುಃಖವೆಂಬುದು ಅಪ್ರಾಮಾಣಿಕ. ಯಾವ ಶ್ರುತಿಯಲ್ಲಿಯೂ ಸ್ಮೃತಿಯಲ್ಲಿಯೂ ಹಾಗೆ ಪ್ರತಿಪಾದಿಸಲ್ಪಟ್ಟಿಲ್ಲ.

ಹಾಗಾದರೆ ಅಪ್ರಾಕೃತವಾದ ಸುಖವೂ ಅಪ್ರಮಿತವಾದುದರಿಂದ ಅಲ್ಲಿಯೂ ಪ್ರಾಕೃತತ್ವ ವಿಶೇಷಣದಿಂದ ಕೂಡಿದ ವ್ಯಾಖ್ಯಾನವು ಅಯುಕ್ತವು ಎಂದರೆ –

ಪ್ರಿಯಂ ಸ್ವರೂಪಮೇವಾಸ್ಯ ಬಲಾನಂದಾದಿ ವಾಕ್ಯತಃ ।

'ಬಲಮಾನಂದ ಓಜಶ್ಚ ಸಹೋ ಜ್ಞಾನಮನಾಕುಲಂ। ಸ್ವರೂಪಾಣ್ಯೇವ ಜೀವಸ್ಯ ವ್ಯಜ್ಯಂತೇ ಪರಮಾದ್ವಿಭೋಃ' ಎಂಬ ಶ್ರುತಿವಾಕ್ಯದ ಬಲದಿಂದ ಮುಕ್ತಿಯೋಗ್ಯನಾದ ಜೀವನಿಗೆ ಸುಖವು ಸ್ವರೂಪವೇ (ಅಪ್ರಾಕೃತವೇ) ಎಂದು ತಿಳಿಯಲ್ಪಡುತ್ತದೆ.

ಹಿಂದೆ ಹೇಳಿದ ವಿಷಯವನ್ನು ಸಂಕ್ಷೇಪದಿಂದ ಹೇಳುತ್ತಾರೆ –

ಹೇಯತ್ವಾದಪ್ರಿಯಸ್ಯೈವ ಪ್ರಿಯಹಾನೇರನಿಷ್ಟತಃ ॥ ೮೦ ॥

ನ ಸಮಸ್ತಪ್ರಿಯಾಭಾವೋ ಮೋಕ್ಷೇ ಪ್ರೋಕ್ತೇ ತು ಯುಜ್ಯತೇ ।

ಎಲ್ಲ ರೀತಿಯಿಂದಲೂ ದುಃಖಕ್ಕೆ ಹೇಯತ್ವವೂ, ಸುಖದ ಹಾನಿಗೆ ಅನಿಷ್ಟತ್ವವೂ ಇದ್ದುದರಿಂದಲೇ 'ಅಶರೀರಂ ವಾವ ಸಂತಂ' ಎನ್ನುವ ಶ್ರುತಿಯಲ್ಲಿ ಹೇಳಲ್ಪಟ್ಟ ಮೋಕ್ಷದಲ್ಲಿ ಸಮಸ್ತ ಸುಖಾಭಾವವು ವ್ಯಾಖ್ಯಾನ ಮಾಡಲಿಕ್ಕೆ ಯುಕ್ತವಾಗುವುದಿಲ್ಲ.

ಹಾಗಾದರೆ ಮುಕ್ತಿಯೋಗ್ಯನಾದ ಜೀವನಿಗೂ ಸ್ವರೂಪಭೂತವಾದ ಅಪ್ರಾಕೃತ ದುಃಖವು ಶ್ರುತವಾಗಿದೆ. ಅದು ಹೇಗೆ ಕೂಡುತ್ತದೆ ಎಂದರೆ –

ಅಪ್ರಿಯಸ್ಯ ಸ್ವರೂಪತ್ವಮಸುರೇಷ್ವೇವ ಹಿ ಶ್ರುತಮ್ ।। ೪೧ ।।

ಸ್ವರೂಪಭೂತವಾದ ಅಪ್ರಿಯವು ಅಸುರರಲ್ಲಿಯೇ ಎಂದು ಶ್ರುತಿಸಿದ್ಧವಾಗಿದೆ. ಅಸುರರು ಮೋಕ್ಷಯೋಗ್ಯರಲ್ಲ ಎಂದು ತಾತ್ಪರ್ಯ.

ಆ ಶ್ರುತಿಯನ್ನು ಅರ್ಥತಃ ಪಠಿಸುತ್ತಾರೆ –

ಅಸುರಾ ನೈವಮೇವಂ ಚ ನೈವಂ ಚಾಖಿಲಮಾನುಷಾಃ ।

ಇತ್ಯಾತ್ಮಪ್ರಿಯಹಾನಾಯ ಕೋ ಯತೇತ ಚ ಬುದ್ಧಿಮಾನ್ ।। ೪೨ ।।

'ನಿತ್ಯಾನಂದೋ ನಿತ್ಯಜ್ಞಾನೋ ನಿತ್ಯಬಲಃ ಪರಮಾತ್ಮಾ ನೈವಮಸುರಾ ಏವಮ ನೇವಂ ಚ ಮನುಷ್ಯಾಃ' ಎನ್ನುವ ಶ್ರುತಿಯನ್ನು ಇಲ್ಲಿ ಉದಾಹರಿಸಿದ್ದಾರೆ. ಅಂದರೆ ಪರಮಾತ್ಮನು ಅಥವಾ ಸಜ್ಜೀವನು ನಿತ್ಯವಾದ ಅಂದರೆ ಸ್ವರೂಪಭೂತವಾದ ಆನಂದ, ಜ್ಞಾನ, ಬಲಗಳಿಂದ ಕೂಡಿದವನು. ಅಸುರರು ಇದಕ್ಕೆ ವಿರುದ್ಧವಾದ ಸ್ವಭಾವವುಳ್ಳವರು. ಅಂದರೆ ಕೇವಲ ದುಃಖಸ್ವರೂಪರು. ಆದರೆ ಎಲ್ಲ ಮನುಷ್ಯರೂ ಉಭಯ ಸ್ವಭಾವವುಳ್ಳವರು. ಹೀಗೆ ಶ್ರುತಿಸಿದ್ಧವಿರುವಾಗ, ತನ್ನ ಸ್ವರೂಪಭೂತವಾದ ಸುಖವನ್ನು ಕಳೆದುಕೊಳ್ಳಲು ಬುದ್ಧಿಯುಳ್ಳ ಯಾರು ತಾನೆ ಪ್ರಯತ್ನ ಮಾಡುವರು ? ಅಂದರೆ ಮುಕ್ತಿಯಲ್ಲಿ ಪ್ರಿಯದ ಹಾನಿ ಹಾಗೂ ಅಪ್ರಿಯದ ಪ್ರಾಪ್ತಿಯು ಆಗುವ ಪಕ್ಷದಲ್ಲಿ ಯಾವ ಜ್ಞಾನಿಯೂ ಮುಕ್ತಿಯನ್ನು ಇಚ್ಛಿಸುವುದಿಲ್ಲ ಹಾಗೂ ಅದಕ್ಕಾಗಿ ಪ್ರಯತ್ನವನ್ನೂ ಮಾಡುವುದಿಲ್ಲ ಎಂದು ತಾತ್ಪರ್ಯ.

ಹೀಗೆ ಸುಖಾಸ್ಪೃಷ್ಟಿ ಶ್ರುತಿಯನ್ನು ವ್ಯಾಖ್ಯಾನ ಮಾಡಿ ಜ್ಞಾನಾಭಾವ ಶ್ರುತಿಯನ್ನೂ ವ್ಯಾಖ್ಯಾನ ಮಾಡುತ್ತಾರೆ –

ಸಂಜ್ಞಾ ನಾಸ್ತೀತ್ಯಪಿ ಹ್ಯಸ್ಯ ನಾಮುಕ್ತಜ್ಞೇಯತೇತಿ ಹಿ ।

ಧರ್ಮಾನುಚ್ಛಿತ್ತಿಮೇವಾಸ್ಯ ಯತೋ ವಕ್ಷ್ಯತ್ತರಶ್ರುತಿಃ ।। ೪೩ ।।

'ನ ಪ್ರೇತ್ಯ ಸಂಜ್ಞಾಸ್ತಿ' ಮರಣಾನಂತರದಲ್ಲಿ ಜ್ಞಾನವು ಇಲ್ಲ ಎನ್ನುವ ಶ್ರುತಿಯೂ ಕೂಡ ಮುಕ್ತನಿಗೆ ಅಮುಕ್ತರಿಂದ ಜ್ಞೇಯತ್ವವು ಇಲ್ಲ ಎಂಬುದಾಗಿಯೇ ಹೇಳುತ್ತದೆ. 'ಅಯಮಾತ್ಮಾನುಚ್ಛಿತ್ತಿಧರ್ಮಾ' ಎನ್ನುವ ಮುಂದಿನ ಶ್ರುತಿಯೂ ಮುಕ್ತಾತ್ಮನಿಗೆ ಜ್ಞಾನಾದಿ ಧರ್ಮಗಳಿಗೆ ನಾಶವಿಲ್ಲವೆಂದೇ ಹೇಳುತ್ತದೆ. ಆದ್ದರಿಂದಲೇ ಮುಕ್ತನಿಗೆ ಜ್ಞಾನಾದಿ ಧರ್ಮಗಳಿಗೆ ವಿನಾಶವನ್ನು ನಿರಾಕರಿಸಲಾಗಿದೆ.

ಹಾಗಾದರೆ ಅನುಚ್ಛಿತ್ತಿಧರ್ಮಾ ಎನ್ನುವುದು ಸಂಖ್ಯಾದಿ ಧರ್ಮಗಳಿಗೆ ನಾಶವು ಇಲ್ಲವೆಂದು ಹೇಳುತ್ತದೆ. ಅಥವಾ ಯಾವುದಕ್ಕೆ ನಾಶವಿಲ್ಲವೋ ಅದು ಅನುಚ್ಛಿತ್ತಿ

ಧರ್ಮ ಎಂದೂ ಹೇಳಲಿಕ್ಕೆ ಬರುತ್ತದೆ. ಆದ್ದರಿಂದ ಜ್ಞಾನಾದಿ ಧರ್ಮಗಳಿಗೆ ನಾಶವು ಇಲ್ಲವೆನ್ನುವುದಕ್ಕೆ ಈ ಶ್ರುತಿಯು ಹೇಗೆ ನಿಯಾಮಕವು ಎಂಬ ಆಶಂಕೆಯನ್ನು ನಿರಾಕರಿಸಲಿಕ್ಕಾಗಿ ಈ ವಾಕ್ಯವನ್ನು ಮೊದಲಿನಿಂದಲೇ ವ್ಯಾಖ್ಯಾನ ಮಾಡುತ್ತಾರೆ –

ಆಶಂಕ್ಯಾಸ್ಯ ಜ್ಞಾನಹಾನಿಂ ಮೈತ್ರೇಯ್ಯಾ ಮೋಹಮಾಹ ಮಾಮ್ ।

ಭವಾನಿತ್ಯುಕ್ತವತ್ಯಾ ಹಿ ನಾಹಂ ಮೋಹಂ ವದಾಮಿ ತೇ ।। ೪೪ ।।

ಇತ್ಯುಕ್ತ್ವಾ ಯಾಜ್ಞವಲ್ಕ್ಯೋ ಹಿ ಸ್ವರೂಪಾನಾಶಮೂಚಿವಾನ್ ।

ಸಂಜ್ಞಾ ನಾಸ್ತಿ ಎಂಬ ವಾಕ್ಯದಿಂದ ಮುಕ್ತನಿಗೆ ಜ್ಞಾನಹಾನಿಯು ಹೇಳಲ್ಪಡುತ್ತದೆ ಎಂದು ಆಶಂಕಿಸಿಕೊಂಡು ಮೈತ್ರೇಯಿಯು ಯಾಜ್ಞ್ಯವಲ್ಕ್ಯರನ್ನು 'ಸ್ವಾಮಿ ನೀವು ನನ್ನನ್ನು ಕುರಿತು ಮುಕ್ತನು ತಿಳಿಯುವುದಿಲ್ಲವೆಂದು ಏನು ಹೇಳಿರುವಿರೋ ಅದು ಮೋಹಕವಲ್ಲವೇ' ಎಂದು ಕೇಳಿದಾಗ, 'ನ ವಾ ಅರೇ ಅಹಂ ಮೋಹಂ ಬ್ರವೀಮಿ' (ನನಗೆ ಪರಮಪ್ರಿಯಳಾದ ನಿನಗೆ ಮೋಹಕವಾದುದನ್ನು ಹೇಳುವುದಿಲ್ಲ) ಎಂದು ಪ್ರತಿಜ್ಞೆ ಮಾಡಿ, 'ಅವಿನಾಶೀ ವಾ ಅರೇ ಅಯಮಾತ್ಮಾ' ಎಂಬ ವಾಕ್ಯದಿಂದ ಆತ್ಮಸ್ವರೂಪಕ್ಕೆ ನಾಶವಿಲ್ಲವೆಂದು ಯಾಜ್ಞವಲ್ಕ್ಯರು ಹೇಳಿರುತ್ತಾರೆ. ಈ ಅರ್ಥವು ಶ್ರುತಿಯಲ್ಲಿ ಸ್ಪಷ್ಟವಾಗಿಯೇ ಇದೆ ಎಂಬುದನ್ನು ಹಿ ಶಬ್ದದಿಂದ ಸೂಚಿಸಿದ್ದಾರೆ.

ಜ್ಞಾನವಿನಾಶವನ್ನು ಹೇಳುವ ವಾಕ್ಯವು ಮೋಹಕವೆಂದು ಆಕ್ಷೇಪಿಸಿದರೆ, ಅದಕ್ಕೆ ಉತ್ತರವಾಗಿ ಸ್ವರೂಪಕ್ಕೆ ನಾಶವಿಲ್ಲವೆಂಬ ವಚನವು ಅಸಂಗತವಲ್ಲವೇ ಎಂದರೆ –

ಜ್ಞಾನರೂಪಸ್ಯ ವಿಜ್ಞಾನನಾಶಸ್ತನ್ನಾಶ ಏವ ಯತ್ ।। ೪೫ ।।

ಇತಿ ಶೂನ್ಯಮತೋಚ್ಛಿತ್ಯೈ ಪುನರಾನಂದಪೂರ್ವಕಾನ್ ।

ಧರ್ಮಾನಾಹಾಪ್ಯನುಚ್ಛಿನ್ನಾಂಸ್ತಾರ್ಕಿಕೈರ್ವಿನಿವಾರಿತಾನ್ ।। ೪೬ ।।

ಆತ್ಮನು ಜ್ಞಾನರೂಪನಾದ್ದರಿಂದ ಜ್ಞಾನವಿನಾಶವೆಂದರೆ ಆತ್ಮನ ನಾಶವೇ ಎಂದು ತಿಳಿಯಲ್ಪಡುತ್ತದೆ. ಆತ್ಮನಿಗೆ ನಾಶವನ್ನು ಹೇಳುವ ಹಾಗಿಲ್ಲ. ಹಾಗೆ ಅಂಗೀಕರಿಸಿದರೆ ಮುಕ್ತಿಗೆ ಅಪುರುಷಾರ್ಥತ್ವವು ಬರುವುದರಿಂದ ನನ್ನ ಮಾತಿಗೆ ಹಾಗೆ ಅರ್ಥವಲ್ಲ. ಮತ್ತೆ ಅಮುಕ್ತರಿಗೆ ಮುಕ್ತರ ವಿಷಯದಲ್ಲಿ ಜ್ಞಾನವಿಲ್ಲ ಅಥವಾ ಮುಕ್ತರಿಗೆಯೇ ವೃತ್ತಿ ರೂಪವಾದ ಜ್ಞಾನವಿಲ್ಲವೆಂದು ನನ್ನ ಮಾತಿಗೆ ಅರ್ಥ ಎಂಬ ಅಭಿಪ್ರಾಯದಿಂದ ಸ್ವರೂಪಕ್ಕೆ ನಾಶವಿಲ್ಲವೆಂದು ಹೇಳಿದರು. ಹಾಗೆಯೇ ಆಗಲಿ. ಆದರೆ ನೇರವಾಗಿ ಜ್ಞಾನಕ್ಕೆ ನಾಶವಿಲ್ಲವೆಂದು ಏಕೆ ಹೇಳಲಿಲ್ಲ ಎಂದರೆ – ಇಲ್ಲಿ ಯಾಜ್ಞ್ಯವಲ್ಕ್ಯರು ಕೇವಲ ಪ್ರಮೇಯವನ್ನು ಹೇಳಲು ಪ್ರವೃತ್ತರಾಗಿಲ್ಲ, ಮತ್ತೆ ಪರೀಕ್ಷೆಯ ನಿಮಿತ್ತದಿಂದ ಈ ವಚನವನ್ನು ಹೇಳಿರುವರು. ಪರೀಕ್ಷೆಯೆಂದರೆ ತನಗೆ ಅಭಿಮತವಲ್ಲದ ಮತದ ನಿರಾಸಾ ರೂಪವಾದುದು. ಈ ರೀತಿಯ ಉತ್ತರದಿಂದ ಆತ್ಮನಾಶವನ್ನು ಹೇಳುವ ಶೂನ್ಯಮತದ ನಿರಾಕರಣೆಯು ಆಗುವುದು. ಈ ಅಭಿಪ್ರಾಯದಿಂದ ಸ್ವರೂಪಕ್ಕೆ

ನಾಶವಿಲ್ಲವೆಂದು ಹೇಳಿದರು. ತಾರ್ಕಿಕರು ಮುಕ್ತರಿಗೆ ಸ್ವರೂಪತಃ ನಾಶವಿಲ್ಲವೆಂದು ಒಪ್ಪಿದರೂ, ಆನಂದಾದಿ ಧರ್ಮಗಳಿಗೆ ನಾಶವನ್ನು ಹೇಳುತ್ತಾರೆ. ಈ ಮತವನ್ನು ನಿರಾಕರಿಸಲಿಕ್ಕಾಗಿ ಮುಕ್ತರ ಸುಖ ಜ್ಞಾನ ಇತ್ಯಾದಿ ಧರ್ಮಗಳಿಗೂ ನಾಶವಿಲ್ಲವೆಂದು ಯಾಜ್ಞವಲ್ಕ್ಯರು ಹೇಳಿದರು.

'ನ ಪ್ರೇತ್ಯ ಸಂಜ್ಞಾಸ್ತಿ' ಎನ್ನುವ ವಾಕ್ಯಕ್ಕೆ ಮುಕ್ತನಿಗೆ ಜ್ಞಾನವಿಲ್ಲವೆಂದು ಅರ್ಥ ಮಾಡಬಾರದು ಎಂದು ವಾಕ್ಯಾಂತರದಿಂದಲೂ ಹೇಳುತ್ತಾರೆ –

ಮಾತ್ರಾಸಂಸರ್ಗಮಪ್ಯಾಹ ತಥಾ ಮಾಧ್ಯಂದಿನಶ್ರುತಿಃ ।

ಆಚಿಕ್ಷೇಪ ಮತಂ ತಚ್ಚ ಯಸ್ಮಿನ್ನ ವಿಷಯಾದನಮ್ ॥ ೬೭ ॥

ಮಾಧ್ಯಂದಿನ ಶ್ರುತಿಯು 'ಮಾತ್ರಾಸಂಸರ್ಗಸ್ತಜ್ಞಸ್ಯ ಭವತಿ' ಎನ್ನುವ ವಾಕ್ಯದಿಂದ ಧರ್ಮಗಳಿಗೆ ನಾಶಾಭಾವವನ್ನೂ, ಹಾಗೆಯೇ ರೂಪಾದಿ ವಿಷಯಗಳ ಉಪಭೋಗ ರೂಪವಾದ ಸಂಸರ್ಗವನ್ನು ಕೂಡ ಹೇಳುತ್ತದೆ (ಮೀಯಂತೇ ಇತಿ ಮಾತ್ರಾಃ ಎಂಬ ವ್ಯುತ್ಪತ್ತಿಯಿಂದ ಮಾತ್ರಾಃ ಎಂದರೆ ರೂಪಾದಿ ವಿಷಯಗಳು). ಸಂಜ್ಞಾ ನಾಸ್ತಿ ಎನ್ನುವ ವಾಕ್ಯಕ್ಕೆ ಮುಕ್ತನು ಅಮುಕ್ತರಿಂದ ತಿಳಿಯಲ್ಪಡುವುದಿಲ್ಲ ಎನ್ನುವುದೇ ಅರ್ಥವು. ಏಕೆಂದರೆ 'ಯತ್ರ ಹಿ ದ್ವೈತಮಿವ ಭವತಿ ತದಿತರಃ ಇತರಂ ಪಶ್ಯತಿ' ಇತ್ಯಾದಿ ಉತ್ತರ ಶ್ರುತಿಯು ಮುಕ್ತನಿಗೆ ವಿಷಯಭೋಗವು ಇಲ್ಲವೆಂದು ಹೇಳುವ ಮತವನ್ನು ಆಕ್ಷೇಪಿಸಿದೆ. ಹೇಗೆ ಆಕ್ಷೇಪಿಸಿದೆ ಎಂದರೆ – ಯಾವ ಪಕ್ಷದಲ್ಲಿ ದ್ವೈತ ಅಂದರೆ ಭೇದವು ಬರುತ್ತದೋ ಆಗ ಒಬ್ಬನು ಮತ್ತೊಬ್ಬನನ್ನು ನೋಡುತ್ತಾನೆ ಎಂದು ವ್ಯಾಪ್ತಿಯನ್ನು ಹೇಳುವ ಶ್ರುತಿಯು, ಹಿ ಶಬ್ದದಿಂದ ಅದು ಪ್ರಮಾಣ ಪ್ರಮಿತವಾಗಿದೆ ಎಂದು ಹೇಳುತ್ತದೆ. 'ಯತ್ರತ್ವಸ್ಯ ಸರ್ವಮಾತ್ಮೈವಾಭೂತ್ತತ್ಕೇನ ಕಂ ಪಶ್ಯತಿ' ಎಂಬ ಶ್ರುತಿಯೇ ಅದಕ್ಕೆ ಪೂರಕವಾದ ಪ್ರಮಾಣವು. ಮುಕ್ತಿಯಲ್ಲಿ ಎಲ್ಲವೂ ಆತ್ಮ ಸ್ವರೂಪವೇ ಆಗುವುದಾದರೆ ಮುಕ್ತನು ಯಾವ ಸಾಧನದಿಂದ ಯಾವ ಅರ್ಥವನ್ನು ನೋಡಿಯಾನು. ಅಂದರೆ ಯಾವುದನ್ನೂ ನೋಡಲಾರನು. ಹೀಗೆ ಅನಿಷ್ಟಪ್ರಸಂಗವು ಹೇಳಲ್ಪಡುತ್ತದೆ.

ಹಾಗಾದರೆ ಮುಕ್ತಿಯಲ್ಲಿ ದ್ವೈತವು ಇಲ್ಲವೆಂದಾದರೆ, ಆಗ ರೂಪದರ್ಶನ ಇತ್ಯಾದಿಗಳು ಆಗಲಾರವು ಎಂಬ ತರ್ಕವು ಮಾಡಲ್ಪಡುತ್ತದೆ. ಆದರೆ ಈ ಶ್ರುತಿಯು ದ್ವೈತಾಭಾವ ಮತವನ್ನು ಆಕ್ಷೇಪಿಸಿದರೂ ವಿಷಯಭೋಗಾಭಾವವನ್ನು ಹೇಳುವ ಮತವನ್ನು ಆಕ್ಷೇಪಿಸುವುದಿಲ್ಲ ಎಂದರೆ –

ಘ್ರಾಣಾದಿಭೋಗಾಭಾವಸ್ಯ ತ್ವನಿಷ್ಟತ್ವಹೃದಾ ಶ್ರುತಿಃ ।

ದ್ವೈತಾಭಾವವಿದ್ದರೆ ಆಗ ಘ್ರಾಣಾದಿಗಳಿಂದ ಗಂಧಾದಿ ಭೋಗಾಭಾವಕ್ಕಾದರೂ ಅನಿಷ್ಟತ್ವವು ಬರುವುದು. ಅಪ್ರಾಮಾಣಿಕವೂ ಪ್ರಮಾಣವಿರುದ್ಧವೂ ಆದುದೇ ಅನಿಷ್ಟವು. ಈ ಅಭಿಪ್ರಾಯದಿಂದ 'ಯತ್ರ ತ್ವಸ್ಯ' ಎಂಬ ಶ್ರುತಿಯು 'ಕೇನ ಕಂ

ಜಿಘ್ರೇತ್' ಎಂದು ಹೇಳುತ್ತ ದ್ವೈತಾಭಾವವಿದ್ದರೂ ವಿಷಯಭೋಗಾಭಾವವಿಲ್ಲ ಎಂಬ ಮತವನ್ನು ಆಕ್ಷೇಪಿಸಿದೆ.

ಅದ್ವೈತಮತದಲ್ಲಿ ವಿಷಯಭೋಗಾಭಾವವು ಆಪಾದನೀಯವಾಗಿದ್ದರೆ ಈ ಅರ್ಥಾಪತ್ತಿಯಿಂದ ವಿಷಯಭೋಗಾಭಾವ ನಿಂದೆಯು ಕೂಡುತ್ತಿತ್ತು. ಆದರೆ ಅದ್ವೈತಮತದಲ್ಲಿ ಹೀಗಿಲ್ಲ. ಇದು ಆಪಾದನವಲ್ಲ, ವಸ್ತುಸ್ಥಿತಿಯನ್ನೇ ಹೇಳಿದ್ದು. ಹೇಗೆಂದರೆ ಈ ಆತ್ಮನು ಅವಿನಾಶಿ. ನಾಶಾಭಾವವು ಆತ್ಮನ ಧರ್ಮ. ಮುಕ್ತಿಯಲ್ಲಿ ಆತ್ಮನಿಗೆ ವಿಷಯಾದಿಗಳ ಸಂಸರ್ಗವು ಇರುವುದಿಲ್ಲ. ಏಕೆಂದರೆ ಸಂಸಾರದಲ್ಲಿ ಭೇದ ವಿರುವಂತೆ ಆಗುವುದರಿಂದ ಅಲ್ಲಿ ಒಬ್ಬನು ಮತ್ತೊಬ್ಬನನ್ನು ನೋಡುತ್ತಾನೆ ಇತ್ಯಾದಿ ಗಳು ಕೂಡುತ್ತವೆ. ಆದರೆ ಮುಕ್ತಿಯಲ್ಲಿ ಆತ್ಮನಿಗೆ ಸರ್ವವೂ ಆತ್ಮಸ್ವರೂಪವೇ ಆಗುವುದರಿಂದ ಆತ್ಮನಿಂದ ಬೇರೆಯಾದುದು ಯಾವುದೂ ಇರುವುದಿಲ್ಲ. ಹೀಗಿರಲು ಆತ್ಮನು ಯಾವುದನ್ನು ಯಾವುದರಿಂದ ನೋಡಿಯಾನು? ಯಾವುದರಿಂದಲೂ ಯಾವುದನ್ನೂ ನೋಡಲಾರನು. ಹೀಗೆ ಅದ್ವೈತಿಗಳ ವಾದ. ಈ ವಿಷಯದಲ್ಲಿ ಶ್ರುತಿಯ ಅಭಿಪ್ರಾಯವನ್ನು ತಿಳಿಸುತ್ತಾರೆ –

ಯೇನೇದಮಖಿಲಂ ವೇದ ವಿಜ್ಞಾತಾರಂ ಖಮೇವ ಚ ॥ ೮೮ ॥

ಕೇನ ತಂ ಚ ವಿಜಾನೀಯಾದ್ಯಿತ್ಯನಿಷ್ಟಂ ಚ ಸರ್ವಥಾ ।

ಯಾವ ಶ್ರೀಹರಿಯಿಂದ ಇವೆಲ್ಲವನ್ನೂ ತಿಳಿಯುತ್ತಾನೋ, ಆ ಶ್ರೀಹರಿಯನ್ನು ಯಾವುದರಿಂದ ತಿಳಿದಾನು? ತಿಳಿಯತಕ್ಕ ತನ್ನನ್ನೇ ಯಾವುದರಿಂದ ತಿಳಿದಾನು? ಈ ಎರಡು ವಾಕ್ಯಗಳಲ್ಲಿ ಹೇಳಲ್ಪಟ್ಟ ವಿಷ್ಣುಜ್ಞಾನರಾಹಿತ್ಯವೂ, ಸ್ವಜ್ಞಾನರಾಹಿತ್ಯವೂ ಕೂಡ ಸರ್ವಥಾ ಅನಿಷ್ಟವೇ.

ಇಲ್ಲಿ 'ಯೇನೇದಂ ಸರ್ವಂ ವಿಜಾನಾತಿ ತಂ ಚ ಕೇನ ವಿಜಾನೀಯಾತ್ ವಿಜ್ಞಾತಾರಮರೇ ಕೇನ ವಿಜಾನೀಯಾತ್' ಎಂಬ ಎರಡು ವಾಕ್ಯಗಳು ಶ್ರುತವಾಗಿವೆ. ಪರಮೇಶ್ವರನ ಜ್ಞಾನಾಭಾವವು ಹಾಗೂ ತನ್ನ ಜ್ಞಾನಾಭಾವವು ಅನಿಷ್ಟವು, ವಾಸ್ತವವಲ್ಲವೆಂದು ಈ ವಾಕ್ಯಗಳ ಅರ್ಥ. ಅದು ಅನಿಷ್ಟಾಪಾದನವೆಂದು ಆ ಪ್ರಸಂಗ ಕಥನದಿಂದಲೇ ತಿಳಿಯುತ್ತದೆ. ಅದರ ಸಾಹಚರ್ಯದಿಂದ 'ಕೇನ ಕಂ ಪಶ್ಯೇತ್' ಇತ್ಯಾದಿಗಳೂ ಕೂಡ ಅನಿಷ್ಟಾಪಾದನವೇ ಹೊರತು ವಸ್ತುಸ್ಥಿತಿ ಕಥನವಲ್ಲ ಎಂದು ತಿಳಿಯುತ್ತದೆ.

ಹಾಗಾದರೆ 'ಯತೋ ವಾಚೋ ನಿವರ್ತಂತೇ' ಇತ್ಯಾದಿ ಶ್ರುತಿಯಿಂದ ಈಶ್ವರನು ಸರ್ವಥಾ ಅವಿಜ್ಞೇಯನೇ ಆಗಿರುವನು. ಜೀವಾತ್ಮನೂ ತನಗೆ ತಾನು ಅಜ್ಞೇಯನೇ. ಒಂದೇ ಕ್ರಿಯೆಯಲ್ಲಿ ಒಬ್ಬನಿಗೇ ಕರ್ತೃ–ಕರ್ಮಭಾವವು ವಿರುದ್ಧವು. ಆದ್ದರಿಂದ ಪರಮೇಶ್ವರ ಜ್ಞಾನಾಭಾವವೂ ಸ್ವಜ್ಞಾನಾಭಾವವೂ ಅನಿಷ್ಟವು ಹೇಗೆ ಎಂದರೆ –

ನಾಖಿಲಜ್ಞಾಪಕೋ ವಿಷ್ಣುರಜ್ಞೇಯೋ ನಿಯಮೇನ ಹಿ ।। ೮೯ ।।

ತಜ್ಜ್ಞಾನಾರ್ಥಂ ಹಿ ವೇದಾನಾಮಖಿಲಾನಾಂ ಪ್ರವರ್ತನಮ್ ।

ಎಲ್ಲವನ್ನೂ ತಿಳಿಸಿಕೊಡುವ ವಿಷ್ಣುವು ಸರ್ವಥಾ ಅವಿಜ್ಞೇಯನೆನ್ನುವುದು ಕೂಡುವುದಿಲ್ಲ. ಏಕೆಂದರೆ ಅವನನ್ನು ತಿಳಿಸಿಕೊಡುವುದಕ್ಕಾಗಿಯೇ ಸಕಲ ವೇದಗಳು ಪ್ರವರ್ತಿತವಾಗಿವೆ. ವಿಷ್ಣುವು ಸರ್ವಥಾ ಅಜ್ಞೇಯನೆಂದಾದರೆ ಎಲ್ಲ ವೇದಗಳಿಗೂ ವೈಯರ್ಥ್ಯವು ಬರುವುದು. ಆದ್ದರಿಂದ ಯತೋ ವಾಚಾ ಇತ್ಯಾದಿ ಶ್ರುತಿಗಳಿಗೆ ಸಾಕಲ್ಯೇನ ಅವಾಚ್ಯತ್ವ ಮುಂತಾದ ರೀತಿಯಲ್ಲಿ ಇತರ ಶ್ರುತಿಗಳಿಗೆ ಅವಿರುದ್ಧವಾಗಿ ವ್ಯಾಖ್ಯಾನ ಮಾಡಬೇಕು.

ಹೀಗೆ ಪರಮಾತ್ಮನಿಗೆ ಜ್ಞೇಯತ್ವವನ್ನು ಉಪಪಾದಿಸಿ ಈಗ ಜೀವಾತ್ಮನಿಗೆ ತನ್ನ ಜ್ಞಾನವಿದೆ ಎಂಬುದನ್ನು ಉಪಪಾದಿಸುತ್ತಾರೆ –

ಪ್ರತ್ಯಕ್ಷಮಾತ್ಮವಿಜ್ಞಾನಾವಿರೋಧಾನುಭವಾದಪಿ ।। ೯೦ ।।

ನ ಸ್ವವಿಜ್ಞಾನಿತಾಯಾಂ ಚ ವಿರೋಧಃ ಕಶ್ಚನೇಯತೇ ।

ಪ್ರತ್ಯಕ್ಷದಂತೆಯೇ ಆತ್ಮವಿಷಯಕ ಜ್ಞಾನವೂ ಜೀವನಿಗೆ ಅನುಭವಸಿದ್ಧವು. ಆತ್ಮನಿಗೆ ತನ್ನ ಜ್ಞಾನವಿದೆ ಎಂಬ ಸಾಕ್ಷಿಸಿದ್ಧವಾದ ವಿಷಯದಲ್ಲಿ ಶ್ರುತಿಗಳಿಂದಲೂ ಕೂಡ ಯಾವುದೇ ವಿರೋಧವೂ ಪ್ರಾಪ್ತವಾಗುವುದಿಲ್ಲ. 'ಅಹಮಿತ್ಯೇವ ಯೋ ವೇದ್ಯಃ ಸ ಜೀವ ಇತಿ ಕೀರ್ತಿತಃ' ಇತ್ಯಾದಿ ಶ್ರುತಿಗಳೂ ಈ ವಿಷಯದಲ್ಲಿ ಪ್ರಮಾಣವಾಗಿವೆ.

ಆತ್ಮನು ತನ್ನನ್ನು ತಾನು ತಿಳಿದುಕೊಳ್ಳದಿದ್ದರೆ ಆಗ ನನಗೆ ಇದು ಇಷ್ಟಸಾಧನ ಇತ್ಯಾದಿ ಜ್ಞಾನವಿಲ್ಲದಿರುವುದರಿಂದ ಅದಕ್ಕಾಗಿ ಇಚ್ಛಾಪ್ರಯತ್ನಗಳೂ ಇರುವುದಿಲ್ಲ. ಇದರಿಂದ ಎಲ್ಲ ಪ್ರವೃತ್ತಿ ನಿವೃತ್ತಿಗಳಿಗೂ ವಿಲೋಪ ಬರುವುದು. ಆತ್ಮಜ್ಞಾನವನ್ನೇ ಆಶ್ರಯಿಸಿರುವ ಜೀವನ ಸ್ವಪ್ರಕಾಶತ್ವವೂ ಕೂಡುವುದಿಲ್ಲ.

ಭೇದನಾದಿಗಳಲ್ಲಿ ಕರ್ತೃ–ಕರ್ಮಗಳಿಗೆ ಭೇದವು ಕಂಡಿರುವುದರಿಂದ ಅವುಗಳಿಗೆ ಏಕತ್ವವನ್ನು ಹೇಳುವುದು ವಿರುದ್ಧವು ಎಂದು ಹೇಳಿದ್ದನ್ನು ನಿರಾಕರಿಸುತ್ತಾರೆ –

ಕರ್ತೃಕರ್ಮವಿರೋಧಶ್ಚ ನಿತ್ಯಾನುಭವರೋಧತಃ ।। ೯೧ ।।

ಕಥಮೇವ ಪದಂ ಗಚ್ಛೇದ್ವಿರೋಧೋಽದೃಷ್ಟಬಾಧನಮ್ ।

ಒಂದೇ ಕ್ರಿಯೆಯಲ್ಲಿ ಕರ್ತೃ–ಕರ್ಮಗಳಿಗೆ ವಿರೋಧವೆನ್ನುವುದು ನಿತ್ಯವಾದ ಸಾಕ್ಷಿ ಅನುಭವಕ್ಕೆ ವಿರುದ್ಧವಾದುದರಿಂದ ಹೇಗೆ ತಾನೆ ಯುಕ್ತವಾಗುವುದು? ಯಾವ ಕರ್ತೃ–ಕರ್ಮಗಳಲ್ಲಿ ಏಕತ್ವವನ್ನು ಒಪ್ಪಿದರೆ ಅದೃಷ್ಟಬಾಧವೋ ಅಂದರೆ ಪ್ರಮಾಣದಿಂದ ವಿರೋಧವೋ ಅಲ್ಲಿ ಮಾತ್ರ ಏಕತ್ವ ಕೂಡುವುದಿಲ್ಲ. ಉದಾಹರಣೆಗೆ ಒಂದು ಬೆರಳಿನ ತುದಿಯನ್ನು ಅದೇ ಬೆರಳಿನಿಂದ ಮುಟ್ಟುವುದು, ಒಂದು ಕತ್ತಿಯ

ಅಲುಗಿನಿಂದ ಅದೇ ಕತ್ತಿಯ ಅಲುಗನ್ನು ತುಂಡರಿಸುವುದು ಇತ್ಯಾದಿ ಕ್ರಿಯೆಗಳಲ್ಲಿ ಕರ್ತೃ– ಕರ್ಮಗಳಿಗೆ ಏಕತ್ವವು ಕೂಡುವುದಿಲ್ಲ.

ಹಾಗಾದರೆ ಪರಮೇಶ್ವರನಿಗೆ ಜ್ಞೇಯತ್ವವೂ ಜೀವನಿಗೆ ತನ್ನ ಜ್ಞಾನವೂ ಇರಲಿ. ಹಾಗಿದ್ದರೂ ಮುಕ್ತಿಯಲ್ಲಿ ಜ್ಞಾನಾಭಾವವು ಹೇಗೆ ಅನಿಷ್ಟವು ಎಂದರೆ – 'ನಾತ್ಮಾನಂ ನ ಪರಾಂಶ್ಚೈವ ನ ಸತ್ಯಂ ನಾಪಿ ಚಾನೃತಮ್। ಪ್ರಾಜ್ಞಃ ಕಿಂಚನ ಸಂವೇತ್ತಿ ತುರ್ಯಂ ತತ್ಸರ್ವದೃಕ್ ಸದಾ' ಎಂಬ ಶ್ರುತಿಯಲ್ಲಿ ಸುಪ್ತನಿಗೆ ತನ್ನ ಜ್ಞಾನವೂ ಈಶ್ವರಜ್ಞಾನವೂ ಕೂಡ ಇಲ್ಲವೆಂದು ಹೇಳಿ, ಮುಕ್ತನಿಗೆ ಆ ಜ್ಞಾನವು ಇದೆ ಎಂದು ಹೇಳಲ್ಪಡುತ್ತದೆ. ಹೀಗೆ ಜ್ಞಾನಾಭಾವವು ಪ್ರಮಾಣವಿರುದ್ಧವಾದ್ದರಿಂದ ಅದು ಹೇಗೆ ಅನಿಷ್ಟವಲ್ಲ? ಎಂದು ಕೇಳುತ್ತಾರೆ. ಹೀಗೆ ಜ್ಞಾನಾಭಾವವು ಪ್ರಮಾಣವಿರುದ್ಧವಾದ ಕಾರಣ ವಿಷಯಭೋಗಾಭಾವವು ಕೂಡುವುದಿಲ್ಲ. ಇಷ್ಟೇಅಲ್ಲದೆ ವಿಷಯಭೋಗವು ಶ್ರುತಿಸಿದ್ಧವೂ ಆಗಿದೆ ಎಂದು ಹೇಳುತ್ತಾರೆ –

ಸೋಽಶ್ನುತೇ ಸರ್ವಕಾಮಾಂಶ್ಚ ಕಾಮನ್ನೀ ಕಾಮರೂಪ್ಯಥ ॥ ೯೨ ॥

ಇತ್ಯಾದಿಶ್ರುತಯಶ್ಚೋಕ್ತಮರ್ಥಮೇವ ವದಂತಿ ಹಿ ।

ಮುಕ್ತಿಯಲ್ಲಿ ಮುಕ್ತನು ಎಲ್ಲ ಅಭೀಷ್ಟಗಳನ್ನೂ ಭೋಗಿಸುತ್ತಾನೆ. ತನ್ನ ಇಚ್ಛೆಗೆ ತಕ್ಕಂತೆ ಭೋಗ್ಯ ವಸ್ತುಗಳನ್ನು, ರೂಪಗಳನ್ನು ಪಡೆಯುತ್ತಾನೆ. ಇತ್ಯಾದಿ ಶ್ರುತಿಗಳು ಮುಕ್ತನಿಗೆ ವಿಷಯಭೋಗವಿದೆ ಎಂಬ ಅರ್ಥವನ್ನೇ ಹೇಳುತ್ತವೆ. ಆದ್ದರಿಂದ ಮಾತ್ರಾ ಸಂಸರ್ಗಸ್ತ್ಯಸ್ಯ ಭವತಿ ಎನ್ನುವಲ್ಲಿ ಅಸಂಸರ್ಗಃ (ಅಂದರೆ ವಿಷಯಗಳ ಸಂಸರ್ಗವು ಇಲ್ಲ) ಎನ್ನುವ ಪರಕೀಯ ವ್ಯಾಖ್ಯಾನವು ಅಯುಕ್ತವು.

ಹಾಗಾದರೆ ಯತ್ರ ಹಿ ದ್ವೈತಮಿವ ಭವತಿ ಎಂಬ ಶ್ರುತಿಯಲ್ಲಿ ಇವ ಶಬ್ದದಿಂದ ದ್ವೈತಾಭಾವವು ಪ್ರತಿಪಾದಿಸಲ್ಪಡುತ್ತದೆ. ಆದ್ದರಿಂದ ದ್ವೈತಾಭಾವವನ್ನು ಒಪ್ಪಿದರೆ ಅನಿಷ್ಟ ಪ್ರಸಂಗವು ಎಂದು ಹೇಳಿದ್ದು ಹೇಗೆ ಎಂದರೆ –

ಅಸ್ವಾತಂತ್ರ್ಯಾದಿವೇತ್ಯುಕ್ತಂ ನ ದ್ವೈತಾಭಾವತಃ ಕ್ವಚಿತ್ ॥ ೯೩ ॥

ದ್ವೈತಕ್ಕೆ ಅಸ್ವಾತಂತ್ರ್ಯವೆಂಬ ಅರ್ಥವನ್ನು ಇಟ್ಟುಕೊಂಡು ಇವ ಎಬುದಾಗಿ ಹೇಳಿದ್ದು. ದ್ವೈತಾಭಾವವೆಂಬ ಅಭಿಪ್ರಾಯದಿಂದ ಹೇಳಿಲ್ಲ. ಏಕೆಂದರೆ ಇವ ಎಂಬ ಶಬ್ದಕ್ಕೆ ಅಭಾವ ಎಂಬ ಅರ್ಥವನ್ನು ಎಲ್ಲಿಯೂ ಯಾವ ಕೋಶದಲ್ಲಿಯೂ ಹೇಳಿಲ್ಲ.

ಇವ ಶಬ್ದಕ್ಕೆ ಅಭಾವ ಎಂಬ ಅರ್ಥವನ್ನು ಹೇಳಿದರೆ ಬಾಧಕವಿದೆ ಎಂದು ಹೇಳುತ್ತಾರೆ –

ಆತ್ಮೈವಾಭೂದಿತಿ ಹ್ಯಸ್ಮಾದವಿಶೇಷಪ್ರಸಂಗತಃ ।

ಇವ ಶಬ್ದಕ್ಕೆ ಅಭಾವ ಎಂಬ ಅರ್ಥವಿದ್ದರೆ ದ್ವೈತಮಿವ ಭವತಿ ಎಂಬುದಕ್ಕೆ ದ್ವೈತವು ಇಲ್ಲವೆಂದು ಅರ್ಥವಾಗುತ್ತದೆ. ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್

ಎಂಬ ವಾಕ್ಯದಿಂದ ದ್ವೈತಾಭಾವವು ಸ್ಪಷ್ಟವಾಗಿಯೇ ಹೇಳಲ್ಪಟ್ಟಿದೆ. ಆದ್ದರಿಂದ ಆತ್ಮೈವಾಭೂತ್ ಎಂಬ ಈ ವಾಕ್ಯಕ್ಕೆ ದ್ವೈತಮಿವ ಭವತಿ ಎನ್ನುವ ವಾಕ್ಯದಿಂದ ವಿಶೇಷವು ಇಲ್ಲದೇ ಹೋಗುವುದು. ಹಾಗೂ 'ದ್ವೈತವು ಇಲ್ಲವಾದರೆ ಒಬ್ಬನು ಮತ್ತೊಬ್ಬನನ್ನು ಹೇಗೆ ನೋಡಿಯಾನು?' 'ದ್ವೈತವು ಇಲ್ಲವಾದರೆ ಯಾವುದರಿಂದ ಯಾವುದನ್ನು ನೋಡಿಯಾನು?' ಹೀಗೆ ಹೇಳುವ ಶ್ರುತಿಗೆ ಉನ್ಮತ್ತವಾಕ್ಯತ್ವವು ಪ್ರಸಕ್ತವಾಗುವುದು.

ಹಾಗಾದರೆ ಇವ ಶಬ್ದಕ್ಕೆ ಅಸ್ವಾತಂತ್ರ್ಯವಾಚಿತ್ವವು ಹೇಗೆ ಎಂದರೆ –

ಅಸ್ವಾತಂತ್ರ್ಯೋಪಮಾಭೇದಭೇದೇಷ್ವಿವ ಉದೀರಿತಃ ॥ ೯೪ ॥

ಶಬ್ದತತ್ವ ಇತಿ ಪ್ರೋಕ್ತಂ ..... ।

ಇವ ಶಬ್ದವು ಅಸ್ವಾತಂತ್ರ್ಯ, ಉಪಮಾನ, ಅಭೇದ–ಭೇದಗಳಲ್ಲಿ (ಹಾಗೂ ಪರಸ್ಪರ ವಿರುದ್ಧಗಳಾದ ಎರಡು ವಸ್ತುಗಳಲ್ಲಿ) ಹೇಳಲ್ಪಟ್ಟಿದೆ. ಹೀಗೆ ಶಬ್ದತತ್ವವೆಂಬ ಗ್ರಂಥದಲ್ಲಿ ಉಕ್ತವಾಗಿದೆ.

ನ ಪ್ರೇತ್ಯ ಸಂಜ್ಞಾಸ್ತಿ ಎಂಬ ವಾಕ್ಯಕ್ಕೆ ಮುಕ್ತನು ತಿಳಿಯುವುದಿಲ್ಲ ಎಂಬ ಅರ್ಥವನ್ನೇ ಇಟ್ಟುಕೊಂಡು ಅವಿನಾಶೀ ಇತ್ಯಾದಿ ವಾಕ್ಯಗಳನ್ನು ಅನ್ಯಥಾ ವಾಖ್ಯಾನ ಮಾಡುವವನಿಗೆ ಬಾಧಕವನ್ನು ಹೇಳುತ್ತಾರೆ –

..... ಮೈತ್ರೇಯ್ಯುಕ್ತೋತ್ತರಂ ಚ ಕಿಮ್ ।

'ನ ಪ್ರೇತ್ಯ ಸಂಜ್ಞಾ೨ಸ್ತಿ' ಎಂಬ ವಾಕ್ಯವನ್ನು ಕೇಳಿದ ಮೈತ್ರೇಯಿಯು 'ಸಂಜ್ಞಾ ನಾಶೋ ಯದಿ ಭವೇತ್ಕಿಂ ಮುಕ್ತ್ಯಾ ನಃ ಪ್ರಯೋಜನಮ್ । ಮೋಹಂ ಮಾಂ ಪ್ರಾಪಯಾಮಾಸ ಭವಾನತ್ರೇತಿ ಚೋದಿತಃ' ಇತ್ಯಾದಿಯಾಗಿ ಹೇಳಿದನು. ಇದಕ್ಕೆ ಉತ್ತರವಾದರೂ ಏನು? ಅಂದರೆ 'ನ ಪ್ರೇತ್ಯ ಸಂಜ್ಞಾನಾಸ್ತಿ' ಎನ್ನುವ ವಾಕ್ಯಕ್ಕೆ ಮುಕ್ತನಿಗೆ ಜ್ಞಾನವಿಲ್ಲವೆಂದೇ ವ್ಯಾಖ್ಯಾನ ಮಾಡಿದರೆ ಮೈತ್ರೇಯಿಯು ಹೇಳಿದ ಆಕ್ಷೇಪಕ್ಕೆ ಉತ್ತರವಿಲ್ಲವೆಂದಾಗುವುದು.

ಈ ಪ್ರಕಾರವಾಗಿ ಸಾಂಖ್ಯ ನೈಯಾಯಿಕಾದಿಗಳಿಗೆ ಅಭಿಮತವಾದ ಮೋಕ್ಷಕ್ಕೆ ಅಪ್ರಾಮಾಣಿಕತ್ವವನ್ನು ಪ್ರತಿಪಾದಿಸಿ, ಈಗ ಮೋಕ್ಷಕ್ಕೆ ಅಪುರುಷಾರ್ಥತ್ವ ಪ್ರಸಂಗ ಬರುವುದು ಎಂದು ಏನು ಹೇಳಲ್ಪಟ್ಟಿತೋ ಅದನ್ನು ವಿಸ್ತರಿಸುತ್ತಾರೆ –

ಸುಖಾದಿಧರ್ಮಹಾನೌ ತು ಮುಕ್ತೇಃ ಕಿಂ ಚ ಪ್ರಯೋಜನಮ್ ॥ ೯೫ ॥

ಸುಖಾದಿ ಧರ್ಮಗಳ ವಿನಾಶವೇ ಮುಕ್ತಿಯೆಂದು ಅಂಗೀಕರಿಸಿದರೆ ಅಂತಹ ಮುಕ್ತಿಯಿಂದ ಪ್ರಯೋಜನವೇನು? 'ಪ್ರಯುಜ್ಯತೇ ಪ್ರವರ್ತ್ಯತೇ ಪುರುಷೋ೨ನೇನ ಇತಿ ಪ್ರಯೋಜನಮ್' ಎನ್ನುವ ವ್ಯುತ್ಪತ್ತಿಯಿಂದ ಮುಕ್ತಿಗಾಗಿ ಪುರುಷನನ್ನು ಯಾವುದು ಪ್ರವರ್ತಿಸುವುದೋ ಅದು ಪ್ರಯೋಜನ. ಹಾಗೆ ಪ್ರವರ್ತಿಸುವಂತಹ

ಪ್ರಯೋಜನವು ಯಾವುದೂ ಇಲ್ಲ ಎಂದು ತಾತ್ಪರ್ಯ. ಪರರಿಗೆ ನಮ್ಮ ಮತದಲ್ಲಿ ಆಪಾದಿಸತಕ್ಕ ದೋಷವು ಇಲ್ಲವೆಂದು ತು ಶಬ್ದದಿಂದಲೂ, ಮುಕ್ತಿಯಲ್ಲಿ ಸುಖಾಭಾವವು ಅಪ್ರಾಮಾಣಿಕವೇ ಎಂದು ಚ ಶಬ್ದದಿಂದಲೂ ಸೂಚಿಸಿದ್ದಾರೆ.

ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿ ಎಂದು ಪ್ರಯೋಜನವು ಎರಡು ವಿಧ. ಅದರಲ್ಲಿ ಮುಕ್ತಿಯು ಇಷ್ಟಪ್ರಾಪ್ತಿ ರೂಪವು ಆಗದೇ ಇದ್ದರೂ, ಅನಿಷ್ಟನಿವೃತ್ತಿರೂಪವು ಆಗಿಯೇ ಆಗುವುದು. ಆದ್ದರಿಂದ ಪುರುಷನಿಂದ ಅರ್ಥಿಸಲ್ಪಡುತ್ತದೆ ಎಂದು ಆಶಂಕಿಸುತ್ತಾರೆ –

ಯದ್ಯಥೋ ದುಃಖಹಾನಿಃ ಸ್ಯಾದನರ್ಥಃ ಸುಖನಾಶನಮ್ ।

ತಯೋಶ್ಚ ದುಃಖಹಾನಾದ್ಧಿ ಸುಖನಾಶೋಽಧಿಕೋ ಭವೇತ್ ॥ ೯೬ ॥

ದುಃಖಹಾನಿ ರೂಪವಾದ ಮುಕ್ತಿಯು ಪುರುಷನಿಂದ ಅರ್ಥಿಸಲ್ಪಡುತ್ತದೆ ಎಂದು ನೀನು ಹೇಳುವ ಪಕ್ಷದಲ್ಲಿ, ಈ ವಿಷಯದಲ್ಲಿ ನಾವು ಹೇಳುವುದೇನೆಂದರೆ – ಅನಿಷ್ಟನಿವೃತ್ತಿಯು ಪುರುಷಾರ್ಥವಾಗಲಿ. ಹೀಗಿದ್ದರೂ ಸಮಸ್ತ ದುಃಖಹಾನಿರೂಪವಾದ ಮುಕ್ತಿಯು ಪುರುಷಾರ್ಥವಲ್ಲ. ಏಕೆಂದರೆ ಮುಕ್ತಿಯಲ್ಲಿ ಸುಖನಾಶರೂಪವಾದ ಅನರ್ಥವೂ ಇರುವುದು. ಮುಕ್ತಿಯು ಸುಖದುಃಖಗಳೆರಡರ ನಿವೃತ್ತಿರೂಪವಾದುದು ಎಂದು ಅಂಗೀಕರಿಸಿದರೆ ಅದು ಹೇಗೆ ಪುರುಷಾರ್ಥವೆನಿಸುವುದು? ಅದರಲ್ಲಿಯೂ ಸುಖನಾಶವು ದುಃಖನಾಶಕ್ಕಿಂತ ಹೆಚ್ಚು ಅನಿಷ್ಟ. ಆದ್ದರಿಂದ ಅಂತಹ ಮೋಕ್ಷಕ್ಕಾಗಿ ಯಾರೂ ಪ್ರಯತ್ನ ಮಾಡುವುದಿಲ್ಲ.

ಹಾಗಾದರೆ ಎಲ್ಲಿ ಸ್ವಲ್ಪವೇ ದುಃಖದ ನಿವೃತ್ತಿಯೋ ಹೆಚ್ಚಿನ ಸುಖದ ನಾಶವೋ ಅಲ್ಲಿ ಸುಖನಾಶವು ಅನಿಷ್ಟವು. ಆದರೆ ಮುಕ್ತಿಯಲ್ಲಿ ಅತಿ ಹೆಚ್ಚಿನ ದುಃಖ ನಿವೃತ್ತಿಯು. ಸುಖನಾಶವಾದರೂ ಅತ್ಯಲ್ಪವೇ. ಆದಕಾರಣ ಮುಕ್ತಿಗೆ ಹೇಗೆ ಪುರುಷಾರ್ಥತ್ವವಿಲ್ಲ? ಎಂದರೆ –

ಪ್ರಾಪ್ಯಾಪಿ ದುಃಖಂ ಸುಮಹತ್ಸುಖಲೇಶಾಪ್ತಯೇ ಜನಃ ।
ಯತತೇ ಸುಖಹಾನೌ ಹಿ ಕೋ ಮೋಕ್ಷಾಯ ಯತೇತ್ಪುಮಾನ್ ॥ ೯೭ ॥

ಮೊಳಕಾಲುಗಳಿಂದಲೇ ಅಡ್ಡಾಡುತ್ತ ಜೀವಿಸುವ ಜನರು ಅತ್ಯಂತ ಹೆಚ್ಚಿನ ದುಃಖವನ್ನು ಹೊಂದಿಯೂ ಕೂಡ ಸುಖಲೇಶವನ್ನು ಹೊಂದುವುದಕ್ಕಾಗಿ ಪ್ರಯತ್ನ ಪಡುತ್ತಾರೆ. ಹೀಗಿರುವಾಗ ಅತ್ಯಲ್ಪ ಸುಖವೂ ನಾಶವಾಗುವುದಾದರೆ, ಮಹತ್ತಾದ ದುಃಖವನ್ನು ಬಿಡುವುದಕ್ಕಾಗಿ ಯಾವ ಪುರುಷನು ತಾನೆ ಪ್ರಯತ್ನ ಮಾಡುವನು? ಅಂತೂ ಸುಖವು ಅತ್ಯಲ್ಪವಾದರೂ ಅದನ್ನು ಕಳೆದುಕೊಳ್ಳಲು ಯಾವನೂ ಪ್ರಯತ್ನ ಮಾಡುವುದಿಲ್ಲ ಎಂದು ತಾತ್ಪರ್ಯ.

ಮಹತ್ತಾದ ದುಃಖನಾಶದಿಂದ ಪ್ರಾಪ್ತವಾಗುವ ಸುಖವು ಅಲ್ಪವೇ ಆಗಿದ್ದರೂ ಶ್ರೇಷ್ಠವೇ ಎನ್ನುವುದನ್ನು ಪ್ರಕಾರಾಂತರದಿಂದ ಉಪಪಾದಿಸುತ್ತಾರೆ –

ಅಲ್ಪಾಚ್ಚ ಸುಖನಾಶಾದ್ಧಿ ಬಿಭೇತ್ಯತಿತರಾಂ ಜನಃ ।

ಮಹಚ್ಚ ದುಃಖಮಾಪ್ನೋತಿ ಸುಖನಾಶನಿವೃತ್ತಯೇ ॥ ೯೮ ॥

ಸುಖವು ಅಲ್ಪವೇ ಇದ್ದರೂ ಅದರ ನಾಶದಿಂದ ಜನರು ಅತಿಶಯವಾಗಿ ಭಯಪಡುತ್ತಾರೆ. ಇದು ಲೋಕದಲ್ಲಿ ಪ್ರಸಿದ್ಧ. ಸುಖನಾಶಹೇತುವಿನ ನಿವೃತ್ತಿಗಾಗಿ ಜನರು ಮಹತ್ತಾದ ದುಃಖವನ್ನೂ ಹೊಂದುತ್ತಾರೆ.

ಹಾಗಾದರೆ ಹೆಚ್ಚಿನ ಪ್ರಮಾಣದಲ್ಲಿ ಮಧುಮಿಶ್ರಿತವಾದ ಸಿಹಿಯಾದ ಅನ್ನವನ್ನು ಅತ್ಯಲ್ಪವಾದ ವಿಷದಿಂದ ಮಿಶ್ರವಾಗಿದೆ ಎಂಬ ಕಾರಣದಿಂದ ಪರಿತ್ಯಾಗಮಾಡಲು ಕಾರಣವೇನು ಎಂದರೆ, ಬಹುತರವಾದ ಸುಖದ ಹಾನಿಯಿಂದಲೇ ಎನ್ನುತ್ತೇವೆ. ಹೀಗೆಯೇ ಆಗಲಿ. ಆದರೆ ಪುರುಷರಲ್ಲಿ ರಾಗಿಗಳು ವೀತರಾಗಿಗಳು (ರಾಗರಹಿತರು) ಎಂದು ಎರಡು ವಿಧವಿದ್ದಾರೆ. ಇವರಲ್ಲಿ ರಾಗಿಗಳು ಸುಖಕ್ಕಾಗಿ ದುಃಖವನ್ನೂ ಅನುಭವಿಸುತ್ತಾರೆ. ವಿಷಮಿಶ್ರಿತವಾಗಿದ್ದರೂ ಅತ್ಯಂತ ಮಧುರವಾದ ಅನ್ನವನ್ನು ಅದರ ಭಕ್ಷಣದಿಂದ ಲಭಿಸುವ ತಾತ್ಕಾಲಿಕವಾದ ಸುಖಕ್ಕಾಗಿ ಭೋಗಿಸುತ್ತಾರೆ. ವಿಷದಿಂದ ಹಾನಿ ಸಂಭವಿಸುವುದು ನಿಶ್ಚಿತವಾಗಿದ್ದರೂ ತಕ್ಷಣಕ್ಕೆ ಪ್ರಾಪ್ತವಾಗುವ ಸುಖವನ್ನು ಕಳೆದುಕೊಳ್ಳಲು ಅವರು ಇಚ್ಛಿಸುವುದಿಲ್ಲ. ವೀತರಾಗಿಗಳಾದರೂ ಅಂತಹ ಅನ್ನಾದಿಗಳ ಸೇವನೆಯಿಂದ ಉಂಟಾಗುವ ಮಹಾವಿಪತ್ತನ್ನು ತಿಳಿದು, ಸ್ವರ್ಗದಂತಹ ಸುಖವನ್ನೂ ಕೂಡ, ಕೋಪಗೊಂಡ ಹಾವಿನ ಹೆಡೆಯ ನೆರಳಿಗೆ ಸದೃಶವೆಂದು ಪರಿತ್ಯಾಗ ಮಾಡುತ್ತಾರೆ, ಎಂದರೆ –

ನ ಚ ರಾಗನಿಮಿತ್ತಂ ತದ್ವೀತರಾಗಾ ಅಪಿ ಸ್ಫುಟಮ್ ।

ನಾರದಾದ್ಯಾಃ ಸುಖಾರ್ಥಾಯ ಸಹಂತೇ ದುಃಖಮಂಜಸಾ ॥ ೯೯ ॥

ರಾಗನಿಮಿತ್ತದಿಂದಲೇ ಪ್ರಾಪ್ಯಾಪಿ ಇತ್ಯಾದಿ ಹೇಳಿದ್ದು. ಮುಮುಕ್ಷುಗಳಾದರೂ ರಾಗರಹಿತರು. ಆದ್ದರಿಂದ ಸುಖವನ್ನು ಆದರಿಸದೆ ದುಃಖನಾಶಕ್ಕಾಗಿಯೇ ಪ್ರಯತ್ನ ಮಾಡುತ್ತಾರೆ ಎನ್ನುವುದೂ ಕೂಡುವುದಿಲ್ಲ. ಏಕಂದರೆ ವೀತರಾಗಿಗಳಾದ ನಾರದರೇ ಮುಂತಾದವರು ಅಲ್ಪವಾದ ಸುಖವನ್ನು ಹೊಂದಲಿಕ್ಕಾಗಿ ಬಹಳವಾದ ದುಃಖವನ್ನು ಸಹಿಸುತ್ತಾರೆ. ಇದು ಶ್ರುತ್ಯಾದಿಗಳಿಂದ ಸ್ಪಷ್ಟವಾಗಿದೆ.

ಇದು ಯಾವುದರಿಂದ ತಿಳಿದುಬರುತ್ತದೆ ಎಂದರೆ –

ಯುದ್ಧಾದಿದರ್ಶನಂ ಯಸ್ಮಾತ್ಸುದುಃಖೇನಾಪಿ ಕುರ್ವತೇ ।

ಯದೇಂದ್ರವೈರೋಚನಯೋರ್ಬ್ರಹ್ಮಾಸ್ತ್ರಾಭ್ಯಾಂ ಸುತಾಪಿತಾಃ ॥ ೧೦೦ ॥

ಅಪಿ ನೈವಾಜಯುರ್ಯದ್ಧರಸಾತ್ತೇ ನಾರದಾದಯಃ ।

ಇತಿ ಸ್ಯಾಂದವಚಸ್ತಸ್ಮಾತ್ಸುಖಾಭಾವಾಯ ಕೋ ಯತೇತ್ ॥ ೧೦೧ ॥

ನಾರದರೇ ಮೊದಲಾದವರು ಸುಖವನ್ನು ಹೊಂದಲಿಕ್ಕಾಗಿ ಯುದ್ಧದರ್ಶನ, ಸ್ವಯಂವರ ದರ್ಶನಕ್ಕಾಗಿ ದೂರದೇಶಗಳಿಗೆ ಗಮನ ಇತ್ಯಾದಿಗಳನ್ನು ಅತ್ಯಂತ ದುಃಖದಿಂದಲೂ ಕೂಡ ಮಾಡುತ್ತಾರೆ. ಇದೂ ಕೂಡ ಯಾವುದರಿಂದ ಎಂದರೆ, ಇಂದ್ರವೈರೋಚನರ ಬ್ರಹ್ಮಾಸ್ತ್ರಗಳಿಂದ ಅತ್ಯಂತ ಸಂತಾಪಕ್ಕೊಳಗಾದರೂ ನಾರದರೇ ಮುಂತಾದವರು ಯುದ್ಧದರ್ಶನದಿಂದ ಲಭಿಸುವ ಸುಖದ ನಿಮಿತ್ತದಿಂದಾಗಿ ಆ ದರ್ಶನವನ್ನು ಬಿಡಲೇ ಇಲ್ಲ. ಹೀಗೆ ಸ್ಕಾಂದವಚನವಿದೆ. ಆದ್ದರಿಂದ ವೀತರಾಗಿಗಳೂ ಕೂಡ ಸುಖಾಭಾವಕ್ಕಾಗಿ ಪ್ರಯತ್ನ ಮಾಡುವುದಿಲ್ಲ.

ಹೀಗೆ ಪರಕೀಯರು ಹೇಳುವ ಮೋಕ್ಷದಲ್ಲಿ ಸುಖಾಭಾವವನ್ನು ಅಂಗೀಕರಿಸಿ, ಅಂತಹ ಮೋಕ್ಷಕ್ಕಾಗಿ ಯಾರೂ ಪ್ರವೃತ್ತಿ ಮಾಡುವುದಿಲ್ಲವೆಂದು ಹೇಳಿದರು. ಈಗ ದುಃಖಾಭಾವವೂ ಕೂಡುವುದಿಲ್ಲ ಎನ್ನುತ್ತಾರೆ –

ವಿಮತೋ ದುಃಖಯುಗ್ಯಸ್ಮಾಚ್ಚೇತನಃ ಸನ್ದುಃಖೋಜ್ಝಿತಃ ।

ಪ್ರತಿಪನ್ನೋ ಯಥೇತ್ಯೇವ ಚಾನುಮಾ ಕೇನ ವಾರ್ಯತೇ ॥ ೧೦೨ ॥

ಪರಕೀಯರು ಹೆಳುವಂತಹ ಮುಕ್ತನು ದುಃಖದಿಂದ ಕೂಡಿರುವನು. ಅವನು ಚೇತನನಾಗಿದ್ದು ಸುಖರಹಿತನಾದುದರಿಂದ, ನರಕದಲ್ಲಿರುವ ಚೇತನನಂತೆ. ಇಂತಹ ಅನುಮಾನವು ಯಾರಿಂದ ನಿವಾರಿಸಲ್ಪಡುತ್ತದೆ?

ಶ್ರುತಯೋ ಯತಃ ಎಂದು ಈ ಮೊದಲು ಹೇಳಿದ್ದನ್ನು ಈಗ ವಿಸ್ತರಿಸುತ್ತಾರೆ –

ಸರ್ವಶ್ರುತಿಪುರಾಣೇಷು ಸುಖಭಾವೋಕ್ತಿತಸ್ತಥಾ ।

ಮುಕ್ತೌ ನ ಗ್ರಾಹ್ಯಮೇವೈತತ್ಸುಖಾಭಾವಮತಂ ಬುಧೈಃ ॥ ೧೦೩ ॥

ಮುಕ್ತಿಯಲ್ಲಿ ಸುಖವಿದೆಯೆಂದು ಎಲ್ಲ ಶ್ರುತಿಪುರಾಣಗಳಲ್ಲಿ ಹೇಳಿದೆ. ಆದ್ದರಿಂದ ಮುಕ್ತಿಯಲ್ಲಿ ಸುಖವಿಲ್ಲವೆನ್ನುವ ಮತವು ಜ್ಞಾನಿಗಳಿಂದ ಅಗ್ರಾಹ್ಯವೇ ಆಗಿದೆ.

ಆ ಶ್ರುತ್ಯಾದಿಗಳನ್ನು ಉದಾಹರಿಸುತ್ತಾರೆ –

ಸೋಽನಾನಂದಾದ್ವಿಮುಕ್ತಃ ಸನ್ನಾನಂದೀ ಭವತಿ ಸ್ಫುಟಮ್ ।

ನಿರ್ಗುಣೇ ಬ್ರಹ್ಮಣಿ ಮಯಿ ಧಾರಯನ್ವಿಶದಂ ಮನಃ ॥ ೧೦೪ ॥

ಪರಮಾನಂದಮಾಪ್ನೋತಿ ಯತ್ರ ಕಾಮೋಽವಸೀಯತೇ ।

'ಸೋಽನಾನಂದಾದ್ವಿಮುಕ್ತಃ ಆನಂದೀಭವತಿ' ಎಂಬ ಶ್ರುತಿವಾಕ್ಯವನ್ನು ಇಲ್ಲಿ ತೆಗೆದುಕೊಳ್ಳಬೇಕು. ಮುಕ್ತನು ದುಃಖದಿಂದ ಬಿಡಲ್ಪಟ್ಟವನಾಗಿ ನಿಚ್ಚಳವಾದ ಆನಂದವುಳ್ಳವನು ಆಗುತ್ತಾನೆ ಎಂದು ಇದರ ಅರ್ಥ. ನಿರ್ಗುಣೇ ಎನ್ನುವುದು ಭಾಗವತದಲ್ಲಿನ ಭಗವಂತನ ವಾಕ್ಯ. ಪ್ರಾಕೃತ ಗುಣಗಳಿಂದ ರಹಿತನಾದ ಹಾಗೂ ಗುಣಪೂರ್ಣನಾದ್ದರಿಂದ ಬ್ರಹ್ಮಶಬ್ದವಾಚ್ಯನಾದ ನನ್ನಲ್ಲಿ ನಿರ್ಮಲವಾದ ಮನಸ್ಸನ್ನು ಧರಿಸುವವನು ಉತ್ಕೃಷ್ಟವಾದ ಆನಂದವನ್ನು ಹೊಂದುತ್ತಾನೆ. ಎಲ್ಲಿ ಪರಮಾನಂದವು

ಪ್ರಾಪ್ತವಾಗುವುದೋ ಅಲ್ಲಿ ಸ್ಪೃಹೆಯು ಅವಸಾನವನ್ನು ಹೊಂದುತ್ತದೆ.

ನ ವಿಷ್ಣುಸದೃಶಂ ದೈವಂ ನ ಮೋಕ್ಷಸದೃಶಂ ಸುಖಮ್ ॥ ೧೦೫ ॥

ನ ವೇದಸದೃಶಂ ವಾಕ್ಯಂ ನ ವರ್ಣೋಂಕಾರಸಂಮಿತಃ ।

ಯತ್ರಾನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ ॥ ೧೦೬ ॥

ಕಾಮಸ್ಯ ಯತ್ರಾಪ್ತಾಃ ಕಾಮಾಸ್ತತ್ರ ಮಾಮೃತಂ ಕೃಧಿ ।

ಇದು ಪುರಾಣವಾಕ್ಯ. ವಿಷ್ಣುವಿಗೆ ಸದೃಶವಾದ ದೈವವಿಲ್ಲ. ಮೋಕ್ಷಕ್ಕೆ ಸದೃಶವಾದ ಸುಖವಿಲ್ಲ. ವೇದಕ್ಕೆ ಸದೃಶವಾದ ವಾಕ್ಯವಿಲ್ಲ. ಓಂಕಾರಕ್ಕೆ ಸದೃಶವಾದ ಅಕ್ಷರವಿಲ್ಲ. ಯಾವ ಲೋಕದಲ್ಲಿ ಸ್ವರೂಪಸುಖಗಳೂ (ಆನಂದಾಃ), ಸಂತೋಷ ವಿಶೇಷಗಳೂ (ಮೋದಾಃ), ವಿಷಯಜನ್ಯ ಸುಖವೂ (ಮುದಃ), ಪ್ರಕೃಷ್ಟವಾದ ವಿಷಯಜನ್ಯ ಸುಖವೂ (ಪ್ರಮುದಃ) ಇರುತ್ತವೋ, ಎಲ್ಲಿ ಇಚ್ಛೆಯ ವಿಷಯಗಳೂ ಪರ್ಯಾಪ್ತವಾಗಿವೆಯೋ, ಅಲ್ಲಿ ನನ್ನನ್ನು ಮುಕ್ತನನ್ನಾಗಿ ಮಾಡು. ಹೀಗೆ ವಾಯು ದೇವರನ್ನು ಕುರಿತು ಪ್ರಾರ್ಥನೆ.

ಇತಿ ಶ್ರುತಿಪುರಾಣಾನಿ ತತ್ರ ತತ್ರ ವದಂತಿ ಹಿ ॥ ೧೦೭ ॥

ಅತೋ ಮೋಕ್ಷೇ ಸುಖಾಭಾವ ಇತಿ ಯತ್ಕಿಂಚಿದೇವ ಹಿ ।

ಹೀಗೆ ಶ್ರುತಿ ಪುರಾಣಗಳು ಆಯಾ ಪ್ರದೇಶಗಳಲ್ಲಿ ಮುಕ್ತನಿಗೆ ಸುಖವನ್ನು ಹೇಳುತ್ತವೆ. ಆದಕಾರಣ ಮುಕ್ತಿಯಲ್ಲಿ ಸುಖವಿಲ್ಲವೆನ್ನುವುದು ಅತ್ಯಲ್ಪವಷ್ಟೇ ಎಂದು ಸಿದ್ಧವಾಗುವುದು.

ಸುಖಾಭಾವವನ್ನು ಪ್ರತಿಪಾದಿಸುವುದಕ್ಕಾಗಿ ಸಾಂಖ್ಯರು ಮುಕ್ತನಿಗೆ ಶರೀರ ರಾಹಿತ್ಯವನ್ನು ಹೇಳುವರು. ಅದು ಅಸಿದ್ಧವೆಂದು ಹೇಳುತ್ತಾರೆ –

ಶಿರಃ ಕರಾದ್ಯಭಾವಶ್ಚ ನ ಮುಕ್ತಸ್ಯ ಭವೇತ್ಕ್ವಚಿತ್ ।

ಶ್ರುತಯಶ್ಚ ಪುರಾಣಾನಿ ಮಾನಮತ್ರ ಬಹೂನಿ ಚ ॥ ೧೦೮ ॥

ಮುಕ್ತನಿಗೆ ಯಾವತ್ತೂ ಕೂಡ ಶಿರಸ್ಸು, ಹಸ್ತ ಮುಂತಾದ ಅವಯವಗಳ ಅಭಾವವು ಉಂಟಾಗುವುದಿಲ್ಲ. ಹೀಗಿರುವಾಗ ಸುಖಾಭಾವವಾದರೂ ಹೇಗೆ? ಈ ವಿಷಯದಲ್ಲಿ ಶ್ರುತಿಗಳೂ ಹಾಗೂ ಅನೇಕ ಪುರಾಣಗಳೂ ಕೂಡ ಪ್ರಮಾಣವಾಗಿವೆ.

ಈ ವಿಷಯದಲ್ಲಿ ಪುರಾಣ ವಾಕ್ಯಗಳು ಸ್ಪಷ್ಟವಾದ ಅರ್ಥವನ್ನು ಹೊಂದಿರುವ ಪ್ರಯುಕ್ತ ಮೊದಲು ಪುರಾಣ ವಾಕ್ಯಗಳನ್ನು ಉದಾಹರಿಸುತ್ತಾರೆ –

ನ ವರ್ತತೇ ಯತ್ರ ರಜಸ್ತಮಸ್ತಯೋಃ

ಸತ್ತ್ವಂ ಚ ಮಿಶ್ರಂ ನ ಚ ಕಾಲವಿಕ್ರಮಃ ।
ನ ಯತ್ರ ಮಾಯಾ ಕಿಮುತಾಪರೇ ಹರೇ-
ರನುವ್ರತಾ ಯತ್ರ ಸುರಾಸುರಾರ್ಚಿತಾಃ ॥ ೧೦೯ ॥
ಶ್ಯಾಮವಾದತಾಃ ಶತಪತ್ರಲೋಚನಾಃ
ಪಿಶಂಗವಸ್ತ್ರಾಃ ಸುರುಚಃ ಸುಪೇಶಸಃ ।
ಸರ್ವೇ ಚತುರ್ಬಾಹವ ಉನ್ಮಿಷನ್ಮಣಿ-
ಪ್ರವೇಕನಿಷ್ಕಾಭರಣಾಃ ಸುವರ್ಚಸಃ ॥ ೧೧೦ ॥

ಯಾವ ಲೋಕದಲ್ಲಿ ರಜೋಗುಣವೂ, ತಮೋಗುಣವೂ ಹಾಗೂ ಅವುಗಳಿಂದ ಮಿಶ್ರಿತವಾದ ಸತ್ವಗುಣವೂ ಇರುವುದಿಲ್ಲವೋ (ಅಂದರೆ ಈ ಪ್ರಾಕೃತಗುಣಗಳ ಬಂಧದಿಂದ ಕೂಡಿದ ವ್ಯಾಪಾರವು ಇಲ್ಲವೋ), ಕಾಲಸಾಮರ್ಥ್ಯದಿಂದ ಆಗಲ್ಪಟ್ಟ ಭಾವವಿಕಾರವೂ ಇಲ್ಲವೋ, ಎಲ್ಲಿ ಪ್ರಕೃತಿಯು ಬಂಧಕವಾಗಿ ಇಲ್ಲವೋ ಅಂತಹ ಲೋಕದಲ್ಲಿ ಮಹದಾದಿಗಳು ಇರುವುದಿಲ್ಲವೆಂದು ಮತ್ತೆ ಹೇಳಬೇಕೇನು?

ಆ ಲೋಕದಲ್ಲಿರುವ ಎಲ್ಲರೂ ಶ್ಯಾಮವರ್ಣವುಳ್ಳವರೂ, ನಿರ್ಮಲರಾದವರೂ, ಕಮಲದಂತೆ ಕಣ್ಣುಳ್ಳವರೂ, ಪಿಂಗಲವಸ್ತ್ರವುಳ್ಳವರೂ, ಶೋಭನವಾದ ಕಾಂತಿ, ರೂಪ ಹಾಗೂ ಬಲಗಳಿಂದ ಯುಕ್ತರೂ, ಪ್ರಭಾಕಿರಣಗಳಂತಿರುವ ಶ್ರೇಷ್ಟವಾದ ರತ್ನಗಳೂ, ಮುತ್ತಿನ ಸರಗಳೂ ಇವುಗಳನ್ನೇ ಆಭರಣವಾಗಿವುಳ್ಳವರೂ, ನಾಲ್ಕು ಭುಜಗಳಿಂದ ಕೂಡಿದವರೂ ಆಗಿದ್ದು ದೇವತೆಗಳಿಂದಲೂ ಸಾಧುಗಳಿಂದಲೂ ಪೂಜಿಸಿಕೊಳ್ಳಲ್ಪಟ್ಟವರಾಗಿ ಶ್ರೀಹರಿಗೆ ಸೇವಕರಾಗಿ ಇರುತ್ತಾರೆ.

ಪ್ರವಾಲವೈಢೂರ್ಯಮೃಣಾಸವರ್ಚಸಾಂ
ಪರಿಸ್ಫುರತ್ಕುಂಡಲಮೌಲಿಮಾಲಿನಾಮ್ ।
ಭ್ರಾಜಿಷ್ಣುಭಿರ್ಯಃ ಪರಿತೋ ವಿರಾಜತೇ
ಲಸದ್ವಿಮಾನಾವಲಿಭಿರ್ಮಹಾತ್ಮನಾಮ್ ॥ ೧೧೧ ॥
ವಿದ್ಯೋತಮಾನಪ್ರಮದೋತ್ತಮಾಭಿಃ
ಸವಿದ್ಯುದಭ್ರಾವಲಿಭಿರ್ಯಥಾ ನಭಃ ।
ಶ್ರೀರ್ಯತ್ರ ರೂಪಿಣ್ಯುರುಗಾಯಪಾದಯೋಃ
ಕರೋತಿ ಮಾನಂ ಬಹುಧಾ ವಿಭೂತಿಭಿಃ ॥ ೧೧೨ ॥

ಹವಳ, ವೈಢೂರ್ಯ, ಕಮಲದ ದಂಡುಗಳ ವರ್ಚಸ್ಸಿನಿಂದ ಶೋಭಿಸುತ್ತ

ಕುಂಡಲ, ಕಿರೀಟ, ಮಾಲಿಕೆಗಳಿಂದ ಕಂಗೊಳಿಸುತ್ತಿರುವ ದೆವತೆಗಳಿಂದಲೂ ಹಾಗೂ ಉತ್ತಮರಾದ ಶೋಭನವಾದ ಸ್ತ್ರೀಯರಿಂದ ಪ್ರಕಾಶಿಸುತ್ತಿರುವ ವಿಮಾನಗಳ ಪಂಕ್ತಿಗಳಿಂದ ಆ ಲೋಕವು ಶೋಭಿಸುತ್ತಿರುವುದು. ಮಿಂಚುಗಳಿಂದ ಶೋಭಿಸುವ ಮೇಘಗಳ ಪಂಕ್ತಿಗಳಿಂದ ಸಹಿತವಾದ ಆಕಾಶದಂತೆ ಯಾವ ಲೋಕವು ಸುತ್ತ ಮುತ್ತಲೂ ಪ್ರಕಾಶಿಸುತ್ತಿರುವುದೋ ಅಲ್ಲಿ ಪ್ರತ್ಯಕ್ಷಳಾದ ಮಹಾಲಕ್ಷ್ಮಿಯು ಬಹು ರೂಪಗಳಿಂದ ಸಾಕ್ಷಾತ್ತಾಗಿ ಶ್ರೀಹರಿಯ ಚರಣಕಮಲಗಳಲ್ಲಿ ಬಹುಪ್ರಕಾರದಿಂದ ಪೂಜೆಯನ್ನು ಮಾಡುತ್ತಿರುವಳು. ಇಂತಹ ತನ್ನ ಶ್ರೇಷ್ಠವಾದ ಲೋಕವನ್ನು ಅವರಿಗಾಗಿ ಶ್ರೀಹರಿಯು ತೋರಿಸಿದನು ಎಂಬುದಾಗಿ ಭಾಗವತದ ದ್ವಿತೀಯ ಸ್ಕಂಧ ನವಮಾಧ್ಯಾಯದಲ್ಲಿ ಉಕ್ತವಾಗಿದೆ. (ತಸ್ಮೈ ಸ್ವಲೋಕಂ ಭಗವಾನ್ಸಭಾಜಿತಃ ಸಂದರ್ಶಯಾಮಾಸ ಪರಂ ನ ಯತ್ಪದಂ).

ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್

ಗಾಯತ್ರಂ ತ್ವೋ ಗಾಯತಿ ಶಕ್ವರೀಷು ।

ಬ್ರಹ್ಮಾ ತ್ವೋ ವದತಿ ಜಾತವಿದ್ಯಾಂ

ಯಜ್ಞಸ್ಯ ಮಾತ್ರಾಂ ವಿಮಿಮೀತ ಉ ತ್ವಃ ॥ ೧೧೩ ॥

ಒಬ್ಬ ಬ್ರಹ್ಮನು ಋಚೆಗಳನ್ನು ಪಠಿಸುತ್ತ ಅವುಗಳ ಪೋಷಕನಾಗಿರುತ್ತಾನೆ. ಒಬ್ಬ ಬ್ರಹ್ಮನು ಶಕ್ವರೀ ಛಂದಸ್ಸಿನ ಋಚೆಗಳಲ್ಲಿ ಗಾಯತ್ರವನ್ನು ಗಾಯನಮಾಡುತ್ತಾನೆ. ಒಬ್ಬ ಬ್ರಹ್ಮನು ಪೌರುಷೇಯ ವಿದ್ಯೆಯನ್ನು ಉಪದೇಶಿಸುತ್ತಾನೆ. ಮತ್ತೊಬ್ಬನು ಶ್ರೀಹರಿಯ ಮತ್ಸ್ಯಾದಿ ಅವತಾರಗಳನ್ನು ವಿಶೇಷವಾಗಿ ತಿಳಿಯುತ್ತಾನೆ.

ಕಾಮಾನ್ನರೂಪೀ ಚರತೀತಿಪೂರ್ವ-

ಶ್ರುತ್ಯಾ ಪುರಾಣೋಕ್ತಿಭಿರಪ್ಯದೋಷಃ ।

ದೇಹಃ ಸ್ವರೂಪಾತ್ಮಕ ಏವ ತೇಷಾಂ

ಮುಕ್ತಿಂ ಗತಾನಾಮಪಿ ಚೇಯತೇ ಹಿ ॥ ೧೧೪ ॥

ಸ್ವೇಚ್ಛಾನುಸಾರವಾದ ಅನ್ನ ಹಾಗೂ ರೂಪವುಳ್ಳವನಾಗಿ ಸಂಚರಿಸುತ್ತಾನೆ. (ಇಲ್ಲಿ ಕಾಮರೂಪ್ಯನುಸಂಚರನ್ ಎಂಬ ಶ್ರುತಿಯನ್ನು ಉದಾಹರಿಸಿದ್ದಾರೆ). ಇವೇ ಮೊದಲಾದ ಶ್ರುತಿಯಿಂದಲೂ, ಪುರಾಣಗಳ ವಚನಗಳಿಂದಲೂ ನಿರ್ದೋಷವಾದ ಸ್ವರೂಪಾತ್ಮಕವೇ ಆದ ಶರೀರವು ಮುಕ್ತರಾದವರಿಂದಲೂ ಹೊಂದಲ್ಪಡುವುದು ಎಂದು ತಿಳಿದುಬರುವುದು. ಆದ್ದರಿಂದ ಇದು ಪ್ರಮಾಣಪ್ರಮಿತವೇ ಆಗಿದೆ.

ಪುರಾಣವಾಕ್ಯದಲ್ಲಿ ಶ್ಯಾಮವದಾತಾಃ ಇತ್ಯಾದಿಗಳಿಂದ ಮುಕ್ತರಿಗೆ ದೇಹವಿದೆ ಎಂದು ತಿಳಿದುಬರುವುದು. ನ ವರ್ತತೇ ಎನ್ನುವಲ್ಲಿ ಪ್ರಕೃತ್ಯಾದಿ ಅಭಾವೋಕ್ತಿಯಿಂದ

ಪರಮಮುಕ್ತಿತ್ವವೂ, ದೇಹಕ್ಕೆ ಸ್ವರೂಪತ್ವವೂ, ಆದ್ದರಿಂದಲೇ ಆದೋಷತ್ವವೂ ಹೇಳಲ್ಪಟ್ಟಿದೆ. ಶ್ರುತಿಯಲ್ಲಿ ಋಚೆಗಳ ಉಚ್ಚಾರಣಾದಿಗಳಿಂದ ದೇಹಿತ್ವವು ಪ್ರಮಿತವು.

ಈ ವಿಷಯದಲ್ಲಿ ಅನುಮಾನವನ್ನು ಹೇಳುತ್ತಾರೆ –

ಶಿರಃಕರಾದ್ಯೈರಪಿ ಮುಕ್ತಿಭಾಜೋ

ಯುಕ್ತಾ ಯತಸ್ತೇ ಪುರುಷಾ ಇದಾನೀಮ್ ।

ಯಥೇತಿ ಪೂರ್ವಾ ಅನುಮಾಶ್ಚ ಜೀವ–

ಸ್ವರೂಪಮಂಗಾದಿಕಮಾಪಯಂತಿ ॥ ೧೧೫ ॥

ಮುಕ್ತಿಯನ್ನು ಹೊಂದಿದವರು ಶಿರಸ್ಸು , ಹಸ್ತ ಮುಂತಾದವುಗಳಿಂದ ಯುಕ್ತರು, ಪುರುಷರಾದ್ದರಿಂದ ಆತ್ಮತ್ವವಿದ್ದ ಪ್ರಯುಕ್ತ. ಆತ್ಮತ್ವವಿರುವ ನಮಗೆ ಶಿರಕರಾದಿಗಳು ಇರುವಂತೆ. ಇವೇ ಮುಂತಾದ ಅನುಮಾನಗಳು ಮುಕ್ತ ಜೀವರ ಸ್ವರೂಪವನ್ನು ಶರೀರ ಅವಯವಾದಿಗಳಿಂದ ಕೂಡಿರುವುದಾಗಿ ತಿಳಿಸಿಕೊಡುತ್ತವೆ.

ಹೀಗೆ ಸಾಂಖ್ಯಾದಿ ಮತವನ್ನು ನಿರಾಕರಿಸಿದರು. ಮುಕ್ತನಾಗುವ ಮೊದಲು ಭಿನ್ನ ಅಥವಾ ಭಿನ್ನಾಭಿನ್ನನಾಗಿದ್ದ ಜೀವನಿಗೆ ಮುಕ್ತಿಯಲ್ಲಿ ಪರಬ್ರಹ್ಮನೊಂದಿಗೆ ಅತ್ಯಂತ ಐಕ್ಯವು ಉಂಟಾಗುವುದು ಎಂದು ಕೆಲವರು ತಿಳಿಯುತ್ತಾರೆ. ಈ ಮತವನ್ನು ಈಗ ನಿರಾಕರಿಸುತ್ತಾರೆ –

ನ ಬ್ರಹ್ಮರೂಪತ್ವಮಮುಷ್ಯ ದೇಹಿನೋ ।

ಮುಕ್ತಾವಪಿ ಸ್ಯಾತ್ಪ್ರಮಯಾ ಕಥಂಚಿತ್ ॥ ೧೧೬ ॥

ಮುಕ್ತಿಯಲ್ಲಿಯೂ ಭೇದ ಎಂಬ ವಿಷಯದಲ್ಲಿ ಪ್ರಮಾಣವಿರುವುದರಿಂದ ಈ ಜೀವನಿಗೆ ಮುಕ್ತಿಯಲ್ಲಿಯೂ ಕೂಡ ಯಾವ ರೀತಿಯಿಂದಲೂ ಬ್ರಹ್ಮಸ್ವರೂಪತ್ವವು ಆಗಲಾರದು.

ಆ ಪ್ರಮಾಣವನ್ನು ಪಠಿಸುತ್ತಾರೆ –

ಸ ಬ್ರಹ್ಮಣಾ ಸಹಿತೋಽಶೇಷಭೋಗಾನ್

ಭುಂಕ್ತೇ ತಥೋಪೇತ್ಯ ಸುಖಾರ್ಣವಂ ತಮ್ ।

ಯತ್ತತ್ಪರಂ ಜ್ಯೋತಿರುಪೇತ್ಯ ಜೀವೋ

ನಿಜಸ್ವರೂಪತ್ವಮವಾಪ್ಯ ಕಾಮಾನ್ ॥ ೧೧೭ ॥

ಭುಂಕ್ತೇ ಸ ದೇವಃ ಪುರುಷೋತ್ತಮೋಽಜ

ಆತ್ಮೇತಿ ಚೋಕ್ತೋ ಗುಣಪೂರ್ತಿಹೇತೋಃ ।

ರಾಯದುರ್ಗದ ಪುರಾಣ ಕೈಂಕರ್ಯ
ಬಳಗ ರಿ

ಸೇತುಃ ಸ ದೇವೋಽಖಿಲಮುಕ್ತಿಭಾಜಾ–

ಮುತಾಮೃತಸ್ಯೇಷ ಇಹೇಶಿತಾ ಯತಮ್ ॥ ೧೧೮ ॥

ಮುಕ್ತನು ಬ್ರಹ್ಮನಿಂದ ಸಹಿತನಾಗಿ ಎಲ್ಲ ಭೋಗಗಳನ್ನು ಭೋಗಿಸುತ್ತಾನೆ. ಹಾಗೆ ಸುಖಪೂರ್ಣನಾದ ಪರಬ್ರಹ್ಮನನ್ನು ಹೊಂದಿ ಎಲ್ಲ ಭೋಗಗಳನ್ನು ಭೋಗಿಸುತ್ತಾನೆ. ಜೀವನು ಉತ್ಕೃಷ್ಟ ಜ್ಯೋತಿರೂಪನಾದ ಯಾವ ಶ್ರೀಹರಿಯನ್ನು ಹೊಂದಿ, ತನ್ನ ಸ್ವರೂಪತ್ವವನ್ನು ಹೊಂದಿ, ಎಲ್ಲ ಅಭೀಷ್ಟಗಳನ್ನೂ ಅನುಭವಿಸುವನೋ, ಆ ದೇವನು ಕ್ರೀಡಾದಿ ಗುಣವಿಶಿಷ್ಟನೂ ಉತ್ಪತ್ತಿರಹಿತನೂ ಗುಣಪೂರ್ಣನೂ ಆದ ಪ್ರಯುಕ್ತ ಪುರುಷೋತ್ತಮನೆಂದೂ ಆತ್ಮನೆಂದೂ ಹೇಳಲ್ಪಟ್ಟಿದ್ದಾನೆ. ಮುಕ್ತಿಯನ್ನು ಹೊಂದಿದ ಎಲ್ಲರಿಗೂ ಅವನೇ ಆಶ್ರಯನು. ಇಲ್ಲಿ ಯಾವ ಕಾರಣದಿಂದ ನಿಯಾಮಕನೋ ಅದೇ ರೀತಿ ಮುಕ್ತವರ್ಗಕ್ಕೂ ಕೂಡ ಅವನೇ ನಿಯಾಮಕನು.

ಸ ಬ್ರಹ್ಮಣಾ ಎನ್ನುವುದರಿಂದ 'ಸೋಽಶ್ನುತೇ ಸರ್ವಾನ್ಕಾಮಾನ್ಸಹ ಬ್ರಹ್ಮಣಾ ವಿಪಶ್ಚಿತಾ' ಎನ್ನುವ ಶ್ರುತಿಯನ್ನೂ, ಉಪೇತ್ಯ ಎನ್ನುವುದರಿಂದ 'ನೈತಮಾನಂದ ಮಯಮಾತ್ಮಾನಮುಪಸಂಕ್ರಮ್ಯ' ಎಂಬ ಶ್ರುತಿಯನ್ನೂ, ಯತ್ತತ್ ಎನ್ನುವುದರಿಂದ 'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಉತ್ತಮಃ ಪುರುಷಃ ಸ ತತ್ರ ಪರ್ಯೇತಿ ಜಕ್ಷನ್ಕ್ರೀಡನ್ರಮಮಾಣಃ' ಹಾಗೂ 'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಏಷ ಆತ್ಮಾ' ಎಂಬ ಎರಡು ಶ್ರುತಿಗಳನ್ನೂ, ಸೇತುಃ ಎಂದು 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯನ್ನೂ, ಉತಾ ಎಂದು 'ಉತಾಮೃತ ತ್ವಸ್ಯೇಶಾನೋ ಯದನ್ನೇನಾತಿರೋಹತಿ' ಎಂಬ ಶ್ರುತಿಯನ್ನೂ ಇಲ್ಲಿ ಸ್ಮರಿಸಲಾಗಿದೆ.

ಮೇಲೆ ಉದಾಹರಿಸಲ್ಪಟ್ಟ ವಾಕ್ಯಗಳ ಫಲವನ್ನು ತೋರಿಸುತ್ತಾರೆ –

ಇತ್ಯಾದಿವಾಕ್ಯೈರ್ಭಗವದ್ವಶಃ ಸನ್

ಭುಂಕ್ತೇಽಖಿಲಾನ್ಮುಕ್ತಿಗತೋಽಪಿ ಭೋಗಾನ್ ।

ಇವೇ ಮೊದಲಾದ ವಾಕ್ಯಗಳಿಂದ ಮುಕ್ತಿಯನ್ನು ಹೊಂದಿದವನೂ ಕೂಡ ಶ್ರೀಹರಿಯ ಅಧೀನನಾಗಿಯೇ ಸಕಲ ಭೋಗಗಳನ್ನೂ ಭೋಗಿಸುತ್ತಾನೆ ಎಂದು ತಿಳಿದುಬರುತ್ತದೆ.

ಈ ವಿಷಯದಲ್ಲಿ ಅನುಮಾನವನ್ನೂ ಹೇಳುತ್ತಾರೆ –

ಕಾಲೋಽಪ್ಯಸೌ ನೈಕ್ಯಯುತಃ ಪರೇಣ

ಜೀವಸ್ಯ ಕಾಲೋ ಯತ ಏಷ ಯದ್ವತ್ ॥ ೧೧೯ ॥

ಇತ್ಯಾದಿಕಾ ಅಪ್ಯನುಮಾಃ ಪ್ರಮಾಣಂ

ಮುಕ್ತೌ ಚ ಜೀವಸ್ಯ ಪರತ್ವರೋಧೇ ।

ಮೋಕ್ಷಸಂಬಂಧಿಯಾದ ಈ ಕಾಲವೂ ಕೂಡ ಜೀವನಿಗೆ ಪರಮಾತ್ಮನಿಂದ ಯಾವ ಐಕ್ಯವು ಹೇಳಲ್ಪಡುವುದೋ ಅದರಿಂದ ಯುಕ್ತವಾದುದು ಆಗುವುದಿಲ್ಲ. ಕಾಲತ್ವವಿದ್ದ ಪ್ರಯುಕ್ತ, ಈ ಸಂಸಾರದಲ್ಲಿನ ಕಾಲದಂತೆ. ಇತ್ಯಾದಿ ಅನುಮಾನಗಳೂ ಕೂಡ ಮುಕ್ತಿಯಲ್ಲಿಯೂ ಜೀವನಿಗೆ ಪರಬ್ರಹ್ಮತ್ವ ನಿರಾಕರಣೆಯಲ್ಲಿ ಪ್ರಮಾಣವು.

ಮೇಲಿನ ವಾಕ್ಯದಲ್ಲಿನ ಆದಿಪದವನ್ನು ವ್ಯಾಖ್ಯಾನಮಾಡುತ್ತ ಅನುಮಾನಾಂತರವನ್ನು ಹೇಳುತ್ತಾರೆ –

ಕಥಂ ಚ ಯಃ ಪೂರ್ವಮಸೌ ನ ಪಶ್ಚಾದ್

ಭವೇತ್ಸ ಏವೇತ್ಯಪಿ ಯುಕ್ತಿಮೇತಿ ।। ೧೨೦ ।।

ಸಂಸಾರದಲ್ಲಿ ಪರಮಾತ್ಮನಾಗದಿದ್ದ ಜೀವನು ಮುಕ್ತಿಯಲ್ಲಿ ಆ ಪರಮಾತ್ಮನೇ ಆಗುವನು ಎನ್ನಗವುದೂ ಕೂಡ ಹೇಗೆ ಯುಕ್ತವಾಗುತ್ತದೆ? ಅಯುಕ್ತವೇ ಆಗುವುದು ಎಂದು ತಾತ್ಪರ್ಯ.

ಇದಕ್ಕೆ ವ್ಯಾಪ್ತಿಯನ್ನು ಉಪಪಾದಿಸುತ್ತಾರೆ –

ಯತೋ ನ ದೃಷ್ಟಂ ಯದಭೂನ್ನ ಪೂರ್ವಂ

ಪಶ್ಚಾತ್ತದಾಸೇತಿ ಕುತಶ್ಚ ಕಿಂಚಿತ್ ।। ೧೨೧ ।।

ಮೊದಲು ಘಟ ಇತ್ಯಾದಿ ವಸ್ತುಸ್ವರೂಪವನ್ನು ಹೊಂದಿರದ ಯಾವುದೋ ಒಂದು ವಸ್ತುವು ಆಮೇಲೆ ಯಾವದೋ ಒಂದು ಕಾರಣದಿಂದ ಘಟಾದಿ ಭಾವವನ್ನು ಹೊಂದಿತು ಎನ್ನುವುದು ಎಲ್ಲಿಯೂ ಕಾಣಲ್ಪಡಲಿಲ್ಲ. ಈಗ ಕಂಡಿರದ ಘಟಾದಿ ಐಕ್ಯವು ಮುಂದಕ್ಕೆ ಕಂಡುಬರಲಾರದು. ಆದ್ದರಿಂದ ಮೊದಲು ಪರಮಾತ್ಮನಿಂದ ಭಿನ್ನನಾಗಿದ್ದ ಜೀವನು ಮುಕ್ತನಾದ ಮೇಲೆ ಆ ಪರಮಾತ್ಮನಿಂದ ಐಕ್ಯವನ್ನು ಹೊಂದುವನು ಎನ್ನುವುದು ಅಯಕ್ತವು. ಹಾಲು ಹೇಗೆ ಮೊಸರಾಗಿ ಬದಲಾವಣೆ ಹೊಂದುವುದೋ ಹಾಗೆ ಎಂಬ ದೃಷ್ಟಾಂತವು ಐಕ್ಯದ ವಿಷಯದಲ್ಲಿ ಅಸಂಗತವಾಗುವುದು. ಏಕೆಂದರೆ ಕ್ಷೀರತ್ವವಿದ್ದಾಗ ಅಲ್ಲಿ ಮೊಸರಿನ ಭಾವವು ಇರುವುದಿಲ್ಲ. ಅಂತೆಯೇ ಹಾಲು ಮೊಸರಾಗಿ ಪರಿವರ್ತನೆಯಾದ ಮೇಲೆ ಅಲ್ಲಿ ಕ್ಷೀರತ್ವವಿರುವದಿಲ್ಲ. ಹೀಗೆ ಭಾಸ್ಕರಾದಿ ಮತವು ನಿರಾಕರಿಸಲ್ಪಟ್ಟಿತು.

ಹಾಗಾದರೆ ಸ್ವಭಾವದಿಂದಲೇ ಪರಮಾತ್ಮನಿಂದ ಭಿನ್ನಾಭಿನ್ನನಾದ ಜೀವನಿಗೆ ಸಂಸಾರದಲ್ಲಿ ಪರಮಾತ್ಮನಿಂದ ಭೇದವೇ ವ್ಯಕ್ತವಾಗಿದೆ. ಅಭೇದವಾದರೂ ಅವಿದ್ಯಾದಿಗಳಿಂದ ಆವರಿಸಲ್ಪಟ್ಟಿರುತ್ತದೆ. ಮುಕ್ತಿಯಲ್ಲಿ ಅವಿದ್ಯಾದಿಗಳು ನಿವೃತ್ತಿ ಹೊಂದಿರುವ ಪ್ರಯುಕ್ತ ಭೇಬಾಭೇದಗಳೆರಡೂ ವ್ಯಕ್ತವಾಗುತ್ತವೆ. ಹೀಗೆ ಹೇಳುವ ಯಾದವಪ್ರಕಾಶಾದಿಗಳ ಮತವನ್ನು ಈಗ ನಿರಾಕರಿಸುತ್ತಾರೆ –

ನ ಚೈವ ಮುಕ್ತೇನ ಹರೇಃ ಪೃಥಕ್ತ್ವ–

ಮೈಕ್ಯಂ ತಥಾ ಸ್ಯಾದಿತಿ ಯುಕ್ತಿಮೇತಿ ।

ಯತೋ ನ ಕುತ್ರಾಪಿ ಭಿದಾಭಿದಾ ಚ

ದೃಷ್ಟಾ ಚಿತಶ್ಚೇತನಯಾ ಕುತಶ್ಚಿತ್ ॥ ೧೨೨ ॥

ಶ್ರೀಹರಿಗೆ ಮುಕ್ತನಿಂದ ಭೇದವೂ ಹಾಗೆಯೇ ಐಕ್ಯವೂ ಆಗುವುದು ಎನ್ನುವ ಮತವು ಯುಕ್ತವೇ ಆಗುವುದಿಲ್ಲ. ಏಕೆಂದರೆ ಚೇತನಕ್ಕೆ ಚೇತನದಿಂದ ಭೇದಾ ಭೇದವು ಯಾವ ದೇಶದಲ್ಲಿಯೂ ಯಾವುದೇ ಪ್ರಮಾಣದಿಂದಲೂ ಕಂಡುಬಂದಿಲ್ಲ. ಇದರಿಂದ 'ಜೀವೇಶ್ವರೌ ನ ಭಿನ್ನಾಭಿನ್ನೌ ಚೇತನತ್ವಾತ್ ದೇವದತ್ತ ಯಜ್ಞದತ್ತವತ್' 'ಈಶ್ವರೋ ಜೀವೇನ ಭಿನ್ನಾಭಿನ್ನೋ ನ ಭವತಿ ಚೇತನತ್ವಾದ್ಯಜ್ಞದತ್ತವತ್' ಇತ್ಯಾದಿ ಅನುಮಾನವು ಸೂಚಿತವಾಯಿತು.

ಇತ್ಥಂ ಮತಾನಿ ಭ್ರಮಜಾನಿ ಯಸ್ಮಾ–

ನ್ಮೋಕ್ಷಂ ಸಮುದ್ದೇಶ್ಯಮಪಿ ಭ್ರಮೇಣ ।

ವಿದುರ್ನ ಸಮ್ಯಗ್ಯದಪೀಹ ಲೌಕಿಕಾಃ

ಸುಖಂ ಮಮ ಸ್ಯಾದ್ಧಿ ಸದೇತಿ ಜಾನತೇ ॥ ೧೨೩ ॥

ಹಿಂದೆ ಹೇಳಿದ ಪ್ರಕಾರದಿಂದ ಜೈನಾದಿ ಮತಗಳು ಭ್ರಾಂತಿಜನ್ಯವು. (ಕೆಲವು ವಂಚಕವು.) ಆದ್ದರಿಂದ ಹೇಯವು ಎಂದು ತಾತ್ಪರ್ಯ. ಈ ಮತ ಪ್ರವರ್ತಕರು ಮುಖ್ಯೋದ್ದೇಶ್ಯವಾದ ಮೋಕ್ಷವನ್ನೂ ಕೂಡ ಸರಿಯಾಗಿ ತಿಳಿಯಲಿಲ್ಲ. ಮತ್ತೆ ವಿಪರೀತವಾಗಿಯೇ ತಿಳಿಯುವರು. ಆದ್ದರಿಂದ ಅವರಿಂದ ಪ್ರಣೀತವಾದ ಮತಗಳು ಭ್ರಮಜನ್ಯಗಳು. ಮತ್ತೆ ಸಾಮಾನ್ಯರಿಂದಲೂ ಚೆನ್ನಾಗಿ ತಿಳಿಯಲ್ಪಟ್ಟ ಪ್ರಮೇಯಗಳ ವಿಷಯದಲ್ಲಿಯೂ ಇವರಿಗೆ ಅಜ್ಞಾನವಿದೆ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ – ಏಕೆಂದರೆ ಪ್ರಾಣಿಗಳಲ್ಲಿ ಲೌಕಿಕ ಬುದ್ಧಿಯಿಲ್ಲದವರೂ ಕೂಡ ನನಗೆ ಯಾವಾಗಲೂ ಸುಖವು ಆಗಲಿ ಎಂಬುದಾಗಿ ತಮ್ಮ ಉದ್ದೇಶವನ್ನು ತಿಳಿಯುತ್ತಾರೆ. ಇದು ಪ್ರಸಿದ್ಧವು. 'ನ ವಯಮೇವ ಭೂಯಾಸ್ಮ' ಎಂಬುದಾಗಿ ತಮ್ಮ ಅಭಾವವನ್ನೇ ಉದ್ದೇಶವನ್ನಾಗಿ ತಿಳಿಯುವುದಿಲ್ಲ. ಮತ್ತೆ ನನಗೆ ಕ್ಲೇಶನಿವೃತ್ತಿಯಷ್ಟೇ ಆಗಲಿ, ಸುಖವಾಗುವುದು ಬೇಡ ಎಂದು ತಿಳಿಯುವುದಿಲ್ಲ. ಆದ್ದರಿಂದ ಲೌಕಿಕ ಜ್ಞಾನವಿಲ್ಲದ ಸಾಮಾನ್ಯರಿಗಿಂತಲೂ ಇವರು ಅತಿಮೂಢರು ಎಂದು ತಾತ್ಪರ್ಯ. ಈ ಪ್ರಕಾರವಾಗಿ ತತ್ರ ಮೋಕ್ಷ ಸ್ವರೂಪಂ ತು ಇತ್ಯಾದಿಯಾಗಿ ಇಲ್ಲಿಯವರೆಗೆ ಪಾದಪ್ರತಿಪಾದ್ಯ ವಿಷಯವನ್ನೂ ಪಾದಗಳಿಗೆ ಸಂಗತಿಯನ್ನೂ ಹೇಳಿದರು.

ಈಗ ಈ ಪಾದದ ಅಧಿಕರಣಗಳಲ್ಲಿನ ಪೂರ್ವಪಕ್ಷ ಸಿದ್ಧಾಂತಯುಕ್ತಿಗಳನ್ನು ವಿವರಿಸುವ ಉದ್ದೇಶದಿಂದ ಪ್ರಾಸಂಗಿಕವಾಗಿ ಸಿಂಹಾವಲೋಕನದಿಂದ ಹಿಂದಿನ

ಎರಡು ಪಾದಗಳ, ಅಂದರೆ ಜ್ಞಾನಪಾದ (ಅಧ್ಯಾಯ ೩, ಪಾದ ೪) ಹಾಗೂ ಕರ್ಮಕ್ಷಯಪಾದಗಳ (ಅಧ್ಯಾಯ ೪, ಪಾದ ೧) ಯುಕ್ತಿಗಳನ್ನು ಹೇಳುತ್ತ, ಈ ಪಾದದಲ್ಲಿಯೂ ಪೂರ್ವಪಕ್ಷ ಸಿದ್ಧಾಂತಯುಕ್ತಿಗಳನ್ನು ಹೇಳುವರು –

ಮೊದಲಿಗೆ ತೃತೀಯಾಧ್ಯಾಯ ಚತುರ್ಥಪಾದದಲ್ಲಿನ ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳನ್ನು ಹೇಳುತ್ತಾರೆ –

ಔದಾರ್ಯಮುಚ್ಚಾವಚಶಕ್ತಿರಾತ್ಮ–

ಸ್ವರೂಪದಾರ್ಢ್ಯಂ ಚ ನಿಜಸ್ವಭಾವಃ ।

ಸ್ವಾತಂತ್ರ್ಯಮಾಪೂರ್ಣವಿಶೇಷಯೋಗ್ಯತಾ

ವಿರೋಧಹಾನಿಶ್ಚ ಚತುರ್ಥಪಾದೇ ॥ ೧೨೪ ॥

ವ್ಯವಸ್ಥಿತಿಸ್ಚವಿಶೇಷಸ್ಥಿತಿಶ್ಚ ನಿಷೇಧಸಾಮಾನ್ಯವಿಧಿಕ್ರಿಯಾಣಾಮ್ ।

ವಿಭಕ್ತತಾ ಚಾತ್ವರಯೈವ ಸಿದ್ಧಿರ್ವಿಪಕ್ಷಸಂಪ್ರಾಪ್ತಿನಿರೋಧಹೇತವಃ ॥೧೨೫॥

'ವಿಪಕ್ಷಸಂಪ್ರಾಪ್ತಿವಿರೋಧಹೇತವಃ' ಎಂದರೆ ಪೂರ್ವಪಕ್ಷ ಸಂಪ್ರಾಪ್ತಿಯನ್ನು ಮಾಡತಕ್ಕ ಯುಕ್ತಿಗಳಿಗೆ ನಿವಾರಕವಾದ ಹೇತುಗಳು. ಅಂದರೆ ಸಿದ್ಧಾಂತಯುಕ್ತಿಗಳು.

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
ಪುರುಷಾರ್ಥಾಧಿಕರಣ	ಔದಾರ್ಯಂ	ವ್ಯವಸ್ಥಿತಿಃ
ಅಸಾರ್ವತ್ರಿಕ್ಯಧಿಕರಣ	ಔದಾರ್ಯಂ	ವ್ಯವಸ್ಥಿತಿಃ
ನಾವಿಶೇಷಾಧಿಕರಣ	ಉಚ್ಚಾವಚಶಕ್ತಿಃ	ಅವಿಶೇಷಃ
ಸ್ತುತ್ಯಧಿಕರಣ	ಆತ್ಮಸ್ವರೂಪದಾರ್ಢ್ಯಂ	ಸ್ಥಿತಿಃ
ಉಭಯಲಿಂಗಾಧಿಕರಣ	ಆತ್ಮಸ್ವರೂಪದಾರ್ಢ್ಯಂ	ಸ್ಥಿತಿಃ
ನ ಚಾಧಿಕಾರಿಕಾಧಿಕರಣ	ನಿಜಸ್ವಭಾವಃ	ನಿಷೇಧಸಾಮಾನ್ಯವಿಧಿ– ಕ್ರಿಯಾಣಾಂ ವಿಭಕ್ತತಾ
ಫಲಶ್ರುತ್ಯಧಿಕರಣ	ಸ್ವಾತಂತ್ರ್ಯಂ	ಅತ್ವರಯೈವ ಸಿದ್ಧಿಃ
ಕೃತ್ಸ್ನಭಾವಾಧಿಕರಣ	ಅಪೂರ್ಣವಿಶೇಷಯೋಗ್ಯತಾ	ಅತ್ವರಯೈವ ಸಿದ್ಧಿಃ
ಅನಾವಿಷ್ಕಾರಾಧಿಕರಣ	ಅಪೂರ್ಣವಿಶೇಷಯೋಗ್ಯತಾ	ಅತ್ವರಯೈವ ಸಿದ್ಧಿ
ವಿಹಿತಾಧಿಕರಣ	ವಿರೋಧಹಾನಿಃ	ಅತ್ವರಯೈವ ಸಿದ್ಧಿಃ
ಮುಕ್ತಿಫಲಾಧಿಕರಣ	ವಿರೋಧಹಾನಿಃ	ಅತ್ವರಯೈವ ಸಿದ್ಧಿಃ

ಈಗ ಚತುರ್ಥಾಧ್ಯಾಯ ಪ್ರಥಮಪಾದದಲ್ಲಿನ ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳನ್ನು ಹೇಳುತ್ತಾರೆ –

ಸುಶಕ್ಯತಾ ಶಶ್ವದತಿಪ್ರಸಿದ್ಧಿರ್ವಿವೇಕವಿನ್ಯಾಸವಿಚಾರಸಂಜ್ಞಾಃ ।

ನಾನಾಪ್ರವೃತ್ತಿಃ ಕೃತಕೃತ್ಯತಾ ಚ ವಿಪಕ್ಷತರ್ಕಾಃ ಸಮತೀತಪಾದೇ ॥೧೨೬॥

ಮಹಾಫಲತ್ವಂ ಪ್ರವಿವಿಕ್ತತಾ ಚ

ಸಂಧಿಗ್ರಹಃ ಸಾಧನಮಾಪ್ತಕೃತ್ಯಮ್ ।

ವಿಶೇಷಕಾರ್ಯಂ ಕೃತಿಸಂಸ್ಥಿತಿಶ್ಚ

ಸುಯುಕ್ತಯೋ ನಿರ್ಣಯಗಾಃ ಸ್ವಪಕ್ಷೇ ॥೧೨೭॥

'ಸ್ವಪಕ್ಷೇ ನಿರ್ಣಯಗಾಃ ಸುಯುಕ್ತಯಃ' ಎಂದರೆ ತಮ್ಮ ಪಕ್ಷದಲ್ಲಿ ನಿಶ್ಚಯವನ್ನು ಮಾಡಿಕೊಡತಕ್ಕ ಶೋಭನವಾದ ಯುಕ್ತಿಗಳು. ಅಂದರೆ ಸಿದ್ಧಾಂತಯುಕ್ತಿಗಳು.

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
ಆವೃತ್ಯಧಿಕರಣ	ಸುಶಕ್ಯತಾ	ಮಹಾಫಲತ್ವಂ
ಆತ್ಮಾಧಿಕರಣ	ಶಶ್ವದತಿಪ್ರಸಿದ್ಧಿಃ	ಪ್ರವಿವಿಕ್ತತಾ
ನ ಪ್ರತೀಕಾಧಿಕರಣ	ವಿವೇಕಃ	ಸಂಧಿಗ್ರಹಃ
ಬ್ರಹ್ಮದೃಷ್ಟ್ಯಧಿಕರಣ	ವಿನ್ಯಾಸಃ	ಸಾಧನಂ
ಆದಿತ್ಯಾಧಿಕರಣ	ವಿಚಾರಃ	ಆಪ್ತಕೃತ್ಯಂ
ಆಸೀನಾಧಿಕರಣ	ಸಂಜ್ಞಾ	ವಿಶೇಷಕಾರ್ಯಂ
ಆಪ್ರಾಯಣಾಧಿಕರಣ	ನಾನಾಪ್ರವೃತ್ತಿಃ	ವಿಶೇಷಕಾರ್ಯಂ
ತದಧಿಗಮಾಧಿಕರಣ	ಕೃತಕೃತ್ಯತಾ	ಸಂಸ್ಥಿತಿಃ

ಈಗ ಚತುರ್ಥಾಧ್ಯಾಯ ದ್ವಿತೀಯಪಾದದಲ್ಲಿನ ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳನ್ನು ಹೇಳುತ್ತಾರೆ –

ವ್ಯಾಮಿಶ್ರತಾ ಕಾರ್ಯಕರತ್ವಮರ್ಥ-

ಕ್ಲೃಪ್ತಿಃ ಸುದಾರ್ಢ್ಯಂ ಪರತಂತ್ರತಾ ಚ ।

ಸಮಾನಧರ್ಮಃ ಕೃತಶೇಷತಾಚ

ಲೋಕೋಪಮಾ ಪೂರ್ವಮತಾನುಸಾರಾಃ ॥ ೧೨೮ ॥

ವಿಶೇಷಸಾಮ್ಯಶ್ರುತಿರಾಢ್ಯತಾ ಚ ಸಮಾನಲೋಪೋ ಮಹಿಮಾವಿಶೇಷಃ ।

ಕೃತಾರ್ಥತಾ ಶಶ್ವದನುಪ್ರವೃತ್ತಿಃ ಸಿದ್ಧಾಂತನಿರ್ಣೇತಿವಿಶಿಷ್ಟಹೇತವಃ ॥ ೧೨೯ ॥

'ಪೂರ್ವಮತಾನುಸಾರಾಃ' ಎಂದರೆ ಪೂರ್ವಪಕ್ಷಯುಕ್ತಿಗಳು. **'ಸಿದ್ಧಾಂತ ನಿರ್ಣೇತಿ ವಿಶಿಷ್ಟಹೇತವಃ'** ಎಂದರೆ ಸಿದ್ಧಾಂತನಿರ್ಣಯಕ್ಕೆ ಉಪಯುಕ್ತವಾದ ಹೇತುಗಳು. ಅಂದರೆ ಸಿದ್ಧಾಂತಯುಕ್ತಿಗಳು.

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
ವಾಗಧಿಕರಣ	ವ್ಯಾಮಿಶ್ರತಾ	ವಿಶೇಷಸಾಮ್ಯಶ್ರುತಿಃ
ಮನಃಪ್ರಾಣಾಧಿಕರಣ	ಕಾರ್ಯಕರತ್ವಂ	ಆಢ್ಯತಾ
ಅಧ್ಯಕ್ಷಾಧಿಕರಣ	ಕಾರ್ಯಕರತ್ವಂ	ಆಢ್ಯತಾ
ಭೂತಾಧಿಕರಣ	ಅರ್ಥಕ್ಲೃಪ್ತಿಃ	ಸಮಾನಲೋಪಃ
ನೈಕಸ್ಮಿನ್ನಧಿಕರಣ	ಅರ್ಥಕ್ಲೃಪ್ತಿಃ	ಸಮಾನಲೋಪಃ
ಸಮನಾಧಿಕರಣ	ಸುದಾಢ್ಯಂ	ಮಹಿಮಾ
ತದಪೀತಾಧಿಕರಣ	ಸುದಾಢ್ಯಂ	ಮಹಿಮಾ
ತಾನಿಪರಾಧಿಕರಣ	ಪರತಂತ್ರತಾ	ವಿಶೇಷಃ
ಅವಿಭಾಗಾಧಿಕರಣ	ಸಮಾನಧರ್ಮಃ	ಕೃತಾರ್ಥತಾ
ತದೋಕೋಧಿಕರಣ	ಕೃತಶೇಷತಾ	ಶಶ್ವದನುಪ್ರವೃತ್ತಿಃ
ಯೋಗ್ಯಧಿಕರಣ	ಲೋಕೋಪಮಾ	ಶಶ್ವದನುಪ್ರವೃತ್ತಿಃ

ನೈಕಸ್ಮಿನ್ನಧಿಕರಣಮ್

॥ ಓಂ ನೈಕಸ್ಮಿನ್ ದರ್ಶಯತೋ ಹಿ ಓಂ ॥

'ಅಗ್ನೌ ಸರ್ವೇ ದೇವಾ ವಿಲೀಯಂತೇ' ಎಂದು ಒಂದು ಶ್ರುತಿ ಹೇಳಿದರೆ, 'ಭೂತೇಷು ದೇವಾ ವಿಲೀಯಂತೇ' ಎಂದು ಮತ್ತೊಂದು ಶ್ರುತಿಯು ಹೇಳುತ್ತದೆ. ಹಾಗಾದರೆ ಎಲ್ಲ ದೇವತೆಗಳೂ ಒಬ್ಬ ಅಗ್ನಿಯಲ್ಲಿಯೇ ಲಯ ಹೊಂದುವರೋ ಅಥವಾ ಐದೂ ಭೂತಗಳಲ್ಲಿ ಲಯ ಹೊಂದುವರೋ ಎಂದು ಸಂಶಯ. ಅಗ್ನಿ ಶ್ರುತಿಯು ನಿರವಕಾಶವೂ, ಭೂತಶ್ರುತಿಯು ಸಾವಕಾಶವೂ ಆದುದರಿಂದ ಒಬ್ಬ ಅಗ್ನಿಯಲ್ಲಿಯೇ ಎಲ್ಲ ದೇವತೆಗಳಿಗೆ ಲಯವೆಂದು ಪೂರ್ವಪಕ್ಷ. ಅದು ಸರಿಯಲ್ಲ, ಐದೂ ಭೂತಗಳಲ್ಲಿ ಲಯವೆಂದು ಸಿದ್ಧಾಂತ. ಏಕೆಂದರೆ – 'ಪೃಥಿವ್ಯಾಮ್ಯಭವೋ ವಿಲೀಯಂತೇ, ವರುಣೇऽಶ್ವಿನೌ, ಅಗ್ನಾವಗ್ನಯೋ, ವಾಯಾವಿಂದ್ರಃ, ಸೋಮ

ಆದಿತ್ಯೋ ಬೃಹಸ್ಪತಿ ರಿತ್ಯಾಕಾಶ ಏವ ಸಾಧ್ಯಾ ವಿಲೀಯಂತೇ' 'ಋಭವಃ ಪೃಥಿವ್ಯಾಂ, ವರುಣ ಆಪಃ, ಅಗ್ನಯಸ್ತೇಜಸಿ, ಮರುತೋ ಮಾರುತೇ, ಆಕಾಶೇ ವಿನಾಯಕಾ ವಿಲೀಯಂತೇ' ಎನ್ನುವ ಶ್ರುತಿಗಳು ಯಥಾಯೋಗ್ಯವಾಗಿ ಐದು ಭೂತಗಳಲ್ಲಿಯೂ ದೇವತೆಗಳಿಗೆ ಲಯವೆಂದು ತೋರಿಸುತ್ತವೆ. ವಾಯಾವಿಂದ್ರಃ ಎನ್ನುವಲ್ಲಿರುವ ವಾಯು ಶಬ್ದವು ಅಮುಖ್ಯವಾದ ಭೂತವಾಯುವನ್ನು ಹೇಳುತ್ತದೆ ಎಂದು ತೋರುತ್ತದೆ. ಏಕೆಂದರೆ ಇಲ್ಲಿ ಪೃಥಿವ್ಯಾದಿ ಪ್ರಕರಣದಲ್ಲಿ ವಾಯುವು ಹೇಳಲ್ಪಟ್ಟಿದೆ. ಸೂತ್ರಕಾರರು ಎಲ್ಲ ಭೂತಗಳಲ್ಲಿ ದೇವತೆಗಳಿಗೆ ಲಯವು ಎಂಬ ಅರ್ಥದಲ್ಲಿ 'ಭೂತೇಷು ತಚ್ಛ್ರುತೇಃ' ಎಂಬ ಸೂತ್ರವನ್ನು ಹೇಳಿದ್ದಾರೆ. ಈ ಕಾರಣದಿಂದಲೂ ಅಮುಖ್ಯ ವಾಯುವೇ ಇಲ್ಲಿ ವಿವಕ್ಷಿತ ಎಂಬ ಪ್ರತೀತಿಯನ್ನು 'ಪ್ರಧಾನ' ಇತ್ಯಾದಿ ವಚನದಿಂದ ನಿವಾರಣೆ ಮಾಡುತ್ತಾರೆ –

ಪ್ರಧಾನವಾಯುಸ್ಹಿಹ ವಾಯುನಾಮಾ
ಭೂತೇಷ್ವಿತಿ ಪ್ರೋಕ್ತಗತೋಽಪಿ ಯುಕ್ತ್ಯಾ ।
ಯಸ್ಮಾತ್ ಶ್ರುತೌ ಪವತೇ ಚೇತಿ ಭೂರಿ–
ಪ್ರೋಕ್ತೋ ಯತೋ ಭೂತಮಾನೀ ಚ ಸೋಽಪಿ ।
ಮಹಾಮಾನೀ ತ್ವಲ್ಪಮಾನೀ ಚ ಯಸ್ಮಾತ್
ತಚ್ಛಬ್ದೇನಾಪ್ಯುಚ್ಯತೇ ತೇನ ಸೋಽಪಿ ॥ ೧೩೦ ॥

ಈ ಶ್ರುತಿಯಲ್ಲಿ ವಾಯು ಎಂಬ ಶಬ್ದದಿಂದ ಪ್ರಧಾನವಾಯುವೇ ವಿವಕ್ಷಿತ. (ನಿಶ್ಚಯಾರ್ಥದಲ್ಲಿ ತು ಶಬ್ದವು). ಭೂತೇಷು ಎಂದು ಭೂತಗಳಲ್ಲಿ ಲಯವನ್ನು ಹೇಳುವ ಸಂದರ್ಭದಲ್ಲಿ ಪೃಥಿವ್ಯಾದಿಗಳಲ್ಲಿ ವಾಯುವು ಸೇರಿದ್ದರೂ, ಉತ್ತಮರಾದ ಇಂದ್ರಾದಿಗಳಿಗೆ ಅಧಮವಾದ ಭೂತವಾಯುವಿನಲ್ಲಿ ಲಯವು ಕೂಡುವುದಿಲ್ಲವೆಂಬ ಯುಕ್ತಿಯಿಂದ ಇಲ್ಲಿ ಪ್ರಧಾನವಾಯುವನ್ನೇ ಗ್ರಹಿಸಬೇಕು. ಇಂದ್ರಾದಿಗಳಿಗೆ ಪ್ರಧಾನ ವಾಯುವಿನಲ್ಲಾದರೂ ಲಯವು ಹೇಗೆ ಕೂಡುತ್ತದೆ ಎಂದರೆ ಯಸ್ಮಾತ್ ಇತ್ಯಾದಿ ವಚನವನ್ನು ಹೇಳುತ್ತಾರೆ– ಪವತೇ (ಸಾ ವಾ ಏಷಾ ದೇವತಾ ಅನಾದಿರ್ಯೋ ಽಯಂ ಪವತೇ) ಎನ್ನುವ ಶ್ರುತಿಯಲ್ಲಿಯೂ, ಬೇರೆ ಶ್ರುತಿಗಳಲ್ಲಿಯೂ, ಪ್ರಧಾನ ವಾಯುವು ಭೂರಿ ಎಂಬ ಶಬ್ದದಿಂದ ಸಕಲ ಜೀವೋತ್ತಮನೆಂದು ಹೇಳಲ್ಪಟ್ಟಿದ್ದಾನೆ. ಆದಕಾರಣ ಆ ವಾಯುವಿನಲ್ಲಿ ಇಂದ್ರಾದಿಗಳಿಗೆ ಲಯವು ಕೂಡುತ್ತದೆ. ಆದ್ದರಿಂದ ಪ್ರಧಾನವಾಯುವೇ ಇಲ್ಲಿ ವಾಯುವೆಂಬ ಹೆಸರಿನಿಂದ ಹೇಳಲ್ಪಟ್ಟಿದ್ದಾನೆ. ಅಲ್ಲದೆ ಪ್ರಧಾನವಾಯುವೂ ಕೂಡ ಭೂತಗಳಿಗೆ ಅಭಿಮಾನಿಯಾಗಿರುವ ಕಾರಣ ಭೂತ ನಾಮಕನೂ ಆಗಿರುತ್ತಾನೆ. ಇದನ್ನೇ ವಿವರಿಸುತ್ತಾರೆ. ಹೇಗೆ ಸಮಗ್ರ ರಾಷ್ಟ್ರದ ಅಧಿಪತಿಯಾದ ರಾಜನು ಆ ರಾಷ್ಟ್ರದಲ್ಲಿಯೇ ಸೇರಿರುವ ಗ್ರಾಮಕ್ಕೂ ಅಧಿಪತಿಯೇ ಆಗುವನೋ ಹಾಗೆಯೇ, ಸರ್ವಾಭಿಮಾನಿಯಾದ ಪ್ರಧಾನವಾಯುವು ಅಲ್ಪವಾದ

ಭೂತವಾಯುವಿಗೂ ಅಭಿಮಾನಿಯೇ ಆಗುವನು. ಆದ್ದರಿಂದ ವಾಯು ಶಬ್ದದಿಂದ ಮಾತ್ರವಲ್ಲ, ಭೂತಶಬ್ದದಿಂದಲೂ ಕೂಡ ಮುಖ್ಯವಾಯುವು ಹೇಳಲ್ಪಡುತ್ತಾನೆ.

ಪರಾಧಿಕರಣಮ್

॥ ಓಂ ತಾನಿ ಪರೇ ತಥಾ ಹ್ಯಾಹ ಓಂ ॥

ಇಲ್ಲಿ ಭೂತಾಭಿಮಾನಿಗಳೇ ಮೊದಲಾಗಿ ಎಲ್ಲ ದೇವತೆಗಳಿಗೂ ಪರಮಾತ್ಮನಲ್ಲಿ ಸಾಕ್ಷಾತ್ತಾಗಿ ಲಯವು ಎಂದು ತೋರುತ್ತದೆ. ಅದರ ಪರಿಹಾರಕ್ಕಾಗಿ ಭಾಷ್ಯದಲ್ಲಿ ಪ್ರಾಣದ್ವಾರೇಣ ಎಂದು ಹೇಳಲಾಗಿದೆ. ಅಲ್ಲಿಯೂ ಪ್ರಾಣನಲ್ಲಿ ಎಲ್ಲ ದೇವತೆಗಳಿಗೆ ಸಾಕ್ಷಾತ್ತಾಗಿ ಲಯವು ಎಂದು ಭಾಸವಾಗುತ್ತದೆ. ಆದಕಾರಣ ಈ ವಿಷಯವನ್ನು ಸ್ಪಷ್ಟ ಪಡಿಸಲು ಇಲ್ಲಿ ವ್ಯಾಖ್ಯಾನ ಮಾಡುತ್ತಾರೆ –

ತಸ್ಮಿಲ್ಲಯಂ ಯಾಂತಿ ಭೂತಾನ್ಯಶೇಷ–
ಕ್ರಮಾವಿರೋಧೇನ ಸ ಏವ ವಿಷ್ಣೌ ।
ಇಂದ್ರಾದೀನಾಂ ತತ್ರ ಲಯಃ ಕ್ರಮಂ ತು
ಪ್ರೋಕ್ತಂ ವಿಶೇಷಾದನುಸೃತ್ಯ ನಾನ್ಯತ್ ॥ ೧೩೧ ॥

ಶ್ರುತ್ಯಾದಿಗಳಲ್ಲಿ ಉಕ್ತವಾದ ಎಲ್ಲ ಕ್ರಮಗಳಿಗೆ ಅನುಸಾರವಾಗಿ ಭೂತಾಭಿಮಾನಿ ದೇವತೆಗಳು ಪ್ರಧಾನವಾಯುವಿನಲ್ಲಿ ಲಯ ಹೊಂದುತ್ತಾರೆ. ಆ ಪ್ರಧಾನವಾಯುವೇ ವಿಷ್ಣುವಿನಲ್ಲಿ ಲಯ ಹೊಂದುತ್ತಾನೆ. ವಾಯಾವಿಂದ್ರಃ ಎನ್ನುವ ಶ್ರುತಿಯಲ್ಲಿಯೂ ಕೂಡ ಇಂದ್ರಾದಿಗಳಿಗೆ ಪ್ರಧಾನವಾಯುವಿನಲ್ಲಿ ಹೇಳಲ್ಪಟ್ಟ ಲಯವು ಸಾಕ್ಷಾತ್ತಲ್ಲ. ವಿಶೇಷವಾಕ್ಯದಿಂದ ಹೇಳಲ್ಪಟ್ಟ ಕ್ರಮವನ್ನು ಅನುಸರಿಸಿ ಲಯವನ್ನು ಹೇಳಬೇಕು. ಅದಕ್ಕೆ ವಿರುದ್ಧವಾದ ರೀತಿಯಲ್ಲಿ ವ್ಯಾಖ್ಯಾನವನ್ನು ಮಾಡತಕ್ಕದ್ದಲ್ಲ.

ಅದೇ ಕ್ರಮವನ್ನು ಸಂಕ್ಷಿಪ್ತವಾಗಿ ಹೇಳುತ್ತಾರೆ –

ತಸ್ಮಾದಶೇಷಾ ಗಿರಿಜಾಂ ಪ್ರವಿಶ್ಯ
ತಯ್ಯೈವ ರುದ್ರಂ ಸಹ ತೇನ ವಾಣೀಮ್ ।
ತಯಾ ಪತಿಂ ಪ್ರಾಪ್ಯ ಸಹೈವ ತೇನ
ಲಯಂ ಹರೌ ಯಾಂತಿ ಸಮಸ್ತಜೀವಾಃ ॥ ೧೩೨ ॥

ಆದ್ದರಿಂದ (ಯಾವಾಗಲೂ ವಿಶೇಷಪ್ರಮಾಣವನ್ನು ಅನುಸರಿಸಿಯೇ ವ್ಯಾಖ್ಯಾನ ಮಾಡಬೇಕಾದ್ದರಿಂದ) ಎಲ್ಲ ದೇವತೆಗಳೂ ವಾರುಣೀಸೌಪರ್ಣಿಯರನ್ನು ಪ್ರವೇಶಿಸಿ, ಅವರೊಂದಿಗೆ ಶೇಷಗರುಡರನ್ನೂ, ಆ ಶೇಷಗರುಡರಿಂದ ಸರಸ್ವತಿಯನ್ನೂ ಹೊಂದಿ, ಸರಸ್ವತಿಯಿಂದ ಕೂಡಿಕೊಂಡೇ ವಾಣೀಪತಿ ಬ್ರಹ್ಮನನ್ನು ಹೊಂದಿ, ಆ ಬ್ರಹ್ಮನಿಂದ ಎಲ್ಲ ಜೀವರು ಶ್ರೀಹರಿಯಲ್ಲಿ ಲಯವನ್ನು ಹೊಂದುತ್ತಾರೆ.

ವಾಯಾವಿಂದ್ರಃ ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಇಂದ್ರಾದಿಗಳಿಗೂ ಪೃಥಿವ್ಯಾದಿ ಭೂತಗಳಿಗೂ ಕ್ರಮದಿಂದಲೇ ವಾಯುವಿನಲ್ಲಿ ಪ್ರವೇಶವೆಂದು ಹಿಂದೆ ಹೇಳಿದ್ದನ್ನು ಇಲ್ಲಿ ವಿವರಿಸುತ್ತಾರೆ. ಅದರಲ್ಲಿ ಶೇಷಮಾರ್ಗ ಹಾಗೂ ಗರುಡಮಾರ್ಗ ಎಂದು ಎರಡು ಮಾರ್ಗಗಳು. ಅದರಲ್ಲಿ ಮೊದಲಿಗೆ ಶೇಷಮಾರ್ಗವನ್ನು ಹೇಳುತ್ತಾರೆ –

ಸೋಮಸ್ತು ವಾರೀಶಯುತೋಽನಿರುದ್ಧಂ

ವಿಶತ್ಯಸೌ ಕಾಮಮಸೌ ತು ವಾರುಣೀಮ್ ।

ಸಾ ಶೇಷದೇವಂ ಸ ಗಿರಂ ಚ ಸೈವ

ವಾಯುಂ ವಿಶತ್ಯಂಜ ಇತೀಹ ನಿರ್ಣಯಃ ॥ ೧೩೩ ॥

ಸೋಮನು ವರುಣನಿಂದ ಸಹಿತನಾಗಿ ಅನಿರುದ್ಧನನ್ನು ಪ್ರವೇಶಿಸುತ್ತಾನೆ. ಈ ಅನಿರುದ್ಧನು ಕಾಮನನ್ನು, ಕಾಮನು ವಾರುಣಿಯನ್ನು, ವಾರುಣಿಯು ಶೇಷನನ್ನು, ಶೇಷನು ಭಾರತಿ(ಸರಸ್ವತಿ)ಯನ್ನು, ಭಾರತಿಯು (ಸರಸ್ವತಿಯು) ವಾಯುವನ್ನು (ಬ್ರಹ್ಮನನ್ನು) ಚೆನ್ನಾಗಿ ಪ್ರವೇಶ ಮಾಡುತ್ತಾರೆ. ಹೀಗೆ ಇಂದ್ರಾದಿ ನಾಲ್ವರ ಮಧ್ಯದಲ್ಲಿ ಸೋಮನಿಗೆ ಭೂತಗಳಲ್ಲಿಯೂ, ಜಲಗಳಿಗೆ ವಾಯುವಿನಲ್ಲಿಯೂ ಪ್ರವೇಶದಲ್ಲಿ ನಿರ್ಣಯವು.

ಹಿಂದೆ 'ಗಿರಿಜಾಂ ರುದ್ರಂ' ಎಂದು ಹೇಳಿದೆ. ಈಗ 'ಗಿರಂ ವಾಯುಂ' ಎಂದಿದೆ. ಈ ನಾಲ್ಕು ಶಬ್ದಗಳು ಪಾರ್ವತಿ, ರುದ್ರ, ಭಾರತೀ, ವಾಯುದೇವರು ಎಂಬ ಪ್ರಸಿದ್ಧವಾದ ಅರ್ಥವುಳ್ಳವು ಎಂಬ ಪ್ರತೀತಿಯನ್ನು ನಿವಾರಿಸಲು ಹೇಳುತ್ತಾರೆ –

ಉಮಾಗಿರೀಶಾವಿತಿ ಭಾರತೀರಾವಿತಿ ಸ್ಮ ವಾಗ್ವೇದಗತಾ ಬ್ರವೀತಿ ।

ಅಹೀಂದ್ರಪತ್ನೀಮಹಿಪಂ ವಿರಿಂಚಪತ್ನೀಂ ವಿರಿಂಚ ಚ ವಿಮುಕ್ತಿಕಾಲೇ ॥೧೩೪॥

ವೇದದಲ್ಲಿರತಕ್ಕ ಉಮಾ, ಗಿರೀಶ, ಭಾರತೀ, ಈರ (ವಾಯು) ಎಂಬ ನಾಲ್ಕು ಶಬ್ದಗಳು ವಿಮುಕ್ತಿಯನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಶೇಷಪತ್ನಿಯಾದ ಸೌಪರ್ಣಿಯನ್ನೂ, ಶೇಷನನ್ನೂ, ಸರಸ್ವತಿಯನ್ನೂ, ಬ್ರಹ್ಮನನ್ನೂ ಕೂಡ ಹೇಳುತ್ತವೆ.

ತ ಏವ ಯತ್ತತ್ಪದಮಾಪ್ನುವಂತಿ ತತ್ಕಾಲ ಏತಾನ್ ಸಮುಪಾಸ್ಯ ಜೀವಾಃ ।

ಬ್ರಹ್ಮತ್ವಕಾಲೇ ಪ್ರವಿಶಂತಿ ಚೈತಾನಿತಿ ಸ್ಮ ವಾಕ್ ತಾದೃಶತಾಮುಪೈತಿ ॥೧೩೫॥

ಆ ಉಮಾದಿಗಳೇ ವಾರುಣ್ಯಾದಿ ಪದಗಳನ್ನು ಉತ್ತರ ಕಲ್ಪದಲ್ಲಿ ಹೊಂದುವ ನಿಮಿತ್ತದಿಂದ ಉಮಾದಿ ಶಬ್ದಗಳು ವಾರುಣ್ಯಾದಿ ವಾಚಕಗಳು. ಪ್ರಸಿದ್ಧ ಪದವನ್ನು ಬಿಟ್ಟು ಅಪ್ರಸಿದ್ಧವಾದುದನ್ನು ಪ್ರಯೋಗಿಸುವುದರಿಂದ ಪ್ರಯೋಜನವೇನು ಎಂದರೆ, ತತ್ಕಾಲ ಎಂಬ ವಚನದಿಂದ ಹೇಳುತ್ತಾರೆ – ಜೀವರು ಉಮಾತ್ವಾದಿ ಕಾಲದಲ್ಲಿ ಈ ಉಮಾದಿ ದೇವತೆಗಳನ್ನು ಉಪಾಸನೆ ಮಾಡಿ, ವಾಯ್ವಾದಿ ದೇವತೆಗಳಿಗೇನೆ

ಬ್ರಹ್ಮತ್ವಾದಿಗಳು ಬರುವ ಕಾಲದಲ್ಲಿ, ವಾರುಣ್ಯಾದಿಗಳನ್ನು ಪ್ರವೇಶಿಸುತ್ತಾರೆ. ಈ ಕಾರಣದಿಂದ ವೇದವಾಣಿಯು ಉಮಾದಿ ಶಬ್ದವತ್ವವನ್ನು ಹೊಂದುತ್ತದೆ.

ಈಗ ಗರುಡಮಾರ್ಗವನ್ನು ಹೇಳುತ್ತಾರೆ –

ಸೂರ್ಯೋ೭ಗ್ನಿಯುಕ್ತೋ ಗುರುಮಾಪ್ಯ ತೇನ
ಶಕ್ರಂ ಸಹೈತೇನ ಸುಪರ್ಣಪತ್ನೀಮ್ ।
ತಯಾ ಸುಪರ್ಣಂ ಸಹ ತೇನ ವಾಣೀಂ
ಬ್ರಹ್ಮಾಣಮೇತದ್ಗತ ಏವ ಯಾತಿ ।। ೧೩೬ ।।

ಅಗ್ನಿಯಿಂದ ಕೂಡಿರುವ ಸೂರ್ಯನು (ಅಗ್ನಿಗೆ ಸೂರ್ಯನಲ್ಲಿ ಲಯವೆಂದು ಹೇಳಿದಂತಾಯಿತು) ಬೃಹಸ್ಪತ್ಯಾಚಾರ್ಯರನ್ನು ಹೊಂದಿ, ಬೃಹಸ್ಪತಿಸಹಿತನಾಗಿ ದೇವೇಂದ್ರನನ್ನು ಹೊಂದಿ, ದೇವೇಂದ್ರಸಹಿತನಾಗಿ ಗರುಡ ಪತ್ನಿ ಸೌಪರ್ಣಿಯನ್ನು ಹೊಂದಿ, ಸೌಪರ್ಣಿಯೊಂದಿಗೆ ಗರುಡನನ್ನು, ಗರುಡನೊಂದಿಗೆ ವಾಣಿ ಅಂದರೆ ಸರಸ್ವತಿಯನ್ನು, ವಾಣೀಗತನಾಗಿಯೇ ಬ್ರಹ್ಮನನ್ನು ಹೊಂದುತ್ತಾನೆ.

ಹೀಗೆ ಇಂದ್ರ ಆದಿತ್ಯ ಬೃಹಸ್ಪತಿಯರಿಗೆ ಕ್ರಮದಿಂದ ಲಯವನ್ನು ಹೇಳಿದ್ದರಿಂದ ಇಂದ್ರನಿಗೆ ಸೌಪರ್ಣಿಯಲ್ಲಿ, ಆದಿತ್ಯನಿಗೆ ಬೃಹಸ್ಪತಿಯಲ್ಲಿ, ಬೃಹಸ್ಪತಿಗೆ ಇಂದ್ರನಲ್ಲಿ, ಲಯವನ್ನು ಹೇಳಿದಂತಾಯಿತು. ಅದೇ ರೀತಿ ಸೂರ್ಯೋ೭ಗ್ನಿಯುಕ್ತೋ ಎಂಬ ವಚನದಿಂದ ಭೂತಗಳಲ್ಲಿ ತೇಜಸ್ಸಿಗೆ ಸೂರ್ಯದ್ವಾರಾ ವಾಯುವಿನಲ್ಲಿ ಲಯವು ಎಂದು ಹೇಳಿದಂತೆ ಆಯಿತು.

ಹಾಗಾದರೆ ಇದು 'ಇಂದ್ರ ಉಮಾಯಾಮುಮಾ ರುದ್ರೇ ವಿಲೀಯತೇ' ಎಂಬ ಶ್ರುತಿಗೆ ವಿರುದ್ಧವಾಗಿದೆ ಎಂದರೆ –

ಇಂದ್ರಪ್ರವೇಶಸ್ತು ಯದೋಚ್ಯತೇ೭ತ್ರ
ತದಾ ಹ್ಯುಮೇತ್ಯೇವ ಸುಪರ್ಣಪತ್ನೀ ।
ಉಕ್ತಾ ಸುಪರ್ಣಶ್ಚ ಗಿರೀಶನಾಮ್ನಾ
ತತೋ ವಿರೋಧಶ್ಚ ನ ಕಶ್ಚನಾತ್ರ ।। ೧೩೭ ।।

ಉಮೆಯಲ್ಲಿ ಇಂದ್ರಪ್ರವೇಶವನ್ನು ಹೇಳುವ ಶ್ರುತಿಯಲ್ಲಿ ಉಮಾ ಎನ್ನುವ ಪದದಿಂದ ಗರುಡನ ಪತ್ನಿಯಾದ ಸೌಪರ್ಣಿಯೇ ಹೇಳಲ್ಪಡುತ್ತಾಳೆ. ಗಿರೀಶ ಅಥವಾ ರುದ್ರ ಎಂಬ ಶಬ್ದದಿಂದ ಗರುಡನು ಹೇಳಲ್ಪಡುತ್ತಾನೆ. ಇಂದ್ರನಿಗೆ ಸೌಪರ್ಣಿಯಲ್ಲಿ ಲಯವು ಎನ್ನುವುದು ಪ್ರಬಲಶ್ರುತಿಸಿದ್ಧವು. ಆದ್ದರಿಂದ ಈ ವಿಷಯದಲ್ಲಿ ಯಾವ ವಿರೋಧವೂ ಇಲ್ಲವೇ ಇಲ್ಲ. ಇಲ್ಲಿ ಉಮಾದಿ ಪದವು ನ್ಯೂನಾಧಿಕ್ಯರಹಿತವಾಗಿ ಸೌಪರ್ಣ್ಯಾದಿ ಪದಸಾದೃಶವನ್ನು ಹೊಂದಿರುವುದರಿಂದ ಹೀಗೆ ಅರ್ಥಮಾಡಬೇಕು.

ಹಿಂದೆ 'ತಾನಿ ಪರೇ' ಎಂದು ಭೂತಾಭಿಮಾನಿ ದೇವತೆಗಳಿಗೆ ಮುಖ್ಯಪ್ರಾಣ ದ್ವಾರಾ ಪರಮಾತ್ಮನಲ್ಲಿ ಲಯವೆಂದು ಹೇಳಿದೆ. ಈಗ ಹಿರಣ್ಯಗರ್ಭನಲ್ಲಿ ಲಯ ಪ್ರಕಾರವನ್ನು ಹೇಳುತ್ತಾರೆ –

ಭೃಗ್ವಾದಯೋ ದಕ್ಷಮವಾಪ್ಯ ತೇನ

ಪ್ರಾಪ್ಯೇಂದ್ರಮೇತೇನ ಸುಪರ್ಣಪತ್ನೀಮ್ ।

ವಿಶಂತಿ ಯೇ ಮನವೋ ರಾಜಮುಖ್ಯಾ

ಮನುಂ ಪ್ರವಿಶ್ಯಾತ್ರ ಗತಾ ಮಹೇಂದ್ರಮ್ ॥ ೧೩೮ ॥

ಭೃಗು ವಸಿಷ್ಠ ಮರೀಚ್ಯಾದಿ ಋಷಿಗಳು ದಕ್ಷಪ್ರಜಾಪತಿಯನ್ನು ಹೊಂದುತ್ತಾರೆ. ಆ ದಕ್ಷಪ್ರಜಾಪತಿಯು ಇಂದ್ರನನ್ನು, ಇಂದ್ರನು ಸೌಪರ್ಣಿಯನ್ನು ಪ್ರವೇಶಿಸುತ್ತಾರೆ. ವೈವಸ್ವತಾದಿ ಮನುಗಳು, ಪ್ರಿಯವ್ರತಾದಿ ರಾಜಶ್ರೇಷ್ಠರು ಸ್ವಾಯಂಭುವ ಮನುವನ್ನು ಪ್ರವೇಶಿಸಿ, ಅವನಲ್ಲಿಯೇ ಇರುತ್ತ ದೇವೇಂದ್ರನನ್ನು ಪ್ರವೇಶಿಸುತ್ತಾರೆ.

ಭೂತಗಳಲ್ಲಿ ಪೃಥಿವೀ ಆಕಾಶಗಳಿಗೆ ಲಯಪ್ರಕಾರವನ್ನು ಹೇಳುತ್ತಾರೆ –

ಆಕಾಶ ಉರ್ವೀ ಚ ಗುರುಂ ಪ್ರವಿಶ್ಯ

ತೇನೈವ ಯಾತಃ ಪುರುಹೂತದೇವಮ್ ।

ಸನಾದಯೋ ಯತಯಃ ಕಾಮಮೇವ

ವಿಶಂತಿ ಶಿಷ್ಟಾ ಅಪಿ ಹವ್ಯವಾಹಮ್ ॥ ೧೩೯ ॥

ಆಕಾಶ ಹಾಗೂ ಭೂಮಿಯ ಅಭಿಮಾನಿಗಳು ಬೃಹಸ್ಪತಿಯನ್ನು ಪ್ರವೇಶಮಾಡಿ ಆ ಬೃಹಸ್ಪತಿಯೊಂದಿಗೇ ಇಂದ್ರನನ್ನು ಹೊಂದುತ್ತಾರೆ. ಸನತ್ಕುಮಾರನಿಂದ ವ್ಯತಿರಿಕ್ತರಾದ ಸನಂದ ಸುಜಾತ ಮುಂತಾದ ಯತಿಗಳು (ಸನತ್ಕುಮಾರ ಕಾಮನ ಅವತಾರನಾದ್ದರಿಂದ ಅವನನ್ನು ಇಲ್ಲಿ ಸೇರಿಸಿಲ್ಲ) ಕಾಮನನ್ನೇ ಪ್ರವೇಶಿಸುತ್ತಾರೆ. ಕಾಮನಿಗೆ ವಾರುಣಿಯಲ್ಲಿ ಲಯವೆಂದು ಈಗಾಗಲೇ ಹೇಳಿಯಾಗಿದೆ. ಹಿಂದೆ ಹೇಳಿದವರಿಂದ ಅವಶಿಷ್ಟರಾದವರೂ ಕೂಡ ಅಗ್ನಿದ್ವಾರಾ ಸೂರ್ಯನನ್ನು ಪ್ರವೇಶ ಮಾಡುತ್ತಾರೆ. ಇದರಿಂದ 'ಅಗ್ನೌ ಸರ್ವೇ ದೇವಾ ವಿಲೀಯಂತೆ' ಎನ್ನುವುದಕ್ಕೆ ವಿಷಯವು ತೋರಿಸಲ್ಪಟ್ಟಿತು.

ಇದಕ್ಕೆ ಅಪವಾದವನ್ನು ಹೇಳುತ್ತಾರೆ –

ವರ್ಣಾಶ್ರಮಾಚಾರರತಾ ಮನುಷ್ಯಾ

ಧರ್ಮಂ ಮನುಂ ಸೋಽಪಿ ಸಮೇತಿ ಕಾಲೇ ।

ತಮೇವ ಸರ್ವೇ ಪಿತರಃ ಸುರಾನುಗಾಃ

ಸರ್ವೇ ಕುಬೇರಂ ಸ ಚ ಸೋಮಮೇವ ।। ೧೪೦ ।।

ತಮ್ಮ ತಮ್ಮ ವರ್ಣ ಮತ್ತು ಆಶ್ರಮಗಳ ಆಚಾರಗಳಲ್ಲಿ ಆಸಕ್ತರಾದ ಮನುಷ್ಯರು ಯಮನನ್ನು ಹೊಂದುತ್ತಾರೆ. ಯಮಧರ್ಮನು ಮೋಕ್ಷಕಾಲದಲ್ಲಿ ಸ್ವಾಯಂಭುವ ಮನುವನ್ನು ಹೊಂದುತ್ತಾನೆ. ಎಲ್ಲ ಪಿತೃಗಳೂ ಆ ಯಮನನ್ನೇ ಹೊಂದುತ್ತಾರೆ. ಎಲ್ಲ ಗಂಧರ್ವಾದಿಗಳು ಕುಬೇರನನ್ನು ಹೊಂದುತ್ತಾರೆ. ಆ ಕುಬೇರನು ಚಂದ್ರನನ್ನೇ ಹೊಂದುತ್ತಾನೆ. ಈ ಪ್ರಸಂಗದಿಂದ ಮುಕ್ತಿಯಲ್ಲಿ ಪ್ರವೇಶಮಾತ್ರವನ್ನು ಹೇಳಿದೆ, ದೇಹಲಯವನ್ನಲ್ಲ. ಏಕೆಂದರೆ ಅವರಿಗೆ ಉತ್ಕ್ರಮಣವಿದೆ. ವರ್ಣಾಶ್ರಮಾಚಾರರತಾ ಎನ್ನುವುದರಿಂದ ಮನುಷ್ಯರಿಗೆ ಮುಕ್ತಿಯಲ್ಲಿಯೂ ವರ್ಣಾಶ್ರಮವತ್ವವುಂಟು ಎಂದು ಸೂಚಿತವಾಗಿದೆ.

ವಿಮುಕ್ತಿಕಾಲೇ ಪ್ರವಿಶಂತಿ ಅಭೀಕ್ಷ್ಣಂ
ಭೋಗಾಂಶ್ಚ ತದ್ದೇಹಗತಾಃ ಪ್ರಭುಂಜತೇ ।
ಆನಂದಸುವ್ಯಕ್ತಿರಮುತ್ರ ತೇಷಾಂ
ಭವತಿ .....

ಈ ರೀತಿಯಾಗಿ ಎಲ್ಲರೂ ಹಿಂದೆ ಹೇಳಿದ ಪ್ರಕಾರ ಮೋಕ್ಷಕಾಲದಲ್ಲಿ ತಮಗಿಂತ ಉತ್ತಮರನ್ನು ಪ್ರವೇಶಿಸುತ್ತಾರೆ. ಆವಿಷ್ಟವಾದ ಪಿಶಾಚಿಯು ಹೇಗೋ ಹಾಗೆ ಅವರು ತಾವು ಪ್ರವೇಶಿಸಿದ ದೇಹದಲ್ಲಿದ್ದವರಾಗಿ ಭೋಗಗಳನ್ನೂ ಕೂಡ ಭೋಗಿಸುತ್ತಾರೆ. ಉತ್ತಮರಲ್ಲಿ ಪ್ರವೇಶದಿಂದ ಅವರಿಗೆ ಆನಂದದ ಅಭಿವ್ಯಕ್ತಿಯು ಆಗುವುದು.

ಪ್ರವಿಷ್ಟರಾದವರಿಗೆ ಪುನಃ ನಿರ್ಗಮನವು ಇದೆಯೋ ಇಲ್ಲವೋ ಎಂದರೆ –

..... ಅತಶ್ಚೇಷ್ಟತ ಏವ ನಿರ್ಗತಾಃ ।। ೧೪೧ ।।

ಕ್ರೀಡಂತಿ ಭೂಯಶ್ಚ ಸಮಾವಿಶಂತಿ
ತಾನೇವ ಸಾಯುಜ್ಯಮಿದಂ ವದಂತಿ ।

ಉತ್ತಮರ ಶರೀರವನ್ನು ಪ್ರವೇಶಿಸಿ ಆನಂದಾದಿ ಭೋಗವನ್ನು ಅನುಭವಿಸುವ ಅವರು ತಮಗೆ ಬೇಕೆನಿಸಿದಾಗ ಆ ಶರೀರದಿಂದ ಹೊರಬಂದು ಕ್ರೀಡಿಸಿ, ಮತ್ತೆ ಆ ಶರೀರವನ್ನೇ ಪ್ರವೇಶಿಸುತ್ತಾರೆ. ಇದನ್ನೇ ಸಾಯುಜ್ಯ ಮುಕ್ತಿಯೆಂದು ಪುರಾಣಗಳು ಹೇಳುತ್ತವೆ. (ಸಯುಜಾಂ ಭಾವಃ ಸಾಯುಜ್ಯಂ ಎಂಬ ವ್ಯುತ್ಪತ್ತಿಯಿಂದ ಒಂದೇ ದೇಹದಲ್ಲಿ ಜೊತೆಯಲ್ಲಿದ್ದು ಅನುಭವಿಸುವುದಕ್ಕೆ ಸಾಯುಜ್ಯವೆಂದು ಹೆಸರು).

ಹಾಗಾದರೆ ಸಾಯುಜ್ಯಹೀನರ ಪ್ರವೃತ್ತಿ ಯಾವರೀತಿಯದು ಎಂದರೆ –

ಸಾಯುಜ್ಯಹೀನಾಸ್ತು ಲಯೇ ತು ಸರ್ವೇ
ಪ್ರೋಕ್ತೇನ ಮಾರ್ಗೇಣ ವಿಶಂತಿ ಸೃಷ್ಟೌ ।। ೧೪೨ ।।

ಬಹಿಶ್ಚ ನಿರ್ಯಾಂತಿ ತತೋಽನ್ಯದಾಪಿ

ಸಾಯುಜ್ಯಭಾಜಾಂ ಭವತಿ ಪ್ರವೇಶಃ ।

ಸಾಯುಜ್ಯರಹಿತರಾದವರೂ ಹಾಗೂ ಎಲ್ಲರೂ ಪ್ರಲಯಕಾಲದಲ್ಲಿ ಹಿಂದೆ ಹೇಳಿದ ಮಾರ್ಗದಿಂದ ಸ್ವೋತ್ತಮರನ್ನು ಪ್ರವೇಶಿಸುತ್ತಾರೆ. ಸೃಷ್ಟಿಕಾಲದಲ್ಲಿ ಅವರಿಂದ ಹೊರಗೆ ಬರುತ್ತಾರೆ. ಆದರೆ ಸಾಯುಜ್ಯವನ್ನು ಹೊಂದಿದವರಿಗೆ ಪ್ರಲಯಕಾಲ ಮಾತ್ರವಲ್ಲದೆ ಬೇರೆ ಕಾಲದಲ್ಲಿಯೂ ಸ್ವೋತ್ತಮರಲ್ಲಿ ಪ್ರವೇಶವುಂಟು.

ಉಕ್ತಂ ಸಮಸ್ತಂ ಪರಮಶ್ರುತೌ ಹಿ

ಪ್ರೋಕ್ತಂ ಚ ಸರ್ಗಕ್ರಮತೋ ವಿಪರ್ಯಯಃ ॥ ೧೪೩ ॥

ಮುಕ್ತೌ ಲಯೇ ಯದ್ವದಥೋ ಲಯಶ್ಚ

ವಿಪರ್ಯಯೇಣತ್ಯವದ್ಗಿರಾಂ ಪ್ರಭುಃ ।

ಇಲ್ಲಿ ಹೇಳಲ್ಪಟ್ಟ ಲಯಪ್ರಕಾರವೆಲ್ಲವೂ ಪರಮಶ್ರುತಿಯಲ್ಲಿಯೂ ಹೇಳಿದೆ. ಮುಕ್ತಿಯಲ್ಲಿ ಸೃಷ್ಟಿಕ್ರಮಕ್ಕಿಂತ ವಿಪರೀತ ಕ್ರಮವು, ಪ್ರಲಯದಲ್ಲಿ ಹೇಗೋ ಹಾಗೆ. ಅಂದರೆ ಯಾರು ಯಾರಿಂದ ಹುಟ್ಟಿರುತ್ತಾರೋ ಅವರಿಗೆ ಅವರಲ್ಲಿ ಮುಕ್ತಿಯು (ಅಪವಾದವಿಲ್ಲದಿದ್ದರೆ) ಎಂದು ತಿಳಿಯಬೇಕು. ಹೀಗೆಂದು (ಲಯದಲ್ಲಿ ಸೃಷ್ಟಿ ಕ್ರಮಕ್ಕಿಂತ ವಿಪರೀತಕ್ರಮವೆಂದು) ವೇದವಚನಗಳಿಗೆ ಪ್ರಭುವಾದ ಸೂತ್ರಕಾರರು 'ವಿಪರ್ಯಯೇಣ ತು ಕ್ರಮೋಽತ ಉಪಪದ್ಯತೇ ಚ' ಎನ್ನುವ ಸೂತ್ರದಿಂದ ಉಪಪಾದಿಸಿದ್ದಾರೆ.

ಲಯದಲ್ಲಿ ಸೃಷ್ಟಿಕ್ರಮಕ್ಕಿಂತ ವಿಪರೀತಕ್ರಮವಿರಲಿ. ಆದರೆ ಮುಕ್ತಿಯಲ್ಲಿಯೂ ಹಾಗೆಯೇ ತಿಳಿಯಬೇಕು ಎನ್ನುವುದಕ್ಕೆ ನಿಯಾಮಕವು ಯಾವುದು ಎಂದರೆ –

ಲಯೋ ಯತೋ ಮುಕ್ತಿರಿಯಂ ಸುರಾಣಾಂ

ಭೋಗೋ ವಿಶೇಷೇಣ ಚ ಯಂ ವದಿಷ್ಯತಿ ॥ ೧೪೪ ॥

ಏಕೆಂದರೆ ದೇವತೆಗಳಿಗೆ ಲಯವೇ ಮುಕ್ತಿಯು. ಮನುಷ್ಯರಂತೆ ಮೊದಲೇ ದೇಹದಿಂದ ಉತ್ಕ್ರಾಂತಿಯಲ್ಲ. ಆದ್ದರಿಂದ ಹಿಂದೆ ಹೇಳಿದ್ದು ಯುಕ್ತವು.

ಹಾಗಾದರೆ ಈ ಮೊದಲು ಮುಕ್ತರಿಗೆ ಭೋಗಾದಿಗಳನ್ನು ಸಮರ್ಥಿಸಲಾಗಿದೆ. ಈಗಲಾದರೂ ಲಯವೇ ಮುಕ್ತಿಯೆಂದು ಹೇಳಿದೆ. ಆದ್ದರಿಂದ ಪೂರ್ವಾಪರ ವಿರೋಧ ಬರುವುದಿಲ್ಲವೇ ಎಂದರೆ –

ದೇವಪದಕ್ಕಿಂತಲೂ ಅತಿಶಯವಾಗಿ ಆನಂದಾನುಭವವೇ ಮುಕ್ತಿಯು. ದೇಹ ಹಾನಿರೂಪವಾದ ಮುಕ್ತಿಯು ಲಯಕ್ಕಿಂತ ವಿಲಕ್ಷಣವಲ್ಲವೆಂಬ ಅಭಿಪ್ರಾಯದಿಂದ ದೇಹಲಯವು ಮುಕ್ತಿಯೆಂದು ಹೇಳಿದ್ದು, ಹೊರತು ಭೋಗಾದಿಗಳು ಇಲ್ಲವೆನ್ನುವ

ಅಭಿಪ್ರಾಯದಿಂದ ಅಲ್ಲ. ಹಾಗಾದರೆ ಭೋಗವು ಮುಕ್ತಿಯೆಂದು ಸೂತ್ರಕಾರರು ಹೇಳಿಲ್ಲವೆಂದರೆ, ಅದು ಸರಿಯಲ್ಲ. ಏಕೆಂದರೆ ಭೋಗವು ಮುಕ್ತಿಯೆಂದು ಸೂತ್ರಕಾರರು ನಾಲ್ಕನೆಯ ಪಾದದಲ್ಲಿ ಹೇಳುವರು.

ಪ್ರಮಾಣಾಂತರವನ್ನೂ ಹೇಳುತ್ತಾರೆ –

ಉಕ್ತಶ್ಚ ಬಿಂಬಪ್ರತಿಬಿಂಬಭಾವಃ

ಪೈಂಗಿಶ್ರುತಾವುಕ್ತಲಯಾನುಸಾರತಃ ।

ಬಿಂಬೇ ಲಯೋ ಯನ್ನಿಯತಶ್ಚ ಮುಕ್ತೌ

ಚಿದಾತ್ಮನಾಂ ತದ್ವಶತಾ ಚ ಸರ್ವದಾ ॥ ೧೪೫ ॥

ಹಿಂದೆ ಹೇಳಿದಂತೆ ದೇವತೆಗಳ ಲಯಕ್ರಮವನ್ನು ಅನುಸರಿಸಿ ಪೈಂಗಿಶ್ರುತಿಯಲ್ಲಿ ಬಿಂಬ–ಪ್ರತಿಬಿಂಬ ಭಾವವು ಹೇಳಿದೆ. ಯಾವುದರಲ್ಲಿ ಲಯವೋ ಅದು ಬಿಂಬ, ಲಯವಾಗುವುದು ಪ್ರತಿಬಿಂಬ. ಮುಕ್ತಿಯಲ್ಲಿ ಬಿಂಬದಲ್ಲಿ ಲಯವೆನ್ನುವುದು ಯಾವಾಗಲೂ ಅಂದರೆ ಮುಕ್ತ್ಯನಂತರದಲ್ಲಿಯೂ ನಿಯತವೆಂದೂ, ಚೇತನರಿಗೆ ಯಾವಾಗಲೂ ಬಿಂಬದ ಅಧೀನತ್ವವಿರುವುದೆಂದೂ ಪ್ರಮಾಣಗಳಿಂದ ಸಿದ್ಧವಾಗಿದೆ.

ಎಲ್ಲ ಭೂತಗಳಿಗೂ ಪ್ರಾಣನಲ್ಲಿ ಲಯ, ಪ್ರಾಣನಿಗೆ ವಿಷ್ಣುವಿನಲ್ಲಿ ಲಯ ಎಂದು ಹೇಳಿದ್ದು ಸರಿಯಲ್ಲ. ಏಕೆಂದರೆ 'ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಂ' ಎಂಬ ಶ್ರುತಿಯ ವಿರೋಧವಿದೆ. ಬಿಂಬದಲ್ಲಿ ಪ್ರತಿಬಿಂಬದ ಲಯ ಎನ್ನುವುದೂ ಅಯುಕ್ತ. ಏಕೆಂದರೆ ಪ್ರಾಣನು ಭೂತವಾದ ತೇಜಸ್ಸಿಗೆ ಪ್ರತಿಬಿಂಬನಲ್ಲ ಎಂದರೆ –

ತೇಜೋಽಭಿಧಾಂ ತು ಶ್ರಿಯಮಾಪ್ಯ ವಿಷ್ಣು–

ಮಗ್ರೇ ತತಃ ಪುತ್ರತಯೈವ ವಾಯುಃ ।

ಆಪ್ತಃ ಪ್ರಸೂತಃ ಪುನರೇವ ವಿಷ್ಣುಂ

ಪ್ರವಿಶ್ಯ ಮುಕ್ತಃ ಪ್ರಲಯೇಽತ್ರ ತಿಷ್ಠತಿ ॥ ೧೪೬ ॥

ವಾಯುವು ಪ್ರಲಯಕಾಲದಲ್ಲಿ ತೇಜೋನಾಮಕಳಾದ ಮಹಾಲಕ್ಷ್ಮಿಯಲ್ಲಿ ಲೀನನಾಗಿ ವಿಷ್ಣುವನ್ನು ಹೊಂದುವನು. ಸೃಷ್ಟಿಕಾಲವು ಸಂಭವಿಸಿದಾಗ ಎಲ್ಲರಿಗಿಂತ ಮೊದಲು ವಿಷ್ಣುವಿನ ಪುತ್ರತ್ವದಿಂದ (ಅಂದರೆ ಹಿರಣ್ಯಗರ್ಭತ್ವದಿಂದ) ಹುಟ್ಟುವನು. ಮತ್ತೆ ಪ್ರಲಯದಲ್ಲಿ ಆ ವಿಷ್ಣುವನ್ನು ಪ್ರವೇಶಿಸಿ ಮುಕ್ತನಾಗಿ ಆ ವಿಷ್ಣುವಿನಲ್ಲಿಯೇ ಇರುತ್ತಾನೆ. ತೇಜಃ ಶಬ್ದವು ಲಕ್ಷ್ಮೀವಾಚಕವಾದ್ದರಿಂದ ಹಿಂದೆ ಹೇಳಿದ ಶ್ರುತಿ ವಿರೋಧವಿಲ್ಲ.

ಮುಕ್ತರಿಗೆ ಸ್ವೋತ್ತಮರಾದ ದೇವತೆಗಳಲ್ಲಿ ಪ್ರವೇಶವು ಹೇಳಲ್ಪಟ್ಟಿತು. ಇಷ್ಟೇ

ಅಲ್ಲ, ಮತ್ತೆ ಭಗವಂತನಲ್ಲಿಯೂ ಪ್ರವೇಶವಿದೆ. ಮುಕ್ತರಿಗೆ ಹೇಳಲ್ಪಟ್ಟ ಭೋಗವು ಆನಂದಕ್ಕೆ ಜನಕವಲ್ಲ, ಮತ್ತೆ ವ್ಯಂಜಕವೇ. ಮುಕ್ತರ ಆನಂದವಾದರೂ ಸ್ವರೂಪ ಭೂತವಾದುದು ಎಂದು ಹೇಳುತ್ತಾರೆ –

ಸರ್ವೇಽಪಿ ತೇ ಮುಕ್ತಗಣಾ ಅಮಂದ–

ಸಾಂದ್ರಂ ನಿಜಾನಂದಮಶೇಷತೋಽಪಿ ।

ಭುಂಜಂತ ಏವಾಸತ ಈಶದೇಹೇ

ಲಯೇಽಥ ಸರ್ಗೇ ಬಹಿರೇವ ಯಾಂತಿ ॥ ೧೪೭ ॥

ಸಮಸ್ತವಾದ ಮುಕ್ತವರ್ಗದವರೂ ಅತ್ಯಂತ ಪೂರ್ಣವಾದ ನಿಬಿಡವಾದ ಸ್ವರೂಪಾನಂದವನ್ನು ಪೂರ್ಣವಾಗಿ ಅನುಭವಿಸುತ್ತಲೇ ಪ್ರಲಯದಲ್ಲಿ ಶ್ರೀಹರಿಯ ಶರೀರದಲ್ಲಿ ಇರುತ್ತಾರೆ. ಅನಂತರ ಸೃಷ್ಟಿಕಾಲದಲ್ಲಿ ಹೊರಕ್ಕೆ ಬರುತ್ತಾರೆ.

ಶಿಷ್ಟ ಹವ್ಯವಾಹಂ ಎಂದು ಹಿಂದೆ ಹೇಳಿದ್ದಕ್ಕೆ ಅಪವಾದವನ್ನು ಹೇಳುತ್ತಾರೆ –

ಪ್ರಯಾತಿ ಧರ್ಮಂ ನಿರೃತಿಸ್ತು ಶಕ್ರಂ

ಮರುದ್ಗಣಾಃ ಪಾರಿಷದಾಸ್ತಥೈವ ।

ಸರ್ವೇಽನಿರುದ್ಧಂ ಪೃತನಾಧಿಪಾದ್ಯಾಃ

ತುರಶ್ರುತಿರ್ಹೀತ್ಥಮಿಯಂ ವಿಮುಕ್ತಿಃ ॥ ೧೪೮ ॥

ನಿಋತಿಯು ಯಮಧರ್ಮನನ್ನು ಹೊಂದುತ್ತಾನೆ. ಮರುತ್ತುಗಳು ಇಂದ್ರನನ್ನು, ಹಾಗೆಯೇ ವಿಷ್ವಕ್ಸೇನ ಮೊದಲಾದ ಎಲ್ಲ ಪಾರ್ಷದರೂ (ಶ್ರೀಹರಿಯ ಪರಿಚಾರಕ ದೇವತೆಗಳೂ) ಅನಿರುದ್ಧನನ್ನು ಹೊಂದುತ್ತಾರೆ. (ಅನಿರುದ್ಧನಿಗೆ ಕಾಮನಲ್ಲಿ ಲಯವು ಎಂದು ಹಿಂದೆಯೇ ಹೇಳಿದೆ). ಈ ವಿಷಯದಲ್ಲಿ ತುರಶ್ರುತಿಯು ಪ್ರಮಾಣವು. ಈ ವಿಷಯವು ಪರಮಶ್ರುತಿಯಲ್ಲಿ ಅನುಕ್ತವಾದ್ದರಿಂದ ಹಿಂದಿನ ಸಂದರ್ಭದಲ್ಲಿ ಇದನ್ನು ಪ್ರಸ್ತಾಪಿಸಲಿಲ್ಲ. ಈ ಪ್ರಕಾರವಾಗಿ ಈ ಪಾದದಲ್ಲಿ ದೇವಾದಿಗಳಿಗೆ ದೇಹಲಯ ರೂಪವಾದ ವಿಮುಕ್ತಿಯು ಹೇಳಲ್ಪಟ್ಟಿತು. ಇಲ್ಲಿ ಹೇಳಿದ ಪ್ರಕಾರವೇ ಮುಕ್ತಿಯು, ಜಿನಾದಿಗಳು ಹೇಳಿದಂತೆ ಅಲ್ಲ ಎಂದು ತಿಳಿಯತಕ್ಕದ್ದು.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದನುವ್ಯಾಖ್ಯಾನೇ ಚತುರ್ಥಾಧ್ಯಾಯಸ್ಯ ದ್ವಿತೀಯಃ ಪಾದಃ ॥

॥ ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ನಾಲ್ಕನೆಯ ಅಧ್ಯಾಯ ಎರಡನೆಯ ಪಾದದ ಶ್ರೀಮನ್ನ್ಯಾಯಸುಧಾನುಸಾರಿ ಕನ್ನಡಾನುವಾದವು ಮುಕ್ತಾಯವಾಯಿತು ॥

* * *

ನಾಲ್ಕನೆಯ ಅಧ್ಯಾಯ ಮೂರನೆಯ ಪಾದ

ಈ ಪಾದದಲ್ಲಿ ಮಾರ್ಗವೂ ಗಮ್ಯವೂ ಹೇಳಲ್ಪಡುತ್ತದೆ ಎಂದು ಭಾಷ್ಯದಲ್ಲಿ ಹೇಳಲಾಗಿದೆ. ಅದನ್ನು ಹಿಂದೆಯೇ (ದ್ವಿತೀಯಪಾದೀಯ ಭಾಷ್ಯದ ವಿವರಣೆಯ ಪ್ರಸಂಗದಲ್ಲಿ 'ಉತ್ಕ್ರಾಂತಿಮಾರ್ಗೌ ದೇವಾನಾಂ ನ ಪ್ರಾಯೇಣ ಭವಿಷ್ಯತಿ' ಎಂದು) ವಿವರಣೆ ಮಾಡಿದ್ದರೂ ಇಲ್ಲಿ ಸಂದರ್ಭವು ಪ್ರಾಪ್ತವಾದುದರಿಂದ ವಿಶೇಷವಾಗಿ ವಿವರಿಸುತ್ತಾರೆ –

ಉತ್ಕ್ರಾಂತಮಾರ್ಗಶ್ಚ ವಿಮುಕ್ತಗಮ್ಯಂ ।

ಪಾದೋದಿತಂ .....

ದೇಹದಿಂದ ಉತ್ಕ್ರಾಂತರಾದ ಮನುಷ್ಯರಿಗೆ ಭಗವಂತನ ಲೋಕಗಮನಕ್ಕಾಗಿ ಮಾರ್ಗವೂ ಹಾಗೂ ಕರ್ಮದಿಂದಲೂ ದೇಹದಿಂದಲೂ ವಿಮುಕ್ತರಾದವರಿಗೆ ಗಮ್ಯವಾದುದೂ – ಇವೆರಡು ಸಂಗತಿಗಳೂ ಈ ಪಾದದಲ್ಲಿ ಹೇಳಲ್ಪಟ್ಟಿದೆ.

ಸುಕ್ರಮ ಇತ್ಯಾದಿ ವಚನದಿಂದ ಈ ಪಾದದ ಅಧಿಕರಣಗಳ ಪೂರ್ವಪಕ್ಷ ಯುಕ್ತಿ ಹಾಗೂ ಸಿದ್ಧಾಂತಯುಕ್ತಿಗಳನ್ನು ಹೇಳುತ್ತಾರೆ.

..... ಸುಕ್ರಮವಿಕ್ರಮೌ ಚ ॥ ೧ ॥

ಸಾಂತಾನಿಕಪ್ರಾಪ್ತಿರಭೀಷ್ಟತಾ ಚ ಸೌಕರ್ಯಮಿತ್ಯನ್ಯಮತಸ್ಯ ತರ್ಕಾಃ ।

ವಿಶೇಷಸಂಪ್ರಾಪ್ತಿರುರುತ್ವಮಾಪ್ತಿಃ ಕ್ರಮಾನುರಾಗಃ ಕಥಿತಾನುವೃತ್ತಿಃ ॥ ೨ ॥

ಸಿದ್ಧಾಂತನಿರ್ಣೇತಿಕರಾಃ ..... ।

ಅನ್ಯಮತಸ್ಯ ತರ್ಕಾಃ ಎಂದರೆ ಪೂರ್ವಪಕ್ಷದ ಯುಕ್ತಿಗಳು. ಸಿದ್ಧಾಂತನಿರ್ಣೇತಿಕರಾಃ ಎಂದರೆ ಸಿದ್ಧಾಂತಯುಕ್ತಿಗಳು.

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
ಅರ್ಚಿರಧಿಕರಣ	ಸುಕ್ರಮಃ	ವಿಶೇಷಸಂಪ್ರಾಪ್ತಿಃ
ವಾಯುಶಬ್ದಾಧಿಕರಣ	ಸುಕ್ರಮಃ	ವಿಶೇಷಸಂಪ್ರಾಪ್ತಿಃ
ತಟಿದಧಿಕರಣ	ಸುಕ್ರಮಃ	ವಿಶೇಷಸಂಪ್ರಾಪ್ತಿಃ
ಆತಿವಾಹಿಕಾಧಿಕರಣ	ಸುಕ್ರಮಃ	ವಿಶೇಷಸಂಪ್ರಾಪ್ತಿಃ
ವೈದ್ಯುತಾಧಿಕರಣ	ವಿಕ್ರಮಃ	ಉರುತ್ವಂ

ಕಾರ್ಯಾಧಿಕರಣ	ಸಾಂತಾನಿಕಪ್ರಾಪ್ತಿಃ,	ಆಪ್ತಿಃ,
	ಅಭೀಷ್ಟತಾ,	ಕರ್ಮಾನುರಾಗಃ,
	ಸೌಕರ್ಯಂ	ಕಥಿತಾನುವೃತ್ತಿಃ

ಕಾರ್ಯಾಧಿಕರಣಮ್

।। ಓಂ ಅಪ್ರತೀಕಾಲಂಬನಾನ್ನಯತೀತಿ ಬಾದಾರಾಯಣ ಉಭಯಥಾ ಚ ದೋಷಾತ್ತತ್ಕ್ರತುಶ್ಚ ಓಂ ।।

ವಿಮುಕ್ತರಿಂದ ಗಮ್ಯವಾದುದನ್ನು ಪ್ರತಿಪಾದಿಸಲು ಈ ಸೂತ್ರವು ಹೊರಟಿದೆ. ಭಾಷ್ಯದಲ್ಲಿ ಇದು ಅಷ್ಟು ಸ್ಪಷ್ಟವಾಗಿಲ್ಲ. ಆದ್ದರಿಂದ ಇದನ್ನು ಸ್ಪಷ್ಟೀಕರಿಸುತ್ತ ಪ್ರತೀಕ ಶಬ್ದಾರ್ಥವನ್ನು ಹೇಳುತ್ತಾರೆ –

ಪ್ರತೀಕಂ ದೇಹಾದಿಕಂ ತದ್ಗತಮೇವ ಯೇ ನರಾಃ ।

ಉಪಾಸತೇ ತೇ ಪುರತಃ ಸಮಾಪ್ನುಯುಃ ।। ೩ ।।

ಬ್ರಹ್ಮಾಣಮಸ್ಮಾನ್ಮತಿಮಾಪ್ಯ ವಿಷ್ಣುಂ ಪ್ರಾಪ್ಸ್ಯಂತಿ ।

ದೇಹ ಮನಸ್ಸು ಮೊದಲಾದುವನ್ನು ಭಗವಂತನ ಪ್ರತಿಮೆಗಳೆಂದು ಗ್ರಹಿಸಬೇಕು. ಪ್ರತೀಕದಲ್ಲಿಯೇ ಇರತಕ್ಕ ವಿಷ್ಣುವನ್ನು ಯಾವ ಮನುಷ್ಯರು ಉಪಾಸನೆ ಮಾಡುತ್ತಾರೋ ಅವರು ಪ್ರತೀಕಾಲಂಬನರು. ಅವರು ಪ್ರಲಯಕಾಲಕ್ಕಿಂತ ಮುಂಚೆ ಚತುರ್ಮುಖ ಬ್ರಹ್ಮನನ್ನು ಹೊಂದುವರು. ಈ ಬ್ರಹ್ಮನಿಂದ ಭಗವಜ್ಜ್ಞಾನ ವಿಶೇಷವನ್ನು ಹೊಂದಿ ಪ್ರಲಯದಲ್ಲಿ ವಿಷ್ಣುವನ್ನು ಹೊಂದುವರು.

ಈಗ ಸೂತ್ರಿತವಾದ ಅಪ್ರತೀಕಾಲಂಬನರ ಗತಿಯನ್ನು ವಿವರಿಸುತ್ತಾರೆ –

ಅತೋಽನ್ಯೇಽಪಿ ತಮಾಪ್ಯ ತಸ್ಮಾತ್

ಹರಿಂ ಗತಾ ಮುಕ್ತಿಭಾಜಃ ಪರಾಂತೇ ।। ೪ ।।

ಪ್ರತೀಕಾಲಂಬನರಿಂದ ಅನ್ಯರಾದ ವ್ಯಾಪ್ತೋಪಾಸಕರಾದ ಅಪ್ರತೀಕಾಲಂಬನರು ಪ್ರಥಮದಲ್ಲಿ ವೈಕುಂಠದಲ್ಲಿ ಅಮುಕ್ತಸ್ಥಾನದಲ್ಲಿರತಕ್ಕ ವಿಷ್ಣುವನ್ನು ಹೊಂದಿದರೂ, ಮಹಾಪ್ರಲಯ ಕಾಲದಲ್ಲಿ ಆ ವಿಷ್ಣುವಿನಿಂದ ಬ್ರಹ್ಮನನ್ನು ಹೊಂದಿ, ಆಮೇಲೆ ಪುನಃ ವಿಷ್ಣುವನ್ನು ಹೊಂದುತ್ತಾರೆ, ಅಂದರೆ ಮುಕ್ತರಾಗುತ್ತಾರೆ ಎಂದರ್ಥ.

।। ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದನುವ್ಯಾಖ್ಯಾನೇ ಚತುರ್ಥಾಧ್ಯಾಯಸ್ಯ ತೃತೀಯಃ ಪಾದಃ ।।

।। ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ನಾಲ್ಕನೆಯ ಅಧ್ಯಾಯ ಮೂರನೆಯ ಪಾದದ
ಶ್ರೀಮನ್ನ್ಯಾಯಸುಧಾನುಸಾರಿ ಕನ್ನಡಾನುವಾದವು ಮುಕ್ತಾಯವಾಯಿತು ।।

* * *

ನಾಲ್ಕನೆಯ ಅಧ್ಯಾಯ ನಾಲ್ಕನೆಯ ಪಾದ

ಈ ಪಾದದಲ್ಲಿ ಪ್ರತಿಪಾದ್ಯವಾದ ವಿಷಯವೂ ಪಾದಸಂಗತಿಯೂ ಪ್ರಸಿದ್ಧವೇ ಆಗಿದೆ. ಆದುದರಿಂದ ಅವುಗಳನ್ನು ಇಲ್ಲಿ ಹೇಳಿಲ್ಲ. ಈ ಪಾದದಲ್ಲಿನ ಪೂರ್ವಪಕ್ಷ ಹಾಗೂ ಸಿದ್ಧಾಂತಯುಕ್ತಿಗಳನ್ನೇ ಹೇಳುತ್ತ ವ್ಯಾಖ್ಯಾನವನ್ನು ಪ್ರಾರಂಭಿಸುತ್ತಾರೆ –

ಅತಿಕ್ರಮೋಕ್ತಿಃ ಪುರುಷಾರ್ಥಲಾಭಃ

ಪರಾಗತಿಃ ಪಾರಗತಿಸ್ತದೋಕಃ ।

ಸಮಸ್ತಕಾರ್ಯಂ ವಶಿತಾ ಚ ವಿಶ್ವ–

ಸಂಭಾವನಾ ಯುಕ್ತಯಸ್ತ್ವನ್ಯಪಕ್ಷೇ ॥ ೬ ॥

ಸಾಮಾನ್ಯರೂಪಂ ಪ್ರತಿಭಾನಮುಕ್ತಿ–

ರಾಶ್ಚರ್ಯತಾ ಕೃತ್ರಿಮತಾಸ್ತದೋಷಃ ।

ವಿಶೇಷಕ್ಲೃಪ್ತಿಃ ಕೃತನಿಶ್ಚಯಶ್ಚ

ಮಾಹಾತ್ಮ್ಯಮಿತ್ಯೇವ ಸುನಿರ್ಣಯಾರ್ಥಾಃ ॥ ೨ ॥

ಯುಕ್ತಯಃ ಅನ್ಯಪಕ್ಷೇ – ಪೂರ್ವಪಕ್ಷದಲ್ಲಿನ ಯುಕ್ತಿಗಳು. ಸುನಿರ್ಣಯಃ ಸಿದ್ಧಾಂತನಿರ್ಣಯಃ ಅರ್ಥಃ ಪ್ರಯೋಜನಃ ಯಾಸಾಂ ತಾಃ ಎಂಬ ವ್ಯುತ್ಪತ್ತಿಯಿಂದ ಸುನಿರ್ಣಯಾರ್ಥಾಃ ಎಂದರೆ ಸಿದ್ಧಾಂತಯುಕ್ತಿಗಳು ಎಂದರ್ಥ.

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
ಸಂಪದ್ಯಾಧಿಕರಣ	ಅತಿಕ್ರಮೋಕ್ತಿಃ	ಸಾಮಾನ್ಯರೂಪಂ
ಮುಕ್ತಾಧಿಕರಣ	ಕೃತಿಃ	ಪ್ರತಿಭಾನಂ
ಆತ್ಮಾಧಿಕರಣ	ಅರ್ಥಲಾಭಃ	ಉಕ್ತಿಃ
ಅವಿಭಾಗಾಧಿಕರಣ	ಪರಾಗತಿಃ	ಆಶ್ಚರ್ಯತಾ
ಬ್ರಾಹ್ಮಾಧಿಕರಣ	ಪರಾಗತಿಃ	ಅಕೃತ್ರಿಮತಾ
ಸಂಕಲ್ಪಾಧಿಕರಣ	ತದೋಕಃ	ಅಸ್ತದೋಷಃ
ಅನನ್ಯಾಧಿಪತ್ಯಧಿಕರಣ	ತದೋಕಃ	ಅಸ್ತದೋಷಃ
ಅಭಾವಾಧಿಕರಣ	ಸಮಸ್ತಕಾರ್ಯಂ	ವಿಶೇಷಕ್ಲೃಪ್ತಿಃ

ಜಗದ್ವ್ಯಾಪಾರಾಧಿಕರಣ	ಸಮಸ್ತಕಾರ್ಯಂ	ವಿಶೇಷಕ್ಲೃಪ್ತಿಃ
ಸ್ಥಿತ್ಯಧಿಕರಣ	ವಶಿತಾ	ಕೃತನಿಶ್ಚಯಃ
ಅನಾವೃತ್ಯಧಿಕರಣ	ವಿಶ್ವಸಂಭಾವನಾ	ಮಾಹಾತ್ಮ್ಯಂ

ಅನನ್ಯಾಧಿಪತ್ಯಧಿಕರಣಮ್

।। ಓಂ ಅತ ಏವ ಚಾನನ್ಯಾಧಿಪತಿಃ ಓಂ ।।

ಸತ್ಯಸಂಕಲ್ಪತ್ವವಿರುವ ಕಾರಣದಿಂದಲೇ ಬ್ರಹ್ಮಜ್ಞಾನಿಗೆ ಮತ್ತೊಬ್ಬ ಅಧಿಪತಿಯು ಇರುವುದಿಲ್ಲ, ಅಂದರೆ ಮುಕ್ತನು ಯಾರಿಂದಲೂ ನಿಯಮನ ಮಾಡಲ್ಪಡುವುದಿಲ್ಲ, ಎಂಬುದಾಗಿ ಅದ್ವೈತಿಗಳು ವ್ಯಾಖ್ಯಾನ ಮಾಡುತ್ತಾರೆ. ಈ ವ್ಯಾಖ್ಯಾನವು ಅಯುಕ್ತ ಎನ್ನುವ ಅಭಿಪ್ರಾಯದಿಂದ ಹೇಳುತ್ತಾರೆ –

ಅನನ್ಯಭೃತ್ಯತ್ವಮಿಹೋದಿತೇಭ್ಯ-

ಸ್ತ್ವನ್ಯಸ್ಯ ಭೃತ್ಯತ್ವನಿವಾರಣಾಯ ।

ಮುಕ್ತನಿಗೆ ಅನ್ಯಾಧಿಪತಿಯು ಇಲ್ಲ ಎಂದು ಯಾವ ಅನನ್ಯಭೃತ್ಯತ್ವವು ಈ ಸೂತ್ರದಲ್ಲಿ ಹೇಳಿದೆಯೋ, ಅದಾದರೂ ಯಾರು ಯಾವ ಮುಕ್ತನಿಗೆ ಅಧಿಪತಿಯೆಂದು ಶಾಸ್ತ್ರದಲ್ಲಿ ಹೇಳಲಾಗಿದೆಯೋ, ಅವರಿಂದ ಇತರರಿಗೆ ಮುಕ್ತನು ಭೃತ್ಯನಾಗುವುದಿಲ್ಲ ಎಂದು ಪ್ರತಿಪಾದಿಸುವುದಕ್ಕಾಗಿ. ಸರ್ವಥಾ ಅಧಿಪತಿಯನ್ನು ನಿವಾರಣೆ ಮಾಡುವುದಕ್ಕಾಗಿ ಅಲ್ಲ. ಏಕೆಂದರೆ ಅನನ್ಯ ಎಂಬ ಪದ ಪ್ರಯೋಗವಿದೆ. ಅಧಿಪತಿಯೇ ಇಲ್ಲವೆಂದು ಹೇಳುವ ಅಭಿಪ್ರಾಯವಿದ್ದಿದ್ದರೆ ಅನಧಿಪತಿಃ ಎಂದಷ್ಟೇ ಹೇಳಬೇಕಿತ್ತು. ಆಗ ಅನ್ಯಶಬ್ದಕ್ಕೆ ವೈಯರ್ಥ್ಯವು ಬರುತ್ತಿತ್ತು.

ಹೀಗೆಯೇ ಅರ್ಥಮಾಡಬೇಕೆಂದು ಕಾರಣಾಂತರದಿಂದಲೂ ಹೇಳುತ್ತಾರೆ –

ಪತಿಂ ಯದೇಷಾಮಪಿ ವಿಷ್ಣುಮಾಹ

ಹ್ಯುತಾಮೃತತ್ವಸ್ಯ ಪತಿತ್ವವಾಗ್ಹರೇಃ ।। ೩ ।।

ಶ್ರೀಹರಿಗೆ ಮುಕ್ತವರ್ಗಕ್ಕೆ ನಿಯಾಮಕತ್ವವನ್ನು ಪ್ರತಿಪಾದಿಸುವ ವಚನವು (ಉತಾಮೃತತ್ವಸ್ಯೇಶಾನಃ) ಶ್ರೀಹರಿಯು ಮುಕ್ತರಿಗೆ ಅಧಿಪತಿಯೆಂದು ಹೇಳುತ್ತದೆ. ಈ ಕಾರಣದಿಂದಲೂ ಹಿಂದೆ ಹೇಳಿದ್ದೇ ಸೂತ್ರಾರ್ಥವು, ಬೇರೆಯಲ್ಲ.

ಅನುಮಾನದಿಂದಲೂ ಈ ಅರ್ಥವನ್ನು ಸಮರ್ಥಿಸುತ್ತಾರೆ –

ಏತೇಽಪಿ ಚಾನ್ಯಾಧಿಪತಿತ್ವಯುಕ್ತಾ

ವಿಷ್ಣ್ವನ್ಯಚಿತ್ತ್ವೇನ ಯಥಾ ಪುಮಾಂಸಃ ।

ಪ್ರಸಿದ್ಧಿಭಾಜಸ್ತ್ವಿತಿ ಚಾನುಮೈವ

ಹ್ಯಭೀಷ್ಟಸಿದ್ಧ್ಯೈ ಭವತೀಹ ನಿಶ್ಚಯಾತ್ ॥ ೪ ॥

ಈ ಮುಕ್ತರು ಅನ್ಯಾಧಿಪತಿತ್ವದಿಂದ ಯುಕ್ತರು (ಅನ್ಯೋಽಧಿಪತಿರ್ಯೇಷಾಂ ತೇಽನ್ಯಾಧಿಪತಯಃ, ತೇಷಾಂ ಭಾವೋಽನ್ಯಾಧಿಪತಿತ್ವಂ) ಅಂದರೆ ಮುಕ್ತರು ಅನ್ಯ ಅಧಿಪತಿಯನ್ನು ಹೊಂದಿದವರು ಅಥವಾ ಅನ್ಯರಿಂದ ನಿಯಮ್ಯರು. ವಿಷ್ಣು ಅನ್ಯತ್ವದಿಂದಲೂ ಜೀವತ್ವದಿಂದಲೂ ಅನ್ಯನಿಯಮ್ಯರಾಗಿ ಪ್ರಸಿದ್ಧರಾದ ಸಂಸಾರಿ ಪುರುಷರಂತೆ. ಈ ಅನುಮಾನವೇ ಮುಕ್ತರಲ್ಲಿ ನಿಶ್ಚಯವಾಗಿಯೂ ಸ್ವೋತ್ತಮ ನಿಯಮ್ಯತ್ವ ರೂಪವಾದ ಅಭೀಷ್ಟ ಸಿದ್ಧಿಗಾಗಿ ಆಗುವುದು. ಹಿ ಎಂಬ ಶಬ್ದದಿಂದ ವ್ಯಾಪ್ತಿ ಪಕ್ಷಧರ್ಮತ್ವಗಳು ಪ್ರಮಿತವಾಗಿವೆ ಎಂದು ಸೂಚಿಸುತ್ತಾರೆ.

ಮುಕ್ತರಿಗೆ ಕೇವಲ ಶ್ರೀಹರಿಯೊಬ್ಬನೇ ಅಧಿಪತಿಯಲ್ಲ, ಮತ್ತೆ ಅವರಿಗಿಂತ ಉತ್ತಮರಾದ ಮುಕ್ತಬ್ರಹ್ಮಾದಿಗಳೂ ಯಥಾಯೋಗ್ಯವಾಗಿ ಅಧಿಪತಿಗಳಾಗಿರುತ್ತಾರೆ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ –

ಮುಕ್ತಸ್ವಕೀಯಾವರಯಂತೃತಾಸ್ತಿ

ಮುಕ್ತಾವಪಿ ಬ್ರಹ್ಮಪುರಸ್ಸರಾಣಾಮ್ ।

ಮುಕ್ತರಾದ ಬ್ರಹ್ಮ ಮೊದಲಾದವರಿಗೂ ತಮ್ಮೊಂದಿಗೇ ಮುಕ್ತರಾದ ತಮ್ಮಿಂದ ಅವರರಾದ ಮುಕ್ತರನ್ನು ಕುರಿತು ನಿಯಾಮಕತ್ವವು ಇದೆ. ಅಮುಕ್ತರನ್ನು ಕುರಿತು ನಿಯಾಮಕ್ತವು ಸರ್ವಥಾ ಇರುವುದಿಲ್ಲ. ಮುಕ್ತರಲ್ಲಿಯೂ ಕೂಡ ಕಲ್ಪಾಂತರದಲ್ಲಿ ಮುಕ್ತರಾದವರನ್ನೂ ಹಾಗೂ ತಮ್ಮ ಕಲ್ಪದಲ್ಲಿಯೇ ತಮಗಿಂತ ಉತ್ತಮರೂ ಅಥವಾ ಸಮರಾದವರನ್ನೂ ಕುರಿತು ನಿಯಾಮಕತ್ವವು ಇಲ್ಲ. ಇದನ್ನು ತಿಳಿಸಲಿಕ್ಕಾಗಿಯೇ ಇಲ್ಲಿ ಮುಕ್ತಸ್ವಕೀಯಾವರಯಂತೃತಾ ಎಂದು ಹೇಳಿದ್ದು.

ಇದರಿಂದ 'ಆಪ್ನೋತಿ ಸ್ವಾರಾಜ್ಯಂ' 'ಸರ್ವೇಽಸ್ಮೈ ದೇವಾ ಬಲಿಮಾವಹಂತಿ' 'ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ' ಇತ್ಯಾದಿ ಶ್ರುತಿಗಳಿಗೂ, ಜಗದ್ವ್ಯಾಪಾರವರ್ಜ್ಯಂ ಎಂಬ ಸೂತ್ರದ ವ್ಯಾಖ್ಯಾನದಲ್ಲಿ ಮುಕ್ತನಿಯಾಮಕತ್ವವನ್ನು ಕುರಿತು ಇತರ ಭಾಷ್ಯಕಾರರು ಉದಾಹರಿಸಿದ ಶ್ರುತಿಗಳಿಗೂ ಪ್ರಾಮಾಣಿಕವಾದ ಅರ್ಥವನ್ನು ಹೇಳಿದಂತಾಯಿತು.

ಮುಕ್ತರಿಗೆ ತಮಗಿಂತ ಅವರರನ್ನು ಕುರಿತು ನಿಯಂತೃತ್ವವು ಪ್ರಮಾಣವೆಂದು ಯಾವುದರಿಂದ ತಿಳಿಯಬೇಕು ಎಂದರೆ –

ಅನೇನ ದೇವೇನ ತಥಾಮುನಾ ಚ

ಹೀಷ್ಟೇ ಪರಾರ್ವಾಕ್ತನಲೋಕಿನಾಮಿತಿ ॥ ೫ ॥

ಫಲಂ ಶ್ರುತಿರ್ಜ್ಞಾನತ ಆಹ ಮುಕ್ತಾ–

ವೇತಚ್ಚ ಸರ್ವಾಶುಭನಾಶಲಿಂಗಾತ್ ।

ಮುಕ್ತನು ಚಕ್ಷುರಂತಸ್ಥನಾದ ಪ್ರಸನ್ನನಾದ ಶ್ರೀಹರಿಯಿಂದ ಹಾಗೆಯೇ ಸೂರ್ಯಾಂತರ್ಗತನಾದ ಶ್ರೀಹರಿಯಿಂದ ಮೇಲಿನ ಸ್ವರ್ಗಾದಿ ಲೋಕಗಳೂ ಹಾಗೂ ಕೆಳಗಿನ ಪಾತಾಳಾದಿ ಲೋಕಗಳಲ್ಲಿಯೂ ಇರತಕ್ಕ ತನಗಿಂತ ಅವರರಾದ ಮುಕ್ತರಿಗೆ ನಿಯಾಮಕನಾಗಿರುವನೆಂದು ಶ್ರುತಿಯಲ್ಲಿ ಹೇಳಿದೆ. 'ಅಥ ಯ ಏವಂ ವಿದ್ವಾನ್' 'ಸೋಽಮುನೈವ ಯೇ ಚಾಮುಷ್ಮಾತ್ಪರಾಂಚೋ ಲೋಕಾಂಸ್ತಾಂಶ್ಚಾ ಪ್ನೋತಿ ದೇವಕಾಮಾಂಶ್ಚ, ಅಥಾನೇನೈವ ಯೇ ಚೈತಸ್ಮಾದರ್ವಾಂಚೋ ಲೋಕಾಂ ಸ್ತಾಂಶ್ಚಾಪ್ನೋತಿ ಮನುಷ್ಯ ಕಾಮಾಂಶ್ಚ' ಎನ್ನುವ ಶ್ರುತಿಯನ್ನು ಇಲ್ಲಿ ಗ್ರಹಿಸಬೇಕು. ಈ ಶ್ರುತಿಯು ಜ್ಞಾನದಿಂದ ಮುಕ್ತನಿಯಂತೃತ್ವ ರೂಪವಾದ ಫಲವನ್ನು ಹೇಳುತ್ತದೆ. ಈ ಸರ್ವಲೋಕಾಪ್ತಿ ರೂಪವಾದ ಫಲವು ಮುಕ್ತಿಯಲ್ಲಿಯೇ. ಏಕೆಂದರೆ 'ಉದೇತಿ ಹ ವೈ ಸರ್ವೇಭ್ಯಃ ಪಾಪ್ಮಭ್ಯೋ ಯ ಏವಂ ವೇದ' ಎಂಬುದಾಗಿ ಸರ್ವಪಾಪಕ್ಷಯ ರೂಪವಾದ ಮುಕ್ತತ್ವಜ್ಞಾಪಕಲಿಂಗವಿದೆ. ಮುಕ್ತಿಯಿಂದ ಬೇರೆ ಕಡೆಯಲ್ಲಿ ಸರ್ವ ಪಾಪರಾಹಿತ್ಯವು ಕೂಡುವುದಿಲ್ಲ. ಏಕೆಂದರೆ ಮೋಕ್ಷವನ್ನು ಹೊಂದುವವರೆಗೂ ಪ್ರಾರಬ್ಧಪಾಪವು ಇರುವುದು.

ಮುಕ್ತಿಯಲ್ಲಿ ಜ್ಞಾನಫಲವೆಂದು ಹೇಳಲ್ಪಟ್ಟ ಸರ್ವಲೋಕಾಧಿಪತ್ಯವು ಎಲ್ಲ ಮುಕ್ತರಿಗೂ ಇದೆಯೆಂಬ ಪ್ರತೀತಿಯನ್ನು ನಿರಾಕರಿಸುವುದಕ್ಕಾಗಿ ಹೇಳುತ್ತಾರೆ –

ಲೋಕಾಧಿಪತ್ಯಂ ಚ ವಿಧಾತುರೇವ

ಸರ್ವಾತ್ಮನೇತ್ಯಾಹ ತುರಶ್ರುತಿಶ್ಚ ॥ ೬ ॥

ಸರ್ವಾತ್ಮನಾ ಲೋಕಾಧಿಪತ್ಯವು ಮುಕ್ತನಾದ ಬ್ರಹ್ಮನಿಗೇ. ಇತರರಿಗೆ ಯಥಾ ಯೋಗ್ಯವೆಂದು ತಿಳಿಯತಕ್ಕದ್ದು. 'ಮುಕ್ತಾನಾಂ ನ ಜಗದ್ಯತ್ನಸ್ತಥಾಪಿ ವಿಬುಧಾಃ ಸದಾ । ಮುಕ್ತಾನಾಂ ತು ನಿಯಂತಾರಃ ತೇಷಾಂ ಬ್ರಹ್ಮಾಽಸ್ಯ ವೈ ಹರಿಃ' ಎಂದು ತುರಶ್ರುತಿಯೂ ಇದನ್ನೇ ಹೇಳಿದೆ.

ಶ್ರುತ್ಯಂತರವನ್ನೂ ಹೀಗೆಯೇ ವ್ಯಾಖ್ಯಾನ ಮಾಡಬೇಕು ಎಂದು ಹೇಳುತ್ತಾರೆ –

ಸರ್ವೇ ಬಲಿಂ ದೇವಗಣಾ ವಹಂತೀ–

ತ್ಯೇತಚ್ಚ ನಾನ್ಯಸ್ಯ ತು ಯುಕ್ತಿಮೇತಿ ।

'ಸ ವೇದ ಬ್ರಹ್ಮ, ಸರ್ವೇಽಸ್ಮೈ ದೇವಾ ಬಲಿಮಾವಹಂತಿ' (ಎಲ್ಲ ದೇವತಾ ಸಮೂಹಗಳೂ ಬ್ರಹ್ಮನಿಗೇ ಪೂಜೆಯನ್ನು ಮಾಡುತ್ತಾರೆ.) ಎಂಬುದಾಗಿ ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವದೇವಪೂಜ್ಯತ್ವವು ಬ್ರಹ್ಮನಿಂದ ಇತರರಿಗೆ ಕೂಡುವುದಿಲ್ಲ. ಇಲ್ಲಿ ಪೂಜಕರಾದ ದೇವತೆಗಳೂ ಮುಕ್ತರೇ ಆಗಿರುತ್ತಾರೆ. ಏಕೆಂದರೆ ಅಮುಕ್ತರಿಗೆ ಮುಕ್ತರೊಂದಿಗೆ ಸಂಬಂಧವೇ ಇರುವುದಿಲ್ಲ.

ಹಾಗಾದರೆ ತಾಂಶ್ಚಾಪ್ನೋತಿ ಎಂದು ಶ್ರುತ್ಯುಕ್ತನಾದ ಲೋಕಾಪ್ತಿಯುಳ್ಳವನು

ಸರ್ವ ಅಶುಭನಾಶತ್ವರೂಪವಾದ ಹೇತುವಿನಿಂದ ಮುಕ್ತನಾಗಲಿ. ಆವನಿಗೆ ಇಲ್ಲಿ ಲೋಕಾಪ್ತಿಯೇ ಹೇಳಲ್ಪಡುತ್ತದೆ. ಮುಕ್ತರಾದ ಅವರರನ್ನು ಕುರಿತು ನಿಯಂತೃತ್ವವು ಹೇಳಲ್ಪಡುವುದಿಲ್ಲ ಎಂದರೆ –

ಲೋಕಾ ಇತೀಹಾಪಿ ತು ಲೋಕಿನಾಂ ವಚೋ

ಲೋಕಾ ಇತಿ ಹ್ಯೇವ ರವಃ ಪ್ರಜಾಸು ।। ೭ ।।

ಪ್ರಯುಜ್ಯತೇ ಸರ್ವಜನೈಃ ಸದೈವ

ತನ್ಮಾನಿನೋ ಲೋಕಪದೇನ ಚೋಕ್ತಾಃ ।

ಈ ಶ್ರುತಿಯಲ್ಲಿ ಲೋಕ ಎನ್ನುವ ಶಬ್ದವು ಲೋಕಾಧಿಪತ್ಯವುಳ್ಳ ಮುಕ್ತರನ್ನು ಮಾತ್ರವಲ್ಲದೆ, ಆ ಲೋಕದಲ್ಲಿರುವರನ್ನೂ ಪ್ರತಿಪಾದಿಸುತ್ತದೆ. ಅಂದರೆ ಹೇಗೆ ಮಂಚ ಶಬ್ದವು ಮಂಚಸ್ಥ ಪುರುಷನಲ್ಲಿದೆಯೋ ಹಾಗೆಯೇ ಲೋಕಶಬ್ದವೂ ಕೂಡ ಲೋಕಸ್ಥ ಪುರುಷನಲ್ಲಿದೆ. ಶಬ್ದಶಕ್ತಿಯನ್ನು ತಿಳಿದ ಎಲ್ಲ ಜನರಿಂದಲೂ ಲೋಕಾಃ ಎನ್ನುವ ಶಬ್ದವು ಲೋಕಸ್ಥ ಪ್ರಜೆಗಳ ವಿಷಯದಲ್ಲಿ ಯಾವಾಗಲೂ ಪ್ರಯೋಗಿಸಲ್ಪಡುತ್ತದೆ. ಅಭಿಮಾನ್ಯಧಿಕರಣದ ನ್ಯಾಯದಿಂದ ಲೋಕಪದದಿಂದ ಲೋಕಾಭಿಮಾನಿಗಳು ಹೇಳಲ್ಪಡುತ್ತಾರೆ.

ಲೋಕಶಬ್ದಕ್ಕೆ ಲೋಕಸ್ಥ ಪುರುಷರಲ್ಲಿ ವಾಚಕತ್ವವಿದೆ ಎಂದಾಗಲಿ. ಹಾಗಿದ್ದರೂ ಈ ಶ್ರುತಿಗೆ ಮುಕ್ತವಿಷಯತ್ವವಿದೆ ಎನ್ನುವಲ್ಲಿ ಪ್ರಮಾಣವಿಲ್ಲ. ಆಪ್ನೋತಿ ಎಂದು ಆಪ್ತಿಯೇ ಹೇಳಲ್ಪಡುತ್ತದೆ, ನಿಯಾಮಕತ್ವವಲ್ಲ ಎಂದು ಆಕ್ಷೇಪಿಸಿದರೆ –

ತದ್ಗಾಸ್ತು ಮುಕ್ತಾ ಇಹ ಲೋಕಶಬ್ದಾ

ಅನ್ಯೋನ್ಯನಾಥಾ ಇತಿ ಪೈಂಗಿನಾಂ ಶ್ರುತಿಃ ।। ೮ ।।

ಯೇ ಚಾಮುಷ್ಮಾತ್ ಎನ್ನುವ ಶ್ರುತಿಯಲ್ಲಿ ಪರಾವರ ಲೋಕಗಳಲ್ಲಿರತಕ್ಕ ಮುಕ್ತರೇ ಲೋಕಶಬ್ದವಾಚ್ಯರು. ಉತ್ತಮರಾದ ಮುಕ್ತರು ಅಧಮರಾದ ಮುಕ್ತರಿಗೆ ನಿಯಾಮಕರು. ಹೀಗೆ ಈ ಶ್ರುತಿಗೆ ವ್ಯಾಖ್ಯಾನರೂಪವಾದ ಪೈಂಗಿಶ್ರುತಿಯು ಹೇಳಿದೆ.

ಈ ಶ್ರುತಿಯಲ್ಲಿ ಮುಕ್ತನಿಗೆ ಮುಕ್ತನಿಯಾಮಕತ್ವವು ಹೇಳಲ್ಪಟ್ಟಿದೆ ಎನ್ನುವುದನ್ನು ಪ್ರಕಾರಾಂತರದಿಂದ ಪ್ರತಿಪಾದಿಸುತ್ತಾರೆ –

ಅಲೋಕಶಬ್ದೇನ ವಿಮುಕ್ತಿಭಾಜೋ

ವಾಚ್ಯಾಃ ಪದಂ ತಾದೃಗಪೀಹ ಯುಕ್ತಮ್ ।

ಲೋಕದೋಷಾತೀತತ್ವ ಹಾಗೂ ವಿದೇಹತ್ವ ನಿಮಿತ್ತದಿಂದ ಮುಕ್ತರು ಅಲೋಕ ಶಬ್ದದಿಂದ ವಾಚ್ಯರಾಗುತ್ತಾರೆ. ಲೋಕಾಲೋಕ ಶಬ್ದಗಳು ಸಂಹಿತೆಯಲ್ಲಿ ಸಮಾನ

ರೂಪಗಳಾಗಿವೆ. ಪರಾಂಚೋ ಲೋಕಾ ಅರ್ವಾಂಚೋ ಲೋಕಾ ಎಂಬ ವಾಕ್ಯದಲ್ಲಿ ಅಲೋಕಾ ಎಂದೂ ಪದಚ್ಛೇದ ಮಾಡಲಿಕ್ಕೆ ಬರುತ್ತದೆ. ಆಗ ಅಲೋಕಾಃ ಎಂದರೆ ಪ್ರಾಕೃತ ದೇಹ ರಹಿತರಾದ ಮುಕ್ತರು ಹೇಳಲ್ಪಡುತ್ತಾರೆ.

ಯೋಗವೃತ್ತಿಯಿಂದಲೂ ಲೋಕಶಬ್ದಕ್ಕೆ ಮುಕ್ತರಲ್ಲಿ ವೃತ್ತಿಯು ಕೂಡುತ್ತದೆ ಎಂದು ಹೇಳುತ್ತಾರೆ. ಹೇಗೆಂದರೆ –

ಲೋಕಾಭಿಧಾಶ್ಚಾಪಿ ಯತೋ ಹಿ ಮುಕ್ತಾಃ

ಪ್ರಕಾಶರೂಪಾಃ ಸತತಂ ಚ ಸರ್ವೇ ॥ ೯ ॥

ಎಲ್ಲ ಮುಕ್ತರೂ ನಿರಂತರದಲ್ಲಿಯೂ ಪ್ರಕಾಶರೂಪರಾಗಿ ಪ್ರಸಿದ್ಧರಾಗಿರುತ್ತಾರೆ. ಈ ಕಾರಣದಿಂದಲೂ ಮುಕ್ತರು ಲೋಕವೆಂಬ ಹೆಸರಿನಿಂದ ಕರೆಯಲ್ಪಡುತ್ತಾರೆ. ಲೋಕೃ ಧಾತುವಿಗೆ ದರ್ಶನ ಎಂದರ್ಥ. ದರ್ಶನ ಎಂದರೆ ಪ್ರಕಾಶ. ಆದ್ದರಿಂದ ಲೋಕ ಎಂದರೆ ಪ್ರಕಾಶ.

ಇಲ್ಲಿ ಲೋಕಾಭಿಮಾನಿಗಳಾದ ಮುಕ್ತರೇ ಲೋಕಶಬ್ದಾರ್ಥರು ಎಂದು ಹಿಂದೆ ಹೇಳಿದ್ದು ಸರಿಯಲ್ಲ. ಅವರು ಉತ್ತಮರು. ಆದ್ದರಿಂದ ಮುಕ್ತರಿಗೆ ಅವರನ್ನು ಕುರಿತು ನಿಯಮನವು ಕೂಡುವುದಿಲ್ಲ ಎಂದರೆ – ಲೋಕಾಧಿಪತ್ಯಂ ಚ ವಿಧಾತುರೇವ ಇತ್ಯಾದಿಯಾಗಿ ಹೇಳಿದ್ದು ವಿಸ್ಮರಣೆಯಾಗದಿರಲಿ ಎಂದು ಹೇಳುತ್ತಾರೆ –

ಬ್ರಹ್ಮೈವ ಲೋಕಾಧಿಪತಿರ್ವಿಮುಕ್ತೋ

ಭವೇದಿತಿ ಪ್ರಾಹ ತುರಶ್ರುತಿಶ್ಚ ।

ವಿಮುಕ್ತನಾದ ಬ್ರಹ್ಮನೇ ಲೋಕಗಳಿಗೆ (ಮುಕ್ತರಿಗೆ) ಅಧಿಪತಿಯು ಆಗುವನು ಎಂದು ತುರಶ್ರುತಿಯೂ ಹೇಳುತ್ತದೆ. ಆದ್ದರಿಂದ ಎಲ್ಲ ಮುಕ್ತರಿಗಿಂತ ಉತ್ತಮನಾದ ಬ್ರಹ್ಮನಿಗೆ ಉತ್ತಮರಾದ ಲೋಕಾಭಿಮಾನಿಗಳಾದ ಮುಕ್ತರಾದ ದೇವತೆಗಳನ್ನು ಕುರಿತು ನಿಯಾಮಕತ್ವವು ಯುಕ್ತವೇ ಆಗಿದೆ.

ಹೀಗೆ ತಮ್ಮ ಮತದಿಂದ ಶ್ರುತಿಯನ್ನು ವ್ಯಾಖ್ಯಾನಮಾಡಿ, 'ಆದಿತ್ಯಮಂಡಲದಲ್ಲಿ ಪರಮೇಶ್ವರನನ್ನು ಉಪಾಸನೆ ಮಾಡಿದ ಜ್ಞಾನಿಗೆ ಪರಲೋಕಾಧಿಪತ್ಯವು ಬರುತ್ತದೆ, ಕಣ್ಣಿನಲ್ಲಿ ಉಪಾಸನೆ ಮಾಡಿದ ಜ್ಞಾನಿಗೆ ಅರ್ವಾಕ್ತನ ಲೋಕಾಧಿಪತ್ಯವು ಬರುತ್ತದೆ' ಎಂದು ಪರರು ಮಾಡಿದ ವ್ಯಾಖ್ಯಾನವನ್ನು ನಿರಾಕರಿಸುತ್ತಾರೆ –

ನ ಚೇಹ ವಿಜ್ಞಾನಫಲಂ ಸಮುಕ್ತಂ

ಲೋಕಾಧಿಪತ್ಯಂ ರವಿಬಿಂಬಗೇ ಹರೌ ॥ ೧೦ ॥

ಉಕ್ತಂ ಪೃಥಕ್ ತಚ್ಚ ಪುರೈವ ಯಸ್ಮಾತ್

ಭೇದೋಽಮುನೇತ್ಯಾದಿ ಚ ಸಮ್ಯಗುಕ್ತಃ ।

ಈ ಶ್ರುತಿಯಲ್ಲಿ ಲೋಕಾಧಿಪತ್ಯವು ಜ್ಞಾನದ ಫಲವೆಂದು ಚೆನ್ನಾಗಿ ಹೇಳಲ್ಪಟ್ಟಿದೆ ಎಂಬ ವ್ಯಾಖ್ಯಾನ ಸರಿಯಲ್ಲ. ಏಕೆಂದರೆ ಲೋಕಾಧಿಪತ್ಯವು ಪೂರ್ವವಾಕ್ಯದಲ್ಲಿಯೇ ಸೂರ್ಯಬಿಂಬದಲ್ಲಿರತಕ್ಕ ಹರಿಯಲ್ಲಿಯೂ ಕಣ್ಣಿನಲ್ಲಿರತಕ್ಕ ಹರಿಯಲ್ಲಿಯೂ ಕೂಡ ಪ್ರತ್ಯೇಕವಾಗಿ ಹೇಳಲ್ಪಟ್ಟಿದೆ. ಸಮಸ್ತಲೋಕಾಧಿಪತ್ಯವು ಭಗವದ್ಧರ್ಮವೆಂದು ಅಲ್ಲಿಯೇ ಹೇಳಿರುವುದರಿಂದ ಅದು ಜ್ಞಾನಿಗೆ ಕೂಡುವುದಿಲ್ಲ. ಭಗವದ್ಧರ್ಮವೂ ಜ್ಞಾನಿಗೆ ಬರುತ್ತದೆ ಎಂದು ಅಂಗೀಕರಿಸಿದರೆ ದೋಷ ಬರುತ್ತದೆ. ಏಕೆಂದರೆ ಜ್ಞಾನಿಗೆ ಪರಮೇಶ್ವರನ ದೆಶೆಯಿಂದ ಭೇದವಾದರೂ ಅಮುನೇತ್ಯಾದಿ ವಾಕ್ಯದಿಂದ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಪರಮಾತ್ಮನ ಸ್ವರೂಪನೇ ಆದವನಿಗೆ ಅವನ ಪ್ರಸಾದದಿಂದ ಅವನ ಧರ್ಮತ್ವವು ಬರುವುದಿಲ್ಲವಷ್ಟೆ.

ಅಮುನಾ ಎನ್ನುವುದಕ್ಕೆ ಪ್ರಸನ್ನನಾದ ಹರಿಯ ನಿಮಿತ್ತದಿಂದ ಎಂದು ವ್ಯಾಖ್ಯಾನ ಮಾಡುವುದಾದರೆ ಅದು ಜೀವೇಶ್ವರ ಭೇದಪರವಾಗುತ್ತಿತ್ತು. ನಾವು ಹಾಗೆ ವ್ಯಾಖ್ಯಾನಮಾಡುವುದಿಲ್ಲ. ಈ ರೂಪದಿಂದ ಈ ಶ್ರೀಹರಿಯ ತಾದಾತ್ಮ್ಯ ಹೊಂದಿ, ಹಾಗೆಯೇ ಈ ರೂಪದಿಂದ ಈ ಶ್ರೀಹರಿಯ ತಾದಾತ್ಮ್ಯ ಹೊಂದಿ ಎಂದು ವ್ಯಾಖ್ಯಾನ ಮಾಡುತ್ತೇವೆ. ಹೀಗೆ ಮಾಡುವುದರಿಂದ ಈ ವಾಕ್ಯವು ಭೇದಪರವೆಂದು ಆಗುವುದಿಲ್ಲ ಎಂದರೆ –

ತ್ವಪ್ರತ್ಯಯಂ ಚಾಪ್ಯತಿಹಾಯ ನೈವ

ರೂಪೇಣ ತೇನೇತಿ ಭವೇದಿಹಾರ್ಥಃ ॥ ೧೧ ॥

ತ್ವಪ್ರತ್ಯಯವನ್ನೂ, ಅದಕ್ಕೆ ಸಮಾನಾರ್ಥಕ ತಲ್ ಪ್ರತ್ಯಯವನ್ನೂ ಬಿಟ್ಟು, ಈ ಶ್ರುತಿಯಲ್ಲಿ ತೇನ ರೂಪೇಣ ಎನ್ನುವುದಕ್ಕೆ ಅಮುನಾ ರೂಪೇಣ ಅನೇನ ರೂಪೇಣ ಎಂಬುದಾಗಿ ಅಭೇದಪರವಾದ ಅರ್ಥವು ಸರ್ವಥಾ ಆಗಲಾರದು. ಹಿಂದೆ ಹೇಳಿದ ಶ್ರುತಿಯಲ್ಲಿ ಐಕ್ಯಜ್ಞಾಪಕವಾದ ತ್ವಪ್ರತ್ಯಯವಾಗಲೀ ರೂಪಶಬ್ದವಾಗಲೀ ಇಲ್ಲ.

ಹಾಗಾದರೆ ಭಾವಪ್ರಧಾನ ನಿರ್ದೇಶಗಳು ಬಹಳ ಕಡೆಗಳಲ್ಲಿ ಕಂಡುಬರುತ್ತವೆ. ಆದಕಾರಣ ಭಾವಾರ್ಥಕ ಪ್ರತ್ಯಯವಿಲ್ಲದಿದ್ದರೂ ಅಭೇದ ಪ್ರತಿಪಾದಕ ಅರ್ಥವು ಆಗುವುದು. ಅಧ್ಯಾಹಾರವುಳ್ಳ (ಸೂಕ್ತ ಶಬ್ದಗಳನ್ನು ಕೂಡಿಸಿಕೊಂಡು ಪಠಿಸಬೇಕಾದ) ವಾಕ್ಯಗಳೂ ಇರುತ್ತವೆ. ಆದ್ದರಿಂದ ರೂಪೇಣ ಇತ್ಯಾದಿ ಪದಗಳ ಅಧ್ಯಾಹಾರವನ್ನು ಮಾಡಲಿಕ್ಕೆ ಬರುತ್ತದೆ. ಆದ್ದರಿಂದ ನಮ್ಮ ವ್ಯಾಖ್ಯಾನದಲ್ಲಿ ದೋಷವಿಲ್ಲ ಎಂದರೆ – ವಾಕ್ಯಾರ್ಥವು ನಿಶ್ಚಿತವಾಗಿದ್ದರೆ ಅಧ್ಯಾಹಾರಾದಿಗಳು ಕೂಡುತ್ತದೆ. ಐಕ್ಯನಿಶ್ಚಾಯಕ ಪದಗಳು ಇಲ್ಲಿ ಯಾವುದೂ ಇಲ್ಲ ಎಂಬ ಅಭಿಪ್ರಾಯದಿಂದ ದೋಷಾಂತರವನ್ನು ಹೇಳುತ್ತಾರೆ –

ಭವತ್ಯಸಾವಿತ್ಯಣುಶಬ್ದಮತ್ರ

ವಿಹಾಯ ವಾಕ್ಯಾನಿ ಬಹೂನಿ ದೋಷಃ ।

ಈ ಶ್ರುತಿಯಲ್ಲಿ ಜ್ಞಾನಿಗೆ ಪರಮೇಶ್ವರನ ತಾದಾತ್ಮ್ಯಪ್ರಾಪ್ತಿಯಾಗುವುದರಿಂದ ಸರ್ವಲೋಕಾಧಿಪತ್ಯವು ಆಗುವುದು ಎಂಬ ಅರ್ಥವು ವಿವಕ್ಷಿತವಿದ್ದರೆ, ಆಗ ಈ ಅರ್ಥವನ್ನು ಪ್ರತಿಪಾದಿಸುವ ವಿಷಯದಲ್ಲಿ ಈ ಜ್ಞಾನಿಯು ಈ ಪರಮಾತ್ಮನು ಆಗುತ್ತಾನೆ ಎಂದೇ ಹೇಳಬೇಕಿತ್ತು. ಸೋऽಮುನೈವ ಇತ್ಯಾದಿ ಹೇಳಬೇಕಿರಲಿಲ್ಲ. ಅಯಮಸೌ ಭವತಿ ಎನ್ನುವ ಅಲ್ಪ ಶಬ್ದವನ್ನು ಬಿಟ್ಟು ಅನೇಕ ವಾಕ್ಯಗಳನ್ನು ಪ್ರಯೋಗ ಮಾಡುವ ಶ್ರುತಿಗೆ ಅಕುಶಲತ್ವ ರೂಪವಾದ ದೋಷವು ಬರುವುದು. ಅಲ್ಪವಾದ ಪ್ರಯತ್ನದಿಂದಲೇ ಸಿದ್ಧಿಸತಕ್ಕ ಅರ್ಥದಲ್ಲಿ ಮಹಾಪ್ರಯತ್ನವನ್ನು ಯಾವ ಬುದ್ಧಿವಂತನೂ ಮಾಡುವುದಿಲ್ಲ. ಅಂತಹ ಪುರುಷನು ಯಾರಿಂದಲೂ ಗೌರವಕ್ಕೆ ಅರ್ಹನಾಗುವುದಿಲ್ಲ.

ಅಪವ್ಯಾಖ್ಯಾನ ನಿರಾಕರಣೆಯನ್ನು ಉಪಸಂಹರಿಸುತ್ತ ಪಾದಾರ್ಥವನ್ನು ಸಂಕ್ಷಿಪ್ತವಾಗಿ ಹೇಳುತ್ತಾರೆ –

ಅತೋ ಜಗದ್ವ್ಯಾಪೃತಿಮಂತ ಏವ

ಬ್ರಹ್ಮಾದಯಃ ಪೂರ್ಣಗುಣಾಃ ಕ್ರಮೇಣ ॥ ೧೨ ॥

ಅಮಂದಮಾನಂದಮಜಸ್ರಮೇವ ।

ಭುಂಜಂತ ಆತ್ಮೀಯಮಜಾತ್ಸಮಾಸತೇ ॥ ೧೩ ॥

ಆದ್ದರಿಂದ ಮುಕ್ತರಾದ ಬ್ರಹ್ಮಾದಿಗಳು ಜಗತ್ತಿನ ವ್ಯಾಪಾರವುಳ್ಳವರೇ. ಅಂದರೆ ತಮ್ಮೊಂದಿಗೆ ಮುಕ್ತಿಯನ್ನು ಹೊಂದಿದ ತಮಗಿಂತ ಅವರರಿಗೆ ನಿಯಾಮಕರು. ಕ್ರಮದಿಂದ ಪೂರ್ಣಗುಣವುಳ್ಳವರು. ಪೂರ್ಣವಾದ ತಮ್ಮದೇ ಆದ ಆನಂದವನ್ನು (ಪರಮಾತ್ಮನ ಆನಂದವನ್ನಲ್ಲ) ನಿರಂತರದಲ್ಲಿಯೂ ಶ್ರೀಹರಿಯ ಪ್ರಸಾದದಿಂದ ಅನುಭವಿಸುತ್ತ ಆ ಪರಮೇಶ್ವರನೊಂದಿಗೇ ವೈಕುಂಠಾದಿ ಲೋಕಗಳಲ್ಲಿ ಇರುತ್ತಾರೆ.

ಈ ರೀತಿಯಾಗಿ ಗ್ರಂಥವನ್ನು ಪರಿಸಮಾಪ್ತಿಗೊಳಿಸಿದ ಶ್ರೀಮದಾಚಾರ್ಯರು ತಾವು ಪ್ರತಿಪಾದಿಸಿದ ಶುಭಧರ್ಮಗಳುಳ್ಳ, ತನಗೆ ಅತಿಶುದ್ಧವೂ ಅನಾದಿಯೂ ಆದ ಸಾರ್ವಜ್ಞ್ಯಪ್ರದನಾದ, ನಿರುಪಾಧಿಕನಾದ ಅಂದರೆ ಮೋಕ್ಷಾದಿಫಲಾಂತರ ಉಪಾಧಿ ರಹಿತನಾದ, ಪರಮಪ್ರೇಮಾಸ್ಪದವಾದ ಗುಣಗಣಯುಕ್ತನೂ ಪುರುಷೋತ್ತಮನೂ ಆದ ಶ್ರೀನಾರಾಯಣನನ್ನು ಮತ್ತೆ ಮತ್ತೆ ನಮಸ್ಕರಿಸುತ್ತಾರೆ –

ನಮೋ ನಮೋऽಶೇಷವಿಶೇಷಪೂರ್ಣ–

ಗುಣೈಕಧಾಮ್ನೇ ಪುರುಷೋತ್ತಮಾಯ ।

ಭಕ್ತಾನುಕಂಪಾದತಿಶುದ್ಧಸಂವಿ–

ದ್ದಾತ್ರೇऽನುಪಾಧಿಪ್ರಿಯಸದ್ಗುಣಾತ್ಮನೇ ॥ ೧೪ ॥

ಅಶೇಷವಿಶೇಷಗಳಿಂದ ಪೂರ್ಣಗಳಾದ ಗುಣಗಳಿಗೆ ಮುಖ್ಯ ಆಶ್ರಯನಾದ, ಭಕ್ತನಾದ ನನ್ನಲ್ಲಿ ದಯೆಯಿಂದ ಅತಿಶುದ್ಧವಾದ ಜ್ಞಾನವನ್ನು ಕೊಡತಕ್ಕ, ಉಪಾಧಿ ರಹಿತವಾದ ಪ್ರಿಯವಾದ ಸದ್ಗುಣಸ್ವರೂಪನಾದ ಕ್ಷರಾಕ್ಷರಪುರುಷೋತ್ತಮನಾದ ಶ್ರೀನಾರಾಯಣನಿಗೆ ಮತ್ತೆ ಮತ್ತೆ ನಮಸ್ಕಾರವು.

ಭಗವಂತನ ಸ್ವರೂಪಜ್ಞಾನವು ಹೇಗೆ ಸಮಸ್ತ ಪರುಷಾರ್ಥಗಳಿಗೆ ಸಾಧನವೋ, ಹಾಗೆಯೇ ತನ್ನ ಸ್ವರೂಪಜ್ಞಾನವೂ ಕೂಡ ಶಿಷ್ಯರಿಗೆ ಮೋಕ್ಷಾದಿ ಪುರಷಾರ್ಥ ಸಾಧನ ಎಂಬ ಅಭಿಪ್ರಾಯದಿಂದ ಶ್ರೀಮದಾಚಾರ್ಯರು ತಮ್ಮ ಸ್ವರೂಪವನ್ನು ಆವಿಷ್ಕರಿಸಿ ಹೇಳುತ್ತಾರೆ –

ಯಸ್ಯ ತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ

ಬಟ್ ತದ್ದರ್ಶತಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋ ಮಹತ್ ।

ವಾಯೋ ರಾಮವಚೋನಯಂ ಪ್ರಥಮಕಂ ಪೃಕ್ಷೋ ದ್ವಿತೀಯಂ ವಪುಃ

ಮಧ್ವೋ ಯತ್ತು ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ ॥ ೧೫ ॥

ಬಳಿತ್ಥಾ ಇತ್ಯಾದಿ ವೇದವಚನದಲ್ಲಿ ಯಾವ ವಾಯುದೇವರ ಅತ್ಯದ್ಭುತವಾದ ಮಂಗಲಕರವಾದ ಮೂರು ರೂಪಗಳು ಹೇಳಲ್ಪಟ್ಟಿವೆಯೋ ಅದೇ ವಾಯುವಿನ ಅವತಾರವಾದ ನಮ್ಮಿಂದ ಕೇಶವನನ್ನು ಕುರಿತು ಈ ಗ್ರಂಥವು ರಚಿಸಲ್ಪಟ್ಟಿದೆ.

ಆ ವಾಯುದೇವರ ಮೂಲರೂಪ ಹಾಗೂ ಮೂರು ಅವತಾರ ರೂಪಗಳು ಯಾವ ಪ್ರಕಾರವಾಗಿವೆ ಎಂಬುದನ್ನು ಬಟ್ ಇತ್ಯಾದಿಯಾಗಿ ಹೇಳುತ್ತಾರೆ –

ಆ ವಾಯುದೇವರ ಮೂಲರೂಪವೂ ಅವತಾರರೂಪಗಳೂ ಬಲಾತ್ಮಕವೂ ಜ್ಞಾನರೂಪವೂ ಆಗಿವೆ. (ಇದರಿಂದ ವಾಯು ಶಬ್ದದ ನಿರ್ವಚನವಾಯಿತು. ವ ಶಬ್ದ ಬಲವಾಚಕ, ಅಯ ಶಬ್ದ ಗತ್ಯರ್ಥಕ. ಗತಿ ಎಂದರೆ ಅವಗತಿ ಅಥವಾ ಜ್ಞಾನ. ಆದ್ದರಿಂದ ಗತ್ಯರ್ಥಕವೆಂದರೆ ಜ್ಞಾನಾರ್ಥಕವು ಎಂದರ್ಥ. ವಶ್ಚಾಸೌ ಆಯುಶ್ಚೇತಿ ವಾಯುಃ). ಭರಣಗಮನಗಳ ಯೋಗದಿಂದ ಯಾವುದು ಭರ್ಗಶಬ್ದವಾಚ್ಯವೋ ಅದೇ ವಾಯು ಶಬ್ದವಾಚ್ಯವು. ಧಾತುಗಳಿಗೆ ಅನೇಕಾರ್ಥವಿರುವುದರಿಂದ ವಾ ಧಾತುವು ಭರಣಾರ್ಥದಲ್ಲಿಯೂ ಇದೆ. ಆದ್ದರಿಂದ ಭರ್ಗ ಶಬ್ದವೂ ವಾಯುಶಬ್ದಕ್ಕೆ ವ್ಯಾಖ್ಯಾನವು. ಈ ರೂಪವು ಮಹನೀಯವು ಅಂದರೆ ಶ್ರೇಷ್ಠವಾದುದು. (ವಯಃ ಶ್ರೇಷ್ಠತ್ವೇ ಎನ್ನುವುದರಿಂದ ಮಹತ್ ಶಬ್ದವು ವಾಯು ಶಬ್ದಕ್ಕೆ ವ್ಯಾಖ್ಯಾನವು). ವಿಷ್ಣುವಿನಿಂದ ಪ್ರೇರಿತವಾದ ವಾಯುದೇವರ ಮೂರು ಅವತಾರ ರೂಪಗಳೂ ಹೀಗೆಯೇ ಗುಣಭರಿತವಾಗಿವೆ. ಯಾವ ವಾಯುದೇವರ ಮೊದಲನೆಯದಾದ ಹನುಮದ್ರೂಪವು ರಾಮದೇವರ ವಚನವನ್ನು ಸೀತೆಗೆ ಮುಟ್ಟಿಸಿತೋ (ಅಥವಾ ರಾಮವಿಷಯಕವಾದ ಮೂಲರಾಮಾಯಣಾದಿ ವಚನಗಳನ್ನು ಶಿಷ್ಯರಲ್ಲಿ

ಪ್ರವರ್ತಿಸಿತೋ), ಎರಡನೆಯದಾದ ಭೀಮಾಖ್ಯ ರೂಪವು ದುರ್ಯೋಧನಾದಿ ಶತ್ರುಗಳ ಸೈನ್ಯವನ್ನು ನಾಶಮಾಡಿದ್ದರಿಂದ ಪೃಕ್ಷ ಶಬ್ದವಾಚ್ಯವೋ (ಪೃತನಾ ಎಂದರೆ ಸೈನ್ಯ, ಪೃತನಾಕ್ಷಯಕಾರೀತಿ ಪೃಕ್ಷಃ), ಮೂರನೆಯ ಅವತಾರವು ದೇಶಕಾಲಗಳಿಂದ ಸನ್ನಿಕೃಷ್ಟವಾದ ವೇದೋಕ್ತ ಮಧ್ವಾಭಿಧೇಯವಾದ ರೂಪವು ಸುಖಸಾಧನವಾದ ಶಾಸ್ತ್ರವನ್ನು ನಿರ್ಮಾಣ ಮಾಡಿದ್ದರಿಂದ ಆನಂದತೀರ್ಥವೆಂದೂ ಪ್ರಸಿದ್ಧವೋ ಅಂತಹ ಮೂರನೆಯ ಅವತಾರರಾದ ನಮ್ಮಿಂದ ಬ್ರಹ್ಮಸೂತ್ರಾನುವ್ಯಾಖ್ಯಾನವೆಂಬ ಈ ಗ್ರಂಥವು ಕೇಶವನ ಪ್ರೀತಿಗಾಗಿ ಮಾಡಲ್ಪಟ್ಟಿತು.

ಭಗವತ್ಸ್ವರೂಪ ಪ್ರತಿಪಾದನೆಯಿಂದಲೇ ಗ್ರಂಥೋಪಸಂಹಾರವು ಅತ್ಯಂತ ಉಚಿತವು ಎಂಬ ಅಭಿಪ್ರಾಯದಿಂದ ತಮಗೆ ನಿತ್ಯದಲ್ಲಿಯೂ ಅಪರೋಕ್ಷನಾದ ಭಗವಂತನನ್ನು ಸಂಭೋದಿಸಿ ಸುತ್ತಿಸುತ್ತಾರೆ –

ನಿಃಶೇಷದೋಷರಹಿತ ಕಲ್ಯಾಣಾಖಿಲಸದ್ಗುಣ ।

ಭೂತಿಸ್ವಯಂಭುಶರ್ವಾದಿವಂದ್ಯಂ ತ್ವಾಂ ನೌಮಿ ಮೇ ಪ್ರಿಯಮ್ ।। ೧೬ ।।

ಅಶೇಷಗಳಾದ ದೋಷಗಳಿಂದ ರಹಿತನೂ, ಮಂಗಲಕರವಾದ ಸಕಲ ಸದ್ಗುಣ ಸ್ವರೂಪನೂ, ಮಹಾಲಕ್ಷ್ಮಿ ಬ್ರಹ್ಮ, ರುದ್ರ ಮೊದಲಾದವರಿಂದ ವಂದ್ಯನೂ, ನನಗೆ ಪ್ರಿಯನೂ ಆದ ಹೇ ನಾರಾಯಣನೇ ನಿನ್ನನ್ನು ಯಾವಾಗಲೂ ನಮಸ್ಕರಿಸುತ್ತೇನೆ.

।। ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ

ಶ್ರೀಮದನುವ್ಯಾಖ್ಯಾನೇ ಚತುರ್ಥಾಧ್ಯಾಯಸ್ಯ ಚತುರ್ಥಃ ಪಾದಃ ।।

।। ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಪಾದದ

ಕನ್ನಡಾನುವಾದವು ಮುಕ್ತಾಯವಾಯಿತು ।।

।। ನಾಲ್ಕು ಅಧ್ಯಾಯಗಳ ಶ್ರೀಮದನುವ್ಯಾಖ್ಯಾನ ಗ್ರಂಥದ ಎಲ್ಲ ಮೂಲ ಶ್ಲೋಕಗಳ ಸಹಿತ ಕನ್ನಡಾನುವಾದವು ಇಲ್ಲಿಗೆ ಮುಕ್ತಾಯವಾಯಿತು ।।

ಶ್ರೀಮನ್ನ್ಯಾಯಸುಧಾದ ಅಂತಿಮ ಮಂಗಲಶ್ಲೋಕಗಳು

ವಚನಪ್ರಸೂನಮಾಲಾ ಜಯತೀರ್ಥಾಖ್ಯೇನ ಭಿಕ್ಷುಣಾ ರಚಿತಾ ।

ಧ್ರಿಯತಾಂ ಹೃದಯೇ ಸದಯೇ ಕಮಲಾಮಹಿಲೇನ ಪೂರುಷೇಣ ।।೧।।

ನ ವೈದುಷ್ಯಭ್ರಾಂತ್ಯಾ ನ ಚ ವಚನ ಚಾತುರ್ಯಕೃಧಿಯಾ

ನ ಮಾತ್ಸರ್ಯಾವೇಶಾನ್ನ ಚ ಚಪಲತಾದೋಷವಶತಃ ।

ಪರಂ ಶ್ರದ್ಧಾಜಾಡ್ಯಾದಕೃಷಿ ಕೃತಿಮಾಚಾರ್ಯವಚಸಿ

ಸ್ಖಲನ್ನಪ್ಯೇತಸ್ಮಾಜ್ಜಗತಿ ನ ಹಿ ನಿಂದ್ಯೋಽಸ್ಮಿ ವಿದುಷಾಮ್ ।।೨।।

ಅನುವ್ಯಾಖ್ಯಾಽಮೃತಾಂಭೋಧೇಃ ಸಮುತ್ಪನ್ನಾಽತಿನಿರ್ಮಲಾ ।
ಇಯಂ ನ್ಯಾಯಸುಧಾ ಭೌಮೈರ್ವಿಬುಧೈಃ ಸೇವ್ಯತಾಂ ಸದಾ ॥೩॥

ಇತಿ ಶ್ರೀಮತ್ಪೂರ್ಣಪ್ರಮತಿಭಗವತ್ಪಾದಸುಕೃತೇ-
ರನುವ್ಯಾಖ್ಯಾನಸ್ಯ ಪ್ರಗುಣಜಯತೀರ್ಥಾಖ್ಯಯತಿನಾ ।
ಕೃತಾಯಾಂ ಟೀಕಾಯಾಂ ವಿಷಮಪದವಾಕ್ಯಾರ್ಥವಿವೃತೌ
ಚತುರ್ಥೇಽಧ್ಯಾಯೇಽಸ್ಮಿಂಶ್ಚರಮಚರಣಃ ಪರ್ಯವಸಿತಃ ॥೪॥

ಶ್ರೀಮನ್ನ್ಯಾಯಸುಧಾಪರಿಮಳದ ಅಂತಿಮ ಮಂಗಲಶ್ಲೋಕಗಳು

ಸರ್ವೇಂದ್ರಿಯಪ್ರೇರಕೇಣ ಶ್ರೀಪ್ರಾಣಪತಿನೇರಿತಃ ।
ಯದವೋಚಮಹಂ ತೇನ ಪ್ರೀಯತಾಂ ಕಮಲಾಲಯಃ ॥೧॥

ಯೇ ತು ನ್ಯಾಯಸುಧಾಪಾನಕಾಮುಕಾ ರಸಿಕಾ ಬುಧಾಃ ।
ಆಘ್ರಾಯೇಮಂ ಪರಿಮಲಂ ಸೇವತಾಂ ತೇ ಸುಧಾಮಿಮಾಮ್ ॥೨॥

ಜ್ಞಾನಾಬ್ಧಿರಪ್ಯವಾದೀದ್ಯತ್ಸ್ಖಲತ್ವಂ ಸ್ವಾತ್ಮನಸ್ತದಾ ।
ಮಾದೃಶಾನಾಂ ಸ್ಖಲತ್ವಂ ಕಿಂ ವಾಚ್ಯಂ ಕ್ಷಮ್ಯಂತು ತದ್ಬುಧಾಃ ॥೩॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅಂಗಾರಕುಲೋತ್ಪನ್ನ ಶ್ರೀನಿವಾಸಮೂರ್ತಿಯವರ ಸುಪುತ್ರ ವೆಂಕಟೇಶಮೂರ್ತಿಯು ಶ್ರೀಮನ್ನ್ಯಾಯಸುಧಾಪರಿಮಳಾನುಸಾರಿ ಕನ್ನಡದಲ್ಲಿ ಅರ್ಥ ಹಾಗೂ ವಿವರಣೆ ಸಹಿತ ರಚಿಸಿ ಪ್ರಕಟಿಸಿದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ ಶ್ರೀಮದನುವ್ಯಾಖ್ಯಾನ ಗ್ರಂಥವು ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀ ವೆಂಕಟೇಶನ ಪಾದಾರವಿಂದಗಳಲ್ಲಿ ಭಕ್ತಿಪೂರ್ವಕವಾಗಿ ಸಮರ್ಪಿತವಾದುದು

॥ ಶ್ರೀಮದ್ವೇಶನು ಪ್ರೀತನಾಗಲಿ ॥

* * *

ಮಿಥ್ಯಾಸಿದ್ಧಾಂತದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ।
ಜಯತೀರ್ಥಾಖ್ಯ ತರಣಿರ್ಭಾಸತಾಂ ನೋ ಹೃದಂಬರೇ ॥



ಶ್ರೀ ಜಯತೀರ್ಥರು

ಪ್ರಕಾಶಕರು :

ಪವನಜ ಪ್ರಕಾಶನ

ನಂ. 1625, 5ನೇ 'ಬಿ' ಕ್ರಾಸ್, ಎರಡನೆಯ ಬ್ಲಾಕ್
ಬನಶಂಕರಿ 1ನೇ ಸ್ಟೇಜ್, ಬೆಂಗಳೂರು-560 050
ದೂರವಾಣಿ : 6600932